ಸಂಪುಟ 7, ಸಂಚಿಕೆ 10

ನವೆಂಬರ್ 16-30, 2026

ಉಚಿತ ವಿತರಣೆಗಾಗಿ

ನ್ಯೂ ಇಂಡಿಯಾ ಸಮಾಚಾರ



12ನೇ ಸಂವಿಧಾನ ದಿನ

ವಿಸ್ಮೃತಿಯಿಂದ ಸಂಭ್ರಮಾಚರಣೆಯತ್ತ

ಒಂದು ಕಾಲದಲ್ಲಿ ಇತಿಹಾಸದ ಪುಟಗಳ ಅಂಚಿಗೆ ಸರಿದುಹೋಗಿದ್ದ ನವೆಂಬರ್ 26ರ ದಿನಾಂಕವು ಇಂದು ದೇಶಾದ್ಯಂತ ಸಂಭ್ರಮದ ಆಚರಣೆಯಾಗಿ ರೂಪುಗೊಂಡಿದೆ. ಭಾರತವು 12ನೇ ಸಂವಿಧಾನ ದಿನವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ, 77 ವರ್ಷಗಳ ಪಯಣವು ನಮ್ಮ ಸಂವಿಧಾನದ ಅಚಲ ಚೈತನ್ಯಕ್ಕೆ ಸಾಕ್ಷಿಯಾಗಿದೆ. 'ಭಾರತದ ಪ್ರಜೆಗಳಾದ ನಾವು' ಎಂಬುದು ಇನ್ನು ಮುಂದೆ ಸಂವಿಧಾನದ ಪ್ರಸ್ತಾವನೆಯಲ್ಲಿರುವ ಕೇವಲ ಒಂದು ಪದಗುಚ್ಛವಲ್ಲ; ನ್ಯಾಯ, ಸಮಾನತೆ ಮತ್ತು ಸ್ವಾವಲಂಬನೆಯ ಆಶಯಗಳಲ್ಲಿ ಪ್ರತಿಫಲಿಸುವ, 140 ಕೋಟಿ ಭಾರತೀಯರು ತಮ್ಮದಾಗಿಸಿಕೊಂಡಿರುವ ಜೀವಂತ ಬದ್ಧತೆಯಾಗಿ ರೂಪುಗೊಂಡಿದೆ.



ಮನ್ ಕಿ ಬಾತ್
ಲೋಕ-ಶಕ್ತಿಗೆ ನಮನ

'ಮನ್ ಕಿ ಬಾತ್' ಕಾರ್ಯಕ್ರಮವು 12 ವರ್ಷಗಳ ಹಿಂದೆ ವಿಜಯದಶಮಿಯ ಶುಭ ಸಂದರ್ಭದಲ್ಲಿ ಆರಂಭವಾಯಿತು. ಅಂದಿನಿಂದ ಈ ಪಯಣ ನಿರಂತರವಾಗಿ ಮುಂದುವರಿದಿದೆ. ಈ ಪಯಣದಲ್ಲಿ ದೇಶದ ಜನರೇ ಸಹಪಯಣಿಗರೂ ಮಾರ್ಗದರ್ಶಕರೂ ಆಗಿದ್ದಾರೆ. ಸಾಮಾನ್ಯ ನಾಗರಿಕರ ಪರಿಶ್ರಮ, ಶೌರ್ಯ, ಬದ್ಧತೆ, ಸಮರ್ಪಣೆ ಮತ್ತು ಸೇವಾ ಮನೋಭಾವವನ್ನು ಗೌರವಿಸಿ ಸಂಭ್ರಮಿಸಲು 'ಮನ್ ಕಿ ಬಾತ್' ಒಂದು ಅದ್ಭುತ ಅವಕಾಶವಾಗಿದೆ. ಅಕ್ಟೋಬರ್ 25ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ತಮ್ಮ ಪಾಲಿಗೆ 'ಮನ್ ಕಿ ಬಾತ್' ಕಾರ್ಯಕ್ರಮವು ಒಂದು 'ತೀರ್ಥಯಾತ್ರೆ'ಯಂತಿದ್ದು, ಜನರ ಪ್ರಯತ್ನಗಳನ್ನು ಹತ್ತಿರದಿಂದ ಅರಿತುಕೊಳ್ಳಲು ಮತ್ತು ಅವರ ಕೊಡುಗೆಗಳಿಗೆ ಗೌರವ ಸಲ್ಲಿಸಲು ಇದು ಅವಕಾಶ ಕಲ್ಪಿಸುತ್ತದೆ ಎಂದು ಹೇಳಿದರು.

- **ಅಸಂಖ್ಯಾತ ಸ್ಫೂರ್ತಿದಾಯಕ ಕಥೆಗಳು:** ಕಳೆದ 12 ವರ್ಷಗಳಲ್ಲಿ ದೇಶದ ಮೂಲೆಮೂಲೆಗಳಿಂದ ಅನೇಕ ವ್ಯಕ್ತಿಗಳು ಮುನ್ನೆಲೆಗೆ ಬಂದಿದ್ದಾರೆ. ಅವರಲ್ಲಿ ಸಮಾಜದ ಗಮನಕ್ಕೆ ಬಾರದೆ ಉಳಿದಿರುವ ಅಸಾಧಾರಣ ಕಾರ್ಯಗಳನ್ನು ಮಾಡುತ್ತಿರುವವರೂ ಇದ್ದಾರೆ. ಇಂತಹ ಅಸಂಖ್ಯಾತ ಸ್ಫೂರ್ತಿದಾಯಕ ಕಥೆಗಳನ್ನು ನಿಮ್ಮೆಲ್ಲರ ಮುಂದೆ ತರುವ ಕೆಲಸವನ್ನು 'ಮನ್ ಕಿ ಬಾತ್' ಮಾಡಿದೆ.

- **ಲೋಕ-ಶಕ್ತಿಗೆ ನಮನ:** ಒಂದು ರೀತಿಯಲ್ಲಿ ಹೇಳುವುದಾದರೆ, ನಮ್ಮ ದೇಶದ ಜನರ 'ಸಾಮೂಹಿಕ ಶಕ್ತಿ'ಯಾದ ಲೋಕಶಕ್ತಿಗೆ ನಾನು ನಮನ ಸಲ್ಲಿಸುತ್ತಿದ್ದೇನೆ. ದೇಶದ ಪ್ರತಿಯೊಂದು ಕುಟುಂಬದೊಂದಿಗೂ ಸಂಪರ್ಕ ಸಾಧಿಸಲು ಇದು ನನಗೆ ಅವಕಾಶ ಒದಗಿಸುತ್ತದೆ.

- **ಖೇತಿ ವಿರಾಸತ್ ಮಿಷನ್:** ಪಂಜಾಬ್‌ನಲ್ಲಿ ಇಂತಹ ಒಂದು ಉಪಕ್ರಮ ಕೆಲವು ಸಮಯದಿಂದ ಕಾರ್ಯನಿರ್ವಹಿಸುತ್ತಿದೆ. 'ಖೇತಿ ವಿರಾಸತ್ ಮಿಷನ್' ಎಂಬ ಸಂಸ್ಥೆಯು ಸಾವಯವ ಕೃಷಿ ಮತ್ತು ಸಾಂಪ್ರದಾಯಿಕ ಕೃಷಿ ಪದ್ಧತಿಗಳಿಗೆ ಹೊಸ ಚೈತನ್ಯ ತುಂಬುವ ಕಾರ್ಯದಲ್ಲಿ ತೊಡಗಿದೆ.

- **ಹೆವಲ್ ನದಿಯ ಪುನರುಜ್ಜೀವನ:** ಪ್ರಕೃತಿಯನ್ನು ಗೌರವಿಸುವುದು ನಮ್ಮ ಬಹುಕಾಲದ ಪರಂಪರೆಯಾಗಿದೆ. ಇದೇ ಮನೋಭಾವ ಉತ್ತರಾಖಂಡದ ತೆಹ್ರಿ ಗರ್ವಾಲ್ ಪ್ರದೇಶದಲ್ಲಿಯೂ ಕಂಡುಬರುತ್ತದೆ. ಕೆಲವು ಸಮಯದ ಹಿಂದೆ ಹೆವಲ್ ನದಿಯ ನೀರಿನ ಮಟ್ಟ ಕಡಿಮೆಯಾಗತೊಡಗಿತ್ತು. ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ನೈಸರ್ಗಿಕ ಜಲಮೂಲಗಳೂ ಬತ್ತಿಹೋಗುತ್ತಿದ್ದವು. ಇಂತಹ ಪರಿಸ್ಥಿತಿಯಲ್ಲಿ ಸ್ಥಳೀಯ ಆಡಳಿತ ಮತ್ತು ಗ್ರಾಮಸ್ಥರು ಒಗ್ಗೂಡಿ ಹೆವಲ್ ನದಿಯನ್ನು ಉಳಿಸುವ ಅಭಿಯಾನ ಆರಂಭಿಸಿದರು. ಮಳೆನೀರು ಸಂಗ್ರಹಿಸುವುದು, ಅಂತರ್ಜಲ ಮರುಪೂರಣಕ್ಕೆ ಅನುಕೂಲ ಕಲ್ಪಿಸುವುದು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಡುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಯಿತು. ಇಂದು ಹೆವಲ್ ನದಿಗೆ ಮರುಜೀವ ಬಂದಿದೆ. ಇದರ ಜೊತೆಗೆ, ಹತ್ತಾರು ನೈಸರ್ಗಿಕ ಜಲಮೂಲಗಳ ಪುನರುಜ್ಜೀವನಕ್ಕೂ ಈ ಪ್ರಯತ್ನ ನೆರವಾಗಿದೆ.

- **ವೋಕಲ್ ಫಾರ್ ಲೋಕಲ್:** ಹಬ್ಬದ ಋತುವಿನಲ್ಲಿ ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿ ಬದಲಾವಣೆಯಾಗಿರುವುದನ್ನು ಎಲ್ಲರೂ ಗಮನಿಸಿರಬಹುದು. ಖರೀದಿ ಮಾಡುವಾಗ ಜನರು ಈಗ ಸ್ವದೇಶಿ ಉತ್ಪನ್ನಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. 'ವೋಕಲ್ ಫಾರ್ ಲೋಕಲ್' ಎಂಬ ಈ ಮನೋಭಾವವು ನಮ್ಮ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗಳಿಗೆ ಕೊಂಡೊಯ್ಯುತ್ತಿದೆ.

- **ಖಾದಿ ಮತ್ತು ಗ್ರಾಮೋದ್ಯೋಗ:** ಈ ವರ್ಷ ಗಾಂಧಿ ಜಯಂತಿಯಂದು ಒಂದೇ ದಿನ ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳ ಮಾರಾಟವು ₹28 ಕೋಟಿಯನ್ನು ಮೀರಿದೆ. ಇದು ಹಿಂದಿನ ವರ್ಷಕ್ಕಿಂತ ₹1.5 ಕೋಟಿಯಷ್ಟು ಹೆಚ್ಚಾಗಿದೆ. ಖಾದಿಯ ಜನಪ್ರಿಯತೆ ನಿರಂತರವಾಗಿ ವೃದ್ಧಿಸುತ್ತಿರುವುದಕ್ಕೆ ಇದು ಸಾಕ್ಷಿಯಾಗಿದೆ.

- **ದೇಶದ ಜನರ ವಿಶ್ವಾಸ:** 'ಇ-ಸಂಜೀವಿನಿ' ಯೋಜನೆಯ ಮೂಲಕ ಇಲ್ಲಿಯವರೆಗೆ ಸುಮಾರು 50 ಕೋಟಿ ಟೆಲಿ-ಸಮಾಲೋಚನೆಗಳನ್ನು ನಡೆಸಲಾಗಿದೆ. ತಂತ್ರಜ್ಞಾನದ ಶಕ್ತಿ, ನಮ್ಮ ವೈದ್ಯರ ಸಮರ್ಪಿತ ಸೇವೆ ಮತ್ತು ದೇಶದ ಜನರು ಈ ವ್ಯವಸ್ಥೆಯ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಇದು ಅತ್ಯುತ್ತಮ ಉದಾಹರಣೆಯಾಗಿದೆ.

- **ಆಯುಷ್ಮಾನ್ ಆರೋಗ್ಯ ಮಂದಿರ:** ಇಂದು ದೇಶಾದ್ಯಂತ ಸುಮಾರು 1.9 ಲಕ್ಷ 'ಆಯುಷ್ಮಾನ್ ಆರೋಗ್ಯ ಮಂದಿರಗಳು' ಜನರ ಬದುಕಿಗೆ ಹೊಸ ಆರೋಗ್ಯ ಸೌಲಭ್ಯಗಳನ್ನು ತರುತ್ತಿವೆ. ಈ ಕೇಂದ್ರಗಳು ಗ್ರಾಮ ಪಂಚಾಯಿತಿಗಳ ಸ್ವಾಸ್ಥ್ಯ ಕೇಂದ್ರಗಳಾಗಿ ಪರಿಣಾಮಕಾರಿಯಾಗಿ ರೂಪುಗೊಳ್ಳುತ್ತಿವೆ.

- **ಅಸಾಧಾರಣ ಪ್ರಯತ್ನಗಳು:** ಮಾನವಕುಲದ ಭವಿಷ್ಯವನ್ನೇ ಪರಿವರ್ತಿಸುವ ಸಾಮರ್ಥ್ಯ ಹೊಂದಿರುವ ವಿಷಯಗಳ ಕುರಿತು ನಮ್ಮ ಯುವಜನರು ಇಂದು ಕೆಲಸ ಮಾಡುತ್ತಿದ್ದಾರೆ. 'ಮೆದುಳಿನ ಸಂಶೋಧನೆ' (ಬ್ರೇನ್ ರಿಸರ್ಚ್) ಅಂತಹ ಒಂದು ಕ್ಷೇತ್ರವಾಗಿದೆ. ಈ ಹಿನ್ನೆಲೆಯಲ್ಲಿ, ಮದ್ರಾಸ್ ಐಐಟಿಯಲ್ಲಿ 'ಸುಧಾ ಗೋಪಾಲಕೃಷ್ಣನ್ ಬ್ರೇನ್ ಸೆಂಟರ್' ಅನ್ನು ನಾನು ಉದ್ಘಾಟಿಸಿದೆ. ಈ ಕೇಂದ್ರದ ಮೆದುಳಿನ ಇಮೇಜಿಂಗ್ ತಂತ್ರಜ್ಞಾನ ವೇದಿಕೆಯು ಜಾಗತಿಕ ಮಟ್ಟದಲ್ಲಿ ಮಾದರಿಯಾಗಿದೆ.

- **ಮಹರ್ಷಿ ವಾಲ್ಮೀಕಿ:** ಸಾವಿರಾರು ವರ್ಷಗಳು ಕಳೆದಿದ್ದರೂ, ಮಹರ್ಷಿ ವಾಲ್ಮೀಕಿ ಅವರು ರಚಿಸಿದ ರಾಮಾಯಣವು ನಮಗೆ ಇಂದಿಗೂ ಹೊಸ ಒಳನೋಟಗಳನ್ನು ನೀಡುತ್ತಿದೆ. ನಿರಂತರ ಪ್ರಯತ್ನ, ಸೇವೆ, ಕರುಣೆ ಮತ್ತು ಸಾಮಾಜಿಕ ಸಾಮರಸ್ಯದ ಮಹತ್ವವನ್ನು ಸಾರುವ ಮೂಲಕ ಅದು ನಮಗೆ ಆಳವಾದ ಜೀವನ ಪಾಠಗಳನ್ನು ಕಲಿಸುತ್ತದೆ.

- **ಅಯೋಧ್ಯೆಯಲ್ಲಿನ ದೇವಾಲಯಗಳು:** ಅಯೋಧ್ಯೆಯಲ್ಲಿ ಮಹರ್ಷಿ ವಾಲ್ಮೀಕಿ, ನಿಷಾದರಾಜ ಮತ್ತು ಮಾತಾ ಶಬರಿಯವರಿಗೆ ಸಮರ್ಪಿತ ದೇವಾಲಯಗಳನ್ನು ನಿರ್ಮಿಸಲಾಗಿದೆ. ಅಯೋಧ್ಯೆಯ ವಿಮಾನ ನಿಲ್ದಾಣಕ್ಕೆ ಮಹರ್ಷಿ ವಾಲ್ಮೀಕಿ ಅವರ ಹೆಸರನ್ನು ಇಟ್ಟಿರುವುದು ನನಗೆ ಸಂತೋಷ ತಂದಿದೆ.

'ಮನ್ ಕಿ ಬಾತ್' ಕೇಳಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

ನ್ಯೂ ಇಂಡಿಯಾ ಸಮಾಚಾರ

ಸಂಪುಟ 7, ಸಂಚಿಕೆ 10 | ನವೆಂಬರ್ 16-30, 2026

ಪ್ರಧಾನ ಸಂಪಾದಕರು
ಧೀರೇಂದ್ರ ಓಝಾ
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯುರೋ
ನವದೆಹಲಿ

ಹಿರಿಯ ಸಲಹಾ ಸಂಪಾದಕ
ಸಂತೋಷ್ ಕುಮಾರ್

ಹಿರಿಯ ಸಹಾಯಕ ಸಲಹಾ ಸಂಪಾದಕ
ಪವನ್ ಕುಮಾರ್

ಸಹಾಯಕ ಸಲಹಾ ಸಂಪಾದಕ
ಅಖಿಲೇಶ್ ಕುಮಾರ್
ಚಂದನ್ ಕುಮಾರ್ ಚೌಧರಿ

ಭಾಷಾ ಸಂಪಾದಕರು
ಸುಮಿತ್ ಕುಮಾರ್ (ಇಂಗ್ಲಿಷ್)
ರಜನೀಶ್ ಮಿಶ್ರಾ (ಇಂಗ್ಲಿಷ್)
ನದೀಮ್ ಅಹ್ಮದ್ (ಉರ್ದು)

ಹಿರಿಯ ವಿನ್ಯಾಸಕರು
ಫೂಲ್ ಚಂದ್ ತಿವಾರಿ

ವಿನ್ಯಾಸಕರು
ಸತ್ಯಂ ಸಿಂಗ್
ಅನಿಲ್ ಕುಮಾರ್



13 ಭಾಷೆಗಳಲ್ಲಿ ಲಭ್ಯವಿರುವ ನವ ಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ
https://newindiasamachar.pib.gov.in/news.aspx
ನ್ಯೂ ಇಂಡಿಯಾ ಸಮಾಚಾರ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in.archive.aspx

'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಅಪ್ಡೇಟ್‌ಗಳಿಗಾಗಿ @NISPIBIndia ಅನ್ನು ಟ್ವಿಟ್ಟರ್‌ನಲ್ಲಿ ಅನುಸರಿಸಿ

ಒಳ ಪುಟಗಳಲ್ಲಿ...


'ಭಾರತದ ಪ್ರಜೆಗಳಾದ ನಾವು' ಪ್ರತಿಯೊಬ್ಬ ನಾಗರಿಕನ ಸಂಭ್ರಮಾಚರಣೆಯಾದಾಗ



12ನೇ ಸಂವಿಧಾನ ದಿನಾಚರಣೆ ವಿಶೇಷ
ಮುಖಪುಟ ಲೇಖನ

ದೇಶದ ಜನಸಂಖ್ಯೆ ಕೇವಲ 36 ಕೋಟಿಯಷ್ಟಿತ್ತು. ಸಂಪನ್ಮೂಲಗಳು ಸೀಮಿತವಾಗಿದ್ದವು ಮತ್ತು ಸವಾಲುಗಳು ಅಪಾರವಾಗಿದ್ದವು. ಆದರೂ, ಅವಿರತ ಪರಿಶ್ರಮದ ಮೂಲಕ ಸಂವಿಧಾನ ರಚನಾ ಸಭೆಯು 1949ರ ನವೆಂಬರ್ 26ರಂದು ದೇಶಕ್ಕೆ ಅಮರವಾದ ದಾಖಲೆಯೊಂದನ್ನು ಸಮರ್ಪಿಸಿತು. ಈ ಐತಿಹಾಸಿಕ ದಿನಾಂಕವು ಅಂತಿಮವಾಗಿ ಇತಿಹಾಸದ ಪುಟಗಳಲ್ಲಿ ಮರೆಯಾಗಬಹುದು ಎಂದು ಆಗ ಯಾರೂ ಊಹಿಸಿರಲಿಕ್ಕಿಲ್ಲ. ಆದರೆ, 2015ರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮರೆತುಹೋಗಿದ್ದ ಈ ದಿನಾಂಕಕ್ಕೆ ಮತ್ತೆ ಮಹತ್ವ ತಂದುಕೊಟ್ಟು, 'ಸಂವಿಧಾನ ದಿನ'ವನ್ನು ಪ್ರತಿಯೊಬ್ಬ ನಾಗರಿಕನಿಗೂ ನಿಜವಾದ ಸಂಭ್ರಮಾಚರಣೆಯ ದಿನವನ್ನಾಗಿ ರೂಪಿಸಿದರು.
|10-25

ರಾಷ್ಟ್ರೀಯ ಏಕತಾ ದಿನ



ಭಾರತದ ಏಕತೆ, ಸಮಗ್ರತೆ ಮತ್ತು ಭದ್ರತೆಯನ್ನು ಬಲಪಡಿಸುವಲ್ಲಿ ಸರ್ದಾರ್ ಸಾಹೇಬ್ ಅವರ ಪಾತ್ರ ಐತಿಹಾಸಿಕವಾದುದು ಎಂದು ಸರ್ದಾರ್ ಪಟೇಲ್ ಅವರ 151ನೇ ಜನ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು. |8-9

ಸಂಕ್ಷಿಪ್ತ ಸುದ್ದಿಗಳು |4-5

ವ್ಯಕ್ತಿತ್ವ: ಜಗದೀಶ್ ಚಂದ್ರ ಬೋಸ್
ಸಸ್ಯಗಳಿಗೂ ಜೀವವಿದೆ ಎಂಬುದನ್ನು ಸಾಬೀತುಪಡಿಸಿದ ಮಹಾನ್ ವಿಜ್ಞಾನಿ |6

ಜಾಗತಿಕ ಪಾಲುದಾರಿಕೆ ಬಲವರ್ಧನೆ
ಇಂಡಿಯಾ ಕೆಮ್ 2026ರ 14ನೇ ಆವೃತ್ತಿ ಮುಂಬೈನಲ್ಲಿ ಆಯೋಜನೆ | 7

'ವಿಕಸಿತ ಗ್ರಾಮ ಸ್ವರಾಜ್'ಗೆ ಅನುಮೋದನೆ ಮತ್ತು ಕಂಟೇನರ್ ತಯಾರಿಕೆಗೆ ಉತ್ತೇಜನ
ಕೇಂದ್ರ ಸಚಿವ ಸಂಪುಟ ಸಭೆಯ ಮಹತ್ವದ ನಿರ್ಧಾರಗಳು | 28-29

ಸ್ಥಿರತೆ... ಅವಕಾಶ... ಭವಿಷ್ಯದ ಆಶಾಕಿರಣಕ್ಕೆ ಭದ್ರ ಬುನಾದಿ
ಪ್ರಧಾನಮಂತ್ರಿ ಆವಾಸ್ ಯೋಜನೆ-ಗ್ರಾಮೀಣಕ್ಕೆ 10 ವರ್ಷ | 30-31

ಉತ್ತಮ ಆಡಳಿತದ ಮೂಲಕ ಸಮತೋಲಿತ ಅಭಿವೃದ್ಧಿ
ಆರ್‌ಬಿಐನ ಡಿಸಿಸಿಟಿಐ ಉದ್ಘಾಟನೆ | 32-33

ಭಾರತದ ಶಕ್ತಿಯು ಜಾಗತಿಕ ಸಾಮರ್ಥ್ಯವನ್ನು ಹೆಚ್ಚಿಸಲಿದೆ
ಎನ್‌ಡಿಟಿವಿ ವರ್ಲ್ಡ್ ಸಮಿಟ್ 2026ರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಷಣ | 34-35

ವಿಕಸಿತ ಭಾರತದ ಭದ್ರ ಬುನಾದಿ: ವೈಜ್ಞಾನಿಕ ಸಂಶೋಧನೆ ಮತ್ತು ನಾವೀನ್ಯತೆ
ಪ್ರಧಾನಿ ಮೋದಿ ಅವರಿಂದ ವಿಜ್ಞಾನ ಮತ್ತು ನಾವೀನ್ಯತೆ ಸಮಾವೇಶ ಉದ್ಘಾಟನೆ |36-37

2029ರ ವೇಳೆಗೆ ಯಮುನಾ ನದಿ ಸ್ವಚ್ಛವಾಗಲಿದೆ
ದೆಹಲಿಯಲ್ಲಿ ಯಮುನಾ ನದಿಯ ಪುನರುಜ್ಜೀವನಕ್ಕೆ ಸಂಬಂಧಿಸಿದ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ | 38-39

ಸೌರಶಕ್ತಿಯ ಜಾಗತಿಕ ವಿಸ್ತರಣೆಯಲ್ಲಿ ಆಶಾಕಿರಣ
ಅಂತಾರಾಷ್ಟ್ರೀಯ ಸೌರ ಒಕ್ಕೂಟಕ್ಕೆ 11 ವರ್ಷ | 40-41

ಭಾರತೀಯ ವಾಯುಪಡೆಯ ಶೌರ್ಯ ಪ್ರದರ್ಶನ
ನಮೋ ಘಾಟ್‌ನಲ್ಲಿ ವಾಯುಪಡೆ ದಿನಾಚರಣೆಯಲ್ಲಿ ಪ್ರಧಾನಿ ಮೋದಿ ಭಾಗಿ| 42

ವಿಜಯದಶಮಿ



'ರಾಮ್ ಸೆ ರಾಷ್ಟ್ರ' ಮತ್ತು 'ದೇವ್ ಸೆ ದೇಶ್' ಆಶಯ ನನಸಾಗಲಿದೆ

ವಿಜಯದಶಮಿಯ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಶುಭಾಶಯಗಳನ್ನು ಕೋರಿದರು. ಅಯೋಧ್ಯೆಯಲ್ಲಿ ನಡೆದ 'ಪ್ರಾಣ ಪ್ರತಿಷ್ಠಾ' (ಪ್ರತಿಷ್ಠಾಪನಾ) ಸಮಾರಂಭದ ಸಂದರ್ಭದಲ್ಲಿ ಕೈಗೊಂಡಿದ್ದ 'ರಾಮ್ ಸೆ ರಾಷ್ಟ್ರ' ಮತ್ತು 'ದೇವ್ ಸೆ ದೇಶ್' ಸಂಕಲ್ಪವು ನಮ್ಮ ಸಾಮೂಹಿಕ ಪ್ರಯತ್ನಗಳ ಮೂಲಕ ಖಂಡಿತವಾಗಿಯೂ ಈಡೇರಲಿದೆ ಎಂದು ಅವರು ಹೇಳಿದರು. |26-27

Published: Kanchan Prasad, Director General, on behalf of Central Bureau of Communication
Communication Address : Room No–1077, Soochna Bhawan, CGO Complex, New Delhi -110003.
E-Mail : response-nis@pib.gov.in, RNI No. : DELENG/2020/78811

ಸಂಪಾದಕೀಯ...

ಭಾರತದ ಪ್ರಜೆಗಳಾದ ನಾವು
ಸಂವಿಧಾನದ ಶಕ್ತಿ, ರಾಷ್ಟ್ರದ ಚೈತನ್ಯ

ನಮಸ್ಕಾರ,

1949ರ ನವೆಂಬರ್ 26ರಂದು ಸಂವಿಧಾನ ರಚನಾ ಸಭೆಯು ಭಾರತದ ಸಂವಿಧಾನವನ್ನು ಅಂಗೀಕರಿಸಿತು. ಅದು 1950ರ ಜನವರಿ 26ರಂದು ಜಾರಿಗೆ ಬಂತು. ಇದು ಕೇವಲ ಕಾನೂನು ದಾಖಲೆಯಲ್ಲ; ಎಲ್ಲ ಭಾರತೀಯರ ಆಶೋತ್ತರಗಳು, ಹಕ್ಕುಗಳು ಮತ್ತು ಕರ್ತವ್ಯಗಳನ್ನು ಶಾಶ್ವತವಾಗಿ ಸಾರುವ ಮಹತ್ವದ ದಾಖಲೆಯಾಗಿದೆ. 2015ರಿಂದ ಈ ದಿನವನ್ನು 'ಸಂವಿಧಾನ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಇಂದು ಇದು ಪ್ರತಿಯೊಬ್ಬ ಭಾರತೀಯನಿಗೂ ಒಂದು ಹಬ್ಬವಾಗಿ ರೂಪುಗೊಂಡಿದೆ. ಈ ವರ್ಷ ನವೆಂಬರ್ 26ರಂದು ನಡೆಯಲಿರುವ 12ನೇ ಸಂವಿಧಾನ ದಿನದ ಆಚರಣೆಯು, ಸಂವಿಧಾನದ ನಿಜವಾದ ಶಕ್ತಿ ಅದರ ಪದಗಳಲ್ಲಷ್ಟೇ ಅಲ್ಲ, ಜನರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಅದರ ಆಶಯದಲ್ಲಿದೆ ಎಂಬುದನ್ನು ನಮಗೆ ನೆನಪಿಸುತ್ತದೆ.

ನಮ್ಮ ಸಂವಿಧಾನವು ''ಭಾರತದ ಪ್ರಜೆಗಳಾದ ನಾವು' ಎಂಬ ಪದಗುಚ್ಛದೊಂದಿಗೆ ಆರಂಭವಾಗುತ್ತದೆ. ನಾವೇ ಅದರ ಶಕ್ತಿ, ಸ್ಫೂರ್ತಿ ಮತ್ತು ಸಾರ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇದನ್ನು ಸರಳವಾಗಿ ಹೀಗೆ ಹೇಳುತ್ತಾರೆ: "ಭಾರತೀಯರಿಗೆ ಘನತೆ ಮತ್ತು ಭಾರತಕ್ಕೆ ಏಕತೆ." ನಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಲು ಮತ್ತು ನಮ್ಮ ಕರ್ತವ್ಯಗಳ ಬಗ್ಗೆ ಪ್ರಜ್ಞಾವಂತರಾಗಿರಲು ಸಂವಿಧಾನವು ನಮಗೆ ಶಕ್ತಿ ನೀಡುತ್ತದೆ.

ಕಳೆದ ಕೆಲವು ವರ್ಷಗಳಲ್ಲಿ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್' ಎಂಬ ಮಂತ್ರವು ಸಂವಿಧಾನದ ಆಶಯದ ಅತ್ಯಂತ ಪ್ರಬಲ ಅಭಿವ್ಯಕ್ತಿಯಾಗಿ ಹೊರಹೊಮ್ಮಿದೆ. ಸಾಮಾಜಿಕ ನ್ಯಾಯ, ಆರ್ಥಿಕ ಒಳಗೊಳ್ಳುವಿಕೆ ಮತ್ತು ಸಾರ್ವಜನಿಕ ಕಲ್ಯಾಣದ ಕ್ಷೇತ್ರಗಳಲ್ಲಿ ಇದು ಹೊಸ ಅಧ್ಯಾಯವನ್ನೇ ಬರೆದಿದೆ. ಜನಧನ್‌ನಿಂದ ಆವಾಸ್ ಯೋಜನೆಯವರೆಗೆ, ಆಯುಷ್ಮಾನ್ ಭಾರತ್‌ನಿಂದ ಕಿಸಾನ್ ಸಮ್ಮಾನ್ ನಿಧಿಯವರೆಗೆ ಪ್ರತಿಯೊಂದು ಉಪಕ್ರಮವೂ ಸಮಾನತೆ ಮತ್ತು ಘನತೆಯ ಆದರ್ಶಗಳನ್ನು ಜನರ ಬದುಕಿನಲ್ಲಿ ಸ್ಪಷ್ಟವಾದ ಫಲಿತಾಂಶಗಳಾಗಿ ಪರಿವರ್ತಿಸುತ್ತಿವೆ. ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸುವ ಮೂಲಕ ಸಂವಿಧಾನದ ಪರಮೋಚ್ಚತೆಯನ್ನು ಪುನಃಸ್ಥಾಪಿಸಲಾಗಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಆರೋಗ್ಯಕರ ಸಮತೋಲನವನ್ನು ಕಾಯ್ದುಕೊಳ್ಳುವ ದೃಢವಾದ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿವೆ. 'ಭಾರತೀಯ ನ್ಯಾಯ ಸಂಹಿತೆ' ಸೇರಿದಂತೆ ಹೊಸ ಕಾನೂನುಗಳು ನ್ಯಾಯ ವ್ಯವಸ್ಥೆಯನ್ನು ಹೆಚ್ಚು ಸರಳ, ಆಧುನಿಕ ಮತ್ತು ನಾಗರಿಕ ಕೇಂದ್ರಿತವಾಗಿಸುತ್ತಿವೆ.

ಪ್ರಜಾಪ್ರಭುತ್ವವನ್ನು ರಕ್ಷಿಸಲು ನಿರಂತರ ಜಾಗರೂಕತೆ ಅಗತ್ಯ. ಹಕ್ಕುಗಳನ್ನು ಚಲಾಯಿಸುವುದರ ಜೊತೆಗೆ ಕರ್ತವ್ಯಗಳನ್ನು ಪಾಲಿಸುವುದೇ ಸಂವಿಧಾನದ ಬಗೆಗಿನ ನಿಜವಾದ ನಿಷ್ಠೆಯಾಗಿದೆ. 'ಭಾರತದ ಪ್ರಜೆಗಳಾದ ನಾವು' ಎಂಬ ಪದಗುಚ್ಛವು ಇನ್ನು ಮುಂದೆ ಸಂವಿಧಾನದ ಪ್ರಸ್ತಾವನೆಯ ಭಾಗವಾಗಿ ಮಾತ್ರ ಉಳಿದಿಲ್ಲ; ಅದು ನಮ್ಮ ರಾಷ್ಟ್ರೀಯ ಬದುಕಿಗೆ ಮಾರ್ಗದರ್ಶನ ನೀಡುವ ಸಂಕಲ್ಪವಾಗಿ ರೂಪುಗೊಂಡಿದೆ. ಸಂವಿಧಾನದ ಆದರ್ಶಗಳು ಮತ್ತು ಆಶಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಪ್ರತಿಯೊಬ್ಬ ನಾಗರಿಕನೂ ವಿಕಸಿತ ಭಾರತದ ಸಂಕಲ್ಪದತ್ತ ಸಾಗುತ್ತಿರುವ ಭಾರತದ ಸ್ವರ್ಣಿಮ ಪಯಣದ ಪಾಲುದಾರನಾಗುತ್ತಾನೆ. ನಮ್ಮ ಈ ವಿಶೇಷ ಸಂಚಿಕೆಯ ಮುಖಪುಟ ಲೇಖನದ ಮುಖ್ಯ ಆಶಯವೂ ಇದೇ ಆಗಿದೆ.

ಈ ಸಂಚಿಕೆಯ ವ್ಯಕ್ತಿತ್ವ ವಿಭಾಗದಲ್ಲಿ ಸಸ್ಯಗಳಿಗೂ ಜೀವವಿದೆ ಎಂಬುದನ್ನು ಸಾಬೀತುಪಡಿಸಿದ ಜಗದೀಶ್ ಚಂದ್ರ ಬೋಸ್ ಅವರ ಕುರಿತು ಓದಿ. ಪ್ರಧಾನಮಂತ್ರಿ ಆವಾಸ್ ಯೋಜನೆ-ಗ್ರಾಮೀಣಕ್ಕೆ ಹತ್ತು ವರ್ಷಗಳು, ಕೇಂದ್ರ ಸಚಿವ ಸಂಪುಟದ ನಿರ್ಧಾರಗಳು ಹಾಗೂ ಕಳೆದ ಹದಿನೈದು ದಿನಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾಗವಹಿಸಿದ ಸಾರ್ವಜನಿಕ ಕಾರ್ಯಕ್ರಮಗಳ ಮಾಹಿತಿಯೂ ಈ ಸಂಚಿಕೆಯಲ್ಲಿದೆ.

ಒಳಪುಟದಲ್ಲಿರುವ 'ಮನ್ ಕಿ ಬಾತ್' ಹಾಗೂ ಹಿಂಬದಿಯ ಮುಖಪುಟದಲ್ಲಿ ನವೆಂಬರ್ 22ರಂದು ಆಚರಿಸಲಾದ ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ (ಎನ್‌ಸಿಸಿ) ದಿನಕ್ಕೆ ಮೀಸಲಾದ ವಿಶೇಷ ಲೇಖನ ಈ ಸಂಚಿಕೆಯ ಇತರ ಪ್ರಮುಖ ಆಕರ್ಷಣೆಗಳಾಗಿವೆ.


ನಿಮ್ಮ ಸಲಹೆಗಳನ್ನು ನಮಗೆ ನಿರಂತರವಾಗಿ ಕಳುಹಿಸುತ್ತಿರಿ.



(ಧೀರೇಂದ್ರ ಓಝಾ)

ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/ಡೌನ್ಲೋಡ್ ಮಾಡಿ.
https://newindiasamachar.pib.gov.in/

ಅಂಚೆ ಪೆಟ್ಟಿಗೆ





ಸರ್ಕಾರದ ಉಪಕ್ರಮಗಳ ಕುರಿತು ಮಾಹಿತಿ ಒದಗಿಸುವಲ್ಲಿ ಅತ್ಯಂತ ಉಪಯುಕ್ತ

ನನ್ನ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಸರ್ಕಾರದ ಇತ್ತೀಚಿನ ಉಪಕ್ರಮಗಳು, ನೀತಿಗಳು, ಯೋಜನೆಗಳು ಮತ್ತು ಪ್ರಚಲಿತ ವಿದ್ಯಮಾನಗಳ ಮಾಹಿತಿಯನ್ನು ತಿಳಿದುಕೊಳ್ಳಲು ನಾನು 'ನ್ಯೂ ಇಂಡಿಯಾ ಸಮಾಚಾರ' ನಿಯತಕಾಲಿಕವನ್ನು ನಿಯಮಿತವಾಗಿ ಓದುತ್ತೇನೆ. ಇಂತಹ ಅತ್ಯುತ್ತಮ ನಿಯತಕಾಲಿಕವನ್ನು ಪ್ರಕಟಿಸುತ್ತಿರುವ ಇಡೀ ತಂಡಕ್ಕೆ ನನ್ನ ಧನ್ಯವಾದಗಳು. ನಿಯತಕಾಲಿಕದ ಇತ್ತೀಚಿನ ಮತ್ತು ಹಿಂದಿನ ಸಂಚಿಕೆಗಳನ್ನು ಓದಲು ನಾನು ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡುತ್ತೇನೆ.

ಪ್ರಣವ್ ಪಟ್ಟಾಣಿ
papattani264@gmail.com

ಇದು ನನ್ನ ಜ್ಞಾನವನ್ನು ವೃದ್ಧಿಸುತ್ತದೆ

ನನ್ನ ಹೆಸರು ಚಿಂತನ್. ನಾನು 'ನ್ಯೂ ಇಂಡಿಯಾ ಸಮಾಚಾರ' ನಿಯತಕಾಲಿಕವನ್ನು ನಿಯಮಿತವಾಗಿ ಓದುತ್ತೇನೆ. ನಾನು ಸಂಪೂರ್ಣ ನಿಯತಕಾಲಿಕವನ್ನು ಒಮ್ಮೆ ಕಣ್ಣಾಡಿಸುತ್ತೇನೆ. ಅದರಲ್ಲಿ ಒದಗಿಸಲಾದ ಮಾಹಿತಿಯು ನನ್ನ ಜ್ಞಾನವನ್ನು ಬೆಳೆಸಲು ಸಹಾಯ ಮಾಡುವ ಕೆಲವು ಉಪಯುಕ್ತ ಒಳನೋಟಗಳನ್ನು ನನಗೆ ನೀಡುತ್ತದೆ.

chintanr390@gmail.com

ರಾಷ್ಟ್ರೀಯ ಬೆಳವಣಿಗೆಗಳ ಮಾಹಿತಿ ತಿಳಿದುಕೊಳ್ಳಲು ಅತ್ಯಗತ್ಯ

ನಾನು ಕೇಂದ್ರ ಸರ್ಕಾರದ ಅಧಿಕೃತ ನಿಯತಕಾಲಿಕವಾದ 'ನ್ಯೂ ಇಂಡಿಯಾ ಸಮಾಚಾರ'ದ ತೆಲುಗು ಆವೃತ್ತಿಯನ್ನು ನಿಯಮಿತವಾಗಿ ಓದುತ್ತೇನೆ. ಸಾರ್ವಜನಿಕ ನೀತಿಗೆ ಸಂಬಂಧಿಸಿದ ಮಾಹಿತಿಗೆ ನಾನು ಹೆಚ್ಚಿನ ಮಹತ್ವ ನೀಡುತ್ತೇನೆ. 'ವಿಕಸಿತ ಭಾರತ'ದ ಗುರಿಯತ್ತ ನಾವು ಸಾಗುತ್ತಿರುವ ಸಂದರ್ಭದಲ್ಲಿ, ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಹಂಚಿಕೊಳ್ಳುವ ಅಭಿವೃದ್ಧಿಯ ಚೌಕಟ್ಟು, ರಾಷ್ಟ್ರೀಯ ಸಾಧನೆಗಳು ಮತ್ತು ಆಡಳಿತಕ್ಕೆ ಸಂಬಂಧಿಸಿದ ವಿಚಾರಗಳನ್ನು ಆಳವಾಗಿ ಅಧ್ಯಯನ ಮಾಡಲು ನನಗೆ ಆಸಕ್ತಿಯಿದೆ. ಈ ನಿಟ್ಟಿನಲ್ಲಿ ಈ ನಿಯತಕಾಲಿಕವು ಅತ್ಯಂತ ಸಹಾಯಕವಾಗಿದೆ.

ಜಿ. ಅಶೋಕ್
cscashok1399@gmail.com

ನಿರಂತರವಾಗಿ ಮಾಹಿತಿಯೊಂದಿಗೆ ನವೀಕೃತವಾಗಿರಲು ಅತ್ಯಂತ ಉಪಯುಕ್ತ ನಿಯತಕಾಲಿಕ

ನಾನು 'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಓದುಗ. ಭಾರತ ಸರ್ಕಾರದ ಯೋಜನೆಗಳು, ನೀತಿಗಳು ಮತ್ತು ಪ್ರಚಲಿತ ವಿದ್ಯಮಾನಗಳ ಕುರಿತು ನಿರಂತರವಾಗಿ ಮಾಹಿತಿ ಪಡೆಯಲು ಈ ನಿಯತಕಾಲಿಕವು ಅತ್ಯಂತ ಉಪಯುಕ್ತವಾಗಿದೆ. ಇದು ದೇಶದ ಪ್ರಗತಿಯ ಕುರಿತ ನನ್ನ ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ, ಜವಾಬ್ದಾರಿಯುತ ನಾಗರಿಕನಾಗಿ ದೇಶದ ಅಭಿವೃದ್ಧಿಯನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಮತ್ತು ಅದರಲ್ಲಿ ಭಾಗವಹಿಸಲು ನನಗೆ ಸ್ಫೂರ್ತಿ ನೀಡುತ್ತದೆ.

ನಿವೇಶ್ ಗೋಯಲ್
goyalnivesh98@gmail.com

Communication Address : Room No–1077, Soochna Bhawan, CGO Complex, New Delhi -110003

E-Mail: response-nis@pib.gov.in

ಸುದ್ದಿಗಳು ಸಂಕ್ಷಿಪ್ತ





2026ರ ಏಷ್ಯನ್ ಪ್ಯಾರಾ ಕ್ರೀಡಾಕೂಟದಲ್ಲಿ ಭಾರತದ ಸಾರ್ವಕಾಲಿಕ ಶ್ರೇಷ್ಠ ಸಾಧನೆ

ಜಪಾನ್‌ನ ಐಚಿ-ನಗೋಯಾದಲ್ಲಿ ನಡೆದ 2026ರ ಏಷ್ಯನ್ ಪ್ಯಾರಾ ಕ್ರೀಡಾಕೂಟದಲ್ಲಿ ಭಾರತವು ಇದುವರೆಗಿನ ತನ್ನ ಅತ್ಯುತ್ತಮ ಪ್ರದರ್ಶನ ನೀಡಿದೆ. ಒಟ್ಟು 114 ಪದಕಗಳನ್ನು ಗೆದ್ದ ಭಾರತವು ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಪಡೆದಿದೆ. ಈ ಪದಕಗಳಲ್ಲಿ 30 ಚಿನ್ನ, 35 ಬೆಳ್ಳಿ ಮತ್ತು 49 ಕಂಚಿನ ಪದಕಗಳು ಸೇರಿವೆ. ಪ್ಯಾರಾ ಕ್ರೀಡಾಪಟುಗಳ ಈ ಅಸಾಧಾರಣ ಸಾಧನೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಭಿನಂದನೆ ತಿಳಿಸಿದ್ದಾರೆ. ಇದು ಇಡೀ ದೇಶಕ್ಕೆ ಅಪಾರ ಹೆಮ್ಮೆ ಮತ್ತು ಸಂತೋಷದ ಕ್ಷಣವಾಗಿದೆ ಎಂದು ಅವರು ಹೇಳಿದ್ದಾರೆ. ಪ್ರತಿಯೊಬ್ಬ ಕ್ರೀಡಾಪಟುವೂ ಈ ಐತಿಹಾಸಿಕ ಸಾಧನೆಗೆ ಕೊಡುಗೆ ನೀಡಿದ್ದು, ತಮ್ಮ ಸಾಧನೆಗಳ ಮೂಲಕ ಅಸಂಖ್ಯಾತ ಭಾರತೀಯರಿಗೆ ಸ್ಫೂರ್ತಿ ತುಂಬಿದ್ದಾರೆ ಎಂದು ಅವರು ತಿಳಿಸಿದ್ದಾರೆ.

2022ರ ಏಷ್ಯನ್ ಪ್ಯಾರಾ ಕ್ರೀಡಾಕೂಟದಲ್ಲಿ ಭಾರತ ಗಳಿಸಿದ್ದ 111 ಪದಕಗಳ ಹಿಂದಿನ ದಾಖಲೆಯನ್ನು ಈ ಬಾರಿ ಭಾರತ ಮೀರಿಸಿದೆ. ಪ್ಯಾರಾ ಅಥ್ಲೆಟಿಕ್ಸ್ ವಿಭಾಗವು 65 ಪದಕಗಳನ್ನು, ಅವುಗಳಲ್ಲಿ 22 ಚಿನ್ನದ ಪದಕಗಳನ್ನು ಗಳಿಸುವ ಮೂಲಕ ಅತ್ಯಂತ ಮಹತ್ವದ ಕೊಡುಗೆ ನೀಡಿದೆ. ಶೀತಲ್ ದೇವಿ ಅವರು ಎರಡು ಚಿನ್ನ ಮತ್ತು ಒಂದು ಬೆಳ್ಳಿ ಸೇರಿದಂತೆ ಒಟ್ಟು ಮೂರು ಪದಕಗಳನ್ನು ಗೆದ್ದು ಭಾರತದ ಅತ್ಯಂತ ಯಶಸ್ವಿ ಕ್ರೀಡಾಪಟುವಾಗಿ ಹೊರಹೊಮ್ಮಿದ್ದಾರೆ.



ಭದ್ರತಾ ಸವಾಲುಗಳನ್ನು ಎದುರಿಸುವುದು

ಸದೃಢ ನಾಗರಿಕ ರಕ್ಷಣಾ ಜಾಲ

ಭಾರತದಲ್ಲಿ 'ಸದೃಢ ನಾಗರಿಕ ರಕ್ಷಣಾ ಜಾಲ'ವನ್ನು ಸ್ಥಾಪಿಸುವ ಉದ್ದೇಶದಿಂದ ಭಾರತೀಯ ಸೇನೆಯ ಸಹಯೋಗದೊಂದಿಗೆ ವಿಶೇಷ ತರಬೇತಿ ಉಪಕ್ರಮವೊಂದನ್ನು ಆರಂಭಿಸಲಾಗುತ್ತಿದೆ. ಮೊದಲ ಹಂತದಲ್ಲಿ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 600 ನಾಗರಿಕ ರಕ್ಷಣಾ ಮಾಸ್ಟರ್ ತರಬೇತುದಾರರಿಗೆ ಮೂರು ದಿನಗಳ ತರಬೇತಿ ನೀಡಲಾಗುತ್ತದೆ. ಆಗಸ್ಟ್ 15ರಂದು ಕೆಂಪುಕೋಟೆಯ ಮೇಲಿನಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಜಾಲವನ್ನು ರೂಪಿಸುವ ದೂರದೃಷ್ಟಿಯನ್ನು ಪ್ರಕಟಿಸಿದ್ದರು.


ಈ ಉಪಕ್ರಮಕ್ಕೆ ಪ್ರತಿಯೊಂದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶವು ತಲಾ 50 ಮಾಸ್ಟರ್ ತರಬೇತುದಾರರನ್ನು ಒದಗಿಸಲಿವೆ. ಬೆದರಿಕೆಗಳ ಬಗ್ಗೆ ಅರಿವು ಮೂಡಿಸುವುದು, ಸುರಕ್ಷತೆ, ತುರ್ತು ಪರಿಸ್ಥಿತಿಗಳನ್ನು ನಿಭಾಯಿಸುವುದು, ಸಂವಹನ ಮತ್ತು ಸಮನ್ವಯ ಸಾಧಿಸುವುದು ತರಬೇತಿಯ ಪ್ರಮುಖ ಉದ್ದೇಶಗಳಾಗಿವೆ. ಆಧುನಿಕ ಮತ್ತು ಹೈಬ್ರಿಡ್ ಯುದ್ಧತಂತ್ರಗಳು, ಡ್ರೋನ್‌ಗಳು ಮತ್ತು ವೈಮಾನಿಕ ದಾಳಿಗಳಿಂದ ಎದುರಾಗುವ ಬೆದರಿಕೆಗಳು, ಅಗ್ನಿ ಸುರಕ್ಷತೆ, ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು, ಸೈಬರ್ ಸುರಕ್ಷತಾ ಕ್ರಮಗಳು ಹಾಗೂ ನಾಗರಿಕ-ಸೇನಾ ಸಮನ್ವಯದಂತಹ ಪ್ರಮುಖ ವಿಷಯಗಳು ತರಬೇತಿಯಲ್ಲಿ ಒಳಗೊಂಡಿರುತ್ತವೆ. ಈ ತರಬೇತಿಯ ನಂತರ ಪ್ರತಿಯೊಬ್ಬ ಮಾಸ್ಟರ್ ತರಬೇತುದಾರರು ತಲಾ 100 ನಾಗರಿಕ ರಕ್ಷಣಾ ಸ್ವಯಂಸೇವಕರಿಗೆ ತರಬೇತಿ ನೀಡಲಿದ್ದಾರೆ.





ಇ85/ಇ100 ಇಂಧನ ಚಾಲಿತ ವಾಹನಗಳಿಗೆ ಪರಿಷ್ಕೃತ ನಿಯಮಗಳು

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಇ85 ಮತ್ತು ಇ100 ಫ್ಲೆಕ್ಸ್-ಫ್ಯೂಯೆಲ್ ವಾಹನಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ 1989ರ ಕೇಂದ್ರ ಮೋಟಾರು ವಾಹನ ನಿಯಮಗಳಿಗೆ ತಿದ್ದುಪಡಿ ತಂದಿದೆ. ಈ ಪರಿಸರಸ್ನೇಹಿ ಇಂಧನಗಳ ಬಳಕೆಗಾಗಿ ಪ್ರಮಾಣೀಕರಿಸಲಾದ ವಾಹನಗಳು ಅನ್ವಯವಾಗುವ ಹೊರಸೂಸುವಿಕೆ ಮತ್ತು ಸುರಕ್ಷತಾ ಮಾನದಂಡಗಳನ್ನು ಪಾಲಿಸಬೇಕಾಗುತ್ತದೆ. ಇ85 ಇಂಧನವು ಪರಿಮಾಣದ ಆಧಾರದಲ್ಲಿ ಶೇ. 85ರಷ್ಟು ಎಥೆನಾಲ್ ಅನ್ನು ಹೊಂದಿರುತ್ತದೆ. ದೇಶೀಯವಾಗಿ ಉತ್ಪಾದನೆಯಾಗುವ ಎಥೆನಾಲ್ ನ ಬಳಕೆಯನ್ನು ಹೆಚ್ಚಿಸುವುದರಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ. ಇ85/ಇ100 ಇಂಧನಗಳನ್ನು ಈ ಇಂಧನಗಳ ಬಳಕೆಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಿ ಪ್ರಮಾಣೀಕರಿಸಲಾದ ವಾಹನಗಳಲ್ಲಿ ಮಾತ್ರ ಬಳಸಬಹುದು. ಈಗಾಗಲೇ ಬಳಕೆಯಲ್ಲಿರುವ ವಾಹನಗಳ ಮಾಲೀಕರು ತಮ್ಮ ವಾಹನಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿಕೊಳ್ಳುವ ಅಗತ್ಯವಿಲ್ಲ.



'ಅಗ್ರಿ-ವೆಲ್ಫೇರ್ ಪೋರ್ಟಲ್' ಮೊಬೈಲ್‌ನಲ್ಲೇ ಕೃಷಿ ಮಾಹಿತಿ

ಕೃಷಿ ಮತ್ತು ರೈತರ ಕಲ್ಯಾಣಕ್ಕೆ ಸಂಬಂಧಿಸಿದ ಸೇವೆಗಳ ಮಾಹಿತಿ ಪಡೆಯಲು ದೇಶದ ರೈತರು ಇನ್ನು ಮುಂದೆ ಸರ್ಕಾರಿ ಕಚೇರಿಗಳಿಗೆ ಅಲೆಯುವ ಅಗತ್ಯವಿಲ್ಲ. ರಸಗೊಬ್ಬರಗಳು, ಬೀಜಗಳು ಮತ್ತು ಸರ್ಕಾರಿ ಯೋಜನೆಗಳ ಕುರಿತ ವಿವರಗಳನ್ನು ಈಗ ಅವರು ತಮ್ಮ ಮನೆಯಲ್ಲಿಯೇ ಕುಳಿತು ಪಡೆಯಬಹುದು. ಕೃಷಿ ಸಚಿವಾಲಯದ ಎಲ್ಲ ಸೇವೆಗಳನ್ನು ಒಂದೇ ವೇದಿಕೆಯಲ್ಲಿ ಒದಗಿಸುವ ಮೂಲಕ ರೈತರನ್ನು ಡಿಜಿಟಲ್ ಆಗಿ ಸಬಲೀಕರಣಗೊಳಿಸುವ ಉದ್ದೇಶವನ್ನು ಈ ಪೋರ್ಟಲ್ ಹೊಂದಿದೆ.

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರು ರೈತರಿಗಾಗಿ ಅಭಿವೃದ್ಧಿಪಡಿಸಿದ ಪರಿಷ್ಕೃತ 'ಅಗ್ರಿ-ವೆಲ್ಫೇರ್ ಪೋರ್ಟಲ್' ಗೆ ಚಾಲನೆ ನೀಡಿದ್ದಾರೆ. ಸರ್ಕಾರಿ ಯೋಜನೆಗಳು, ಆರ್ಥಿಕ ನೆರವು ಮತ್ತು ಕೃಷಿಗೆ ಸಂಬಂಧಿಸಿದ ಅಗತ್ಯ ಮಾಹಿತಿಯನ್ನು ನೇರವಾಗಿ ರೈತರ ಮೊಬೈಲ್ ಫೋನ್‌ಗಳಿಗೆ ತಲುಪಿಸುವುದು ಇದರ ಉದ್ದೇಶವಾಗಿದೆ. ಈ ಪೋರ್ಟಲ್ ಮೂಲಕ ಸಚಿವಾಲಯದ ಯೋಜನೆಗಳು, ಸಹಾಯಧನಗಳು, ನಿಯಮಾವಳಿಗಳು, ಡಿಜಿಟಲ್ ಸೇವೆಗಳು, ಹವಾಮಾನ ಮುನ್ಸೂಚನೆಗಳು, ಬೀಜಗಳು ಮತ್ತು ರಸಗೊಬ್ಬರಗಳ ಲಭ್ಯತೆ, ಮಾರುಕಟ್ಟೆ ಬೆಲೆಗಳು (ಮಂಡಿ ದರಗಳು) ಹಾಗೂ ವೈಜ್ಞಾನಿಕ ಕೃಷಿ ಪದ್ಧತಿಗಳ ಕುರಿತ ಮಾಹಿತಿಯನ್ನು ಪಡೆಯಬಹುದು. ಸೀಮಿತ ಇಂಟರ್ನೆಟ್ ಸಂಪರ್ಕವಿದ್ದರೂ ಮತ್ತು ಸಾಮಾನ್ಯ ಸ್ಮಾರ್ಟ್‌ಫೋನ್‌ಗಳಲ್ಲಿಯೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಈ ಪೋರ್ಟಲ್ ಅನ್ನು ವಿನ್ಯಾಸಗೊಳಿಸಲಾಗಿದೆ.




ಆಯುಷ್ ಕ್ಷೇತ್ರದಲ್ಲಿ ನಾವೀನ್ಯತೆ: ಪೇಟೆಂಟ್ ಅರ್ಜಿಗಳ ಸಂಖ್ಯೆ 8 ಪಟ್ಟು ಹೆಚ್ಚಳ

ಕಳೆದ ಒಂದು ದಶಕದಲ್ಲಿ ಆಯುಷ್ ಕ್ಷೇತ್ರದಲ್ಲಿ ನಾವೀನ್ಯತೆ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಗಮನಾರ್ಹ ಏರಿಕೆ ಕಂಡುಬಂದಿದೆ. 2014–15ರಿಂದ 2025–26ರ ಹಣಕಾಸು ವರ್ಷಗಳ ಅವಧಿಯಲ್ಲಿ ಆಯುಷ್‌ಗೆ ಸಂಬಂಧಿಸಿದ ಒಟ್ಟು 4,077 ಪೇಟೆಂಟ್ ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಅವುಗಳಲ್ಲಿ 711 ಪೇಟೆಂಟ್‌ಗಳಿಗೆ ಮಂಜೂರಾತಿ ದೊರೆತಿದೆ. ವಾರ್ಷಿಕ ಪೇಟೆಂಟ್ ಅರ್ಜಿಗಳ ಸಂಖ್ಯೆ 63ರಿಂದ 590ಕ್ಕೆ ಏರಿಕೆಯಾಗಿದೆ. ಇದು ಸರಿಸುಮಾರು ಶೇ. 836.5ರಷ್ಟು ಹೆಚ್ಚಳವಾಗಿದೆ. ಆಯುಷ್‌ಗೆ ಸಂಬಂಧಿಸಿದ ನಾವೀನ್ಯತೆಗಳ ಕುರಿತು (2014–2026) ಪ್ರಕಟಿಸಲಾದ ಸ್ಥಿತಿಗತಿ ವರದಿಯಲ್ಲಿ ಈ ಮಾಹಿತಿಯನ್ನು ಬಹಿರಂಗಪಡಿಸಲಾಗಿದೆ.

ಕೋವಿಡ್-19 ಸಾಂಕ್ರಾಮಿಕ ಆರಂಭವಾದ ನಂತರದ ಆರು ವರ್ಷಗಳಲ್ಲಿ ಒಟ್ಟು 2,854 ಅರ್ಜಿಗಳನ್ನು ಸಲ್ಲಿಸಲಾಗಿದೆ. ಇದು ಸಲ್ಲಿಕೆಯಾದ ಒಟ್ಟು ಅರ್ಜಿಗಳ ಶೇ. 70ರಷ್ಟಾಗಿದೆ. ಇದೇ ಅವಧಿಯಲ್ಲಿ 657 ಪೇಟೆಂಟ್‌ಗಳಿಗೆ ಮಂಜೂರಾತಿ ದೊರೆತಿದೆ. ಅರ್ಜಿಗಳನ್ನು ಸಲ್ಲಿಸಿದವರಲ್ಲಿ ವೈಯಕ್ತಿಕ ಅರ್ಜಿದಾರರು ಅತ್ಯಧಿಕ ಸಂಖ್ಯೆಯಲ್ಲಿದ್ದು, 2,113 ಅರ್ಜಿಗಳನ್ನು ಸಲ್ಲಿಸಿದ್ದಾರೆ. ಶೈಕ್ಷಣಿಕ ಸಂಸ್ಥೆಗಳು 995 ಅರ್ಜಿಗಳನ್ನು ಸಲ್ಲಿಸಿವೆ.

ದೇಶದಲ್ಲಿನ ರಾಮ್ಸರ್ ತಾಣಗಳ ಸಂಖ್ಯೆ 103ಕ್ಕೆ ಏರಿಕೆ

ಭಾರತದಲ್ಲಿನ ರಾಮ್ಸರ್ ತಾಣಗಳ ಸಂಖ್ಯೆ 103ಕ್ಕೆ ಏರಿಕೆಯಾಗಿದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವರಾದ ಭೂಪೇಂದರ್ ಯಾದವ್ ಅವರು ಚಂಡೀಗಢದ ಸುಖನಾ ಜೌಗು ಪ್ರದೇಶ ಮತ್ತು ಉತ್ತರ ಪ್ರದೇಶದ ಸೌಜ್ ಸರೋವರವನ್ನು ಈ ಪಟ್ಟಿಗೆ ಸೇರ್ಪಡೆಗೊಳಿಸಿರುವುದಾಗಿ ಪ್ರಕಟಿಸಿದ್ದಾರೆ. 2014ರಲ್ಲಿ ಭಾರತದಲ್ಲಿ 26 ರಾಮ್ಸರ್ ತಾಣಗಳಿದ್ದವು. ಈಗ ಅವುಗಳ ಸಂಖ್ಯೆ ಸುಮಾರು ನಾಲ್ಕು ಪಟ್ಟು ಹೆಚ್ಚಾಗಿದೆ. ಜೀವವೈವಿಧ್ಯ ಸಂರಕ್ಷಣೆ, ಪ್ರವಾಹಗಳ ಪರಿಣಾಮ ತಗ್ಗಿಸುವುದು, ಅಂತರ್ಜಲ ಮರುಪೂರಣ ಮತ್ತು ಜನರ ಜೀವನೋಪಾಯವನ್ನು ಉಳಿಸಿಕೊಳ್ಳುವಲ್ಲಿ ರಾಮ್ಸರ್ ತಾಣಗಳು ಪ್ರಮುಖ ಪಾತ್ರ ವಹಿಸುತ್ತವೆ. ಭಾರತವು 1982ರ ಫೆಬ್ರವರಿ 1ರಂದು ರಾಮ್ಸರ್ ಸಮಾವೇಶಕ್ಕೆ ಸೇರ್ಪಡೆಯಾಯಿತು.



103 2026ರ ಅಕ್ಟೋಬರ್ 15ರಂತೆ ದೇಶದಲ್ಲಿರುವ ಒಟ್ಟು ರಾಮ್ಸರ್ ತಾಣಗಳು.

26ರಿಂದ 103ಕ್ಕೆ 2014ರಿಂದ ರಾಮ್ಸರ್ ತಾಣಗಳ ಸಂಖ್ಯೆಯಲ್ಲಿ ಏರಿಕೆ.

13.87 ಲಕ್ಷ ಹೆಕ್ಟೇರ್‌ಗೂ ಅಧಿಕ – ರಾಮ್ಸರ್ ತಾಣಗಳ ಒಟ್ಟು ವಿಸ್ತೀರ್ಣ.

ಈ ರಾಮ್ಸರ್ ತಾಣಗಳು **28** ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವ್ಯಾಪಿಸಿವೆ

ರಾಮ್ಸರ್ ತಾಣಗಳ ಸಂಖ್ಯೆಯಲ್ಲಿ ಭಾರತದ ಜಾಗತಿಕ ಸ್ಥಾನಮಾನ: ಏಷ್ಯಾದಲ್ಲಿ ಮೊದಲ ಸ್ಥಾನ, ವಿಶ್ವದಲ್ಲಿ ಮೂರನೇ ಸ್ಥಾನ


ದೇಶದ ರಕ್ಷಣಾ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವುದು

2026ರ ಅಕ್ಟೋಬರ್ 26ರಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ರಕ್ಷಣಾ ಸ್ವಾಧೀನ ಮಂಡಳಿ (ಡಿಎಸಿ) ಸಭೆಯಲ್ಲಿ ಸಶಸ್ತ್ರ ಪಡೆಗಳಿಗಾಗಿ ₹2.12 ಲಕ್ಷ ಕೋಟಿ ಮೌಲ್ಯದ ಬಂಡವಾಳ ಸ್ವಾಧೀನ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಖರೀದಿಗಳಲ್ಲಿ ಸುಮಾರು ಶೇ. 82ರಷ್ಟನ್ನು ಭಾರತೀಯ ಕೈಗಾರಿಕೆಗಳಿಂದಲೇ ಪಡೆಯಲಾಗುವುದು. ಇದರಿಂದ ಸ್ವದೇಶಿ ರಕ್ಷಣಾ ಉತ್ಪಾದನೆಗೆ ಉತ್ತೇಜನ ದೊರೆಯಲಿದೆ. ಭಾರತೀಯ ಸೇನೆಗಾಗಿ ಡ್ರೋನ್‌ಗಳು, ಕಣ್ಗಾವಲು ಮಾನವರಹಿತ ವೈಮಾನಿಕ ವಾಹನಗಳು (ಯುಎವಿಗಳು), ಡ್ರೋನ್ ನಿಗ್ರಹ ವ್ಯವಸ್ಥೆಗಳು, ದೂರಗಾಮಿ ಕಮಿಕಾಜೆ ಡ್ರೋನ್‌ಗಳು ಮತ್ತು ಸ್ವಯಂಚಾಲಿತ ಫಿರಂಗಿ ವ್ಯವಸ್ಥೆಗಳು ಸೇರಿದಂತೆ ಆಧುನಿಕ ಉಪಕರಣಗಳನ್ನು ಖರೀದಿಸಲಾಗುತ್ತದೆ. ನೌಕಾಪಡೆಗೆ ಹಡಗು ವಿರೋಧಿ ಕ್ಷಿಪಣಿಗಳ ವಿರುದ್ಧ ರಕ್ಷಣೆ ಒದಗಿಸುವ ಸುಧಾರಿತ ವ್ಯವಸ್ಥೆಗಳನ್ನು ಒದಗಿಸಲಾಗುತ್ತದೆ. ವಾಯುಪಡೆಯು ಹೆಲಿಕಾಪ್ಟರ್‌ಗಳು, ವಾಯು ರಕ್ಷಣಾ ವ್ಯವಸ್ಥೆಗಳು, ಶಸ್ತ್ರಾಸ್ತ್ರಗಳು ಮತ್ತು ಹವಾಮಾನ ರಾಡಾರ್‌ಗಳನ್ನು ಪಡೆದುಕೊಳ್ಳಲಿದೆ. ಈ ಖರೀದಿಗಳು ಸಶಸ್ತ್ರ ಪಡೆಗಳ ಕಣ್ಗಾವಲು, ಚಲನಶೀಲತೆ ಮತ್ತು ದಾಳಿಯ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸಲಿವೆ.



ಸಸ್ಯಗಳಿಗೂ ಜೀವವಿದೆ ಎಂಬುದನ್ನು

ಸಾಬೀತುಪಡಿಸಿದ ಮಹಾನ್ ವಿಜ್ಞಾನಿ



ಜನನ: ನವೆಂಬರ್ 30, 1858
ನಿಧನ: ನವೆಂಬರ್ 23, 1937

ರೇಡಿಯೊ ವಿಜ್ಞಾನಕ್ಕೆ ಭದ್ರ ಬುನಾದಿ ಹಾಕಿದ ಹಾಗೂ ಸಸ್ಯಗಳಲ್ಲಿಯೂ ಜೀವ ಪ್ರಕ್ರಿಯೆಗಳಿವೆ ಎಂಬುದನ್ನು ಸಾಬೀತುಪಡಿಸಿದ ಅಸಾಧಾರಣ ವಿಜ್ಞಾನಿ ಸರ್ ಜಗದೀಶ್ ಚಂದ್ರ ಬೋಸ್ ಅವರು ದೇಶದ ಹೆಮ್ಮೆಯನ್ನು ಹೆಚ್ಚಿಸಿದವರು. ಮರಗಳು ಮತ್ತು ಸಸ್ಯಗಳು ಭಾವನೆಗಳನ್ನು ಅನುಭವಿಸುತ್ತವೆ ಹಾಗೂ ಪ್ರತಿಕ್ರಿಯಿಸುತ್ತವೆ ಎಂಬುದನ್ನು ಅವರು ಜಗತ್ತಿಗೆ ಮನವರಿಕೆ ಮಾಡಿಕೊಟ್ಟರು. ಅವುಗಳೊಂದಿಗೂ ಸಹಾನುಭೂತಿಯ ಬಂಧವನ್ನು ಬೆಳೆಸಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು. ಅಷ್ಟೇ ಅಲ್ಲದೆ, ವೈರ್‌ಲೆಸ್ ಸಂವಹನ ಕ್ಷೇತ್ರದಲ್ಲಿ ಅವರು ನಡೆಸಿದ ಪ್ರವರ್ತಕ ಪ್ರಯೋಗಗಳು ಅವರಿಗೆ ವಿಶ್ವಾದ್ಯಂತ ಮನ್ನಣೆ ತಂದುಕೊಟ್ಟವು. ಸಂಶೋಧನೆ ಮತ್ತು ನಾವೀನ್ಯತೆಯ ಕುರಿತ ಅವರ ಜೀವಮಾನದ ಸಮರ್ಪಣೆಯು ಇಂದಿಗೂ ಯುವಜನರಿಗೆ ಸ್ಫೂರ್ತಿಯಾಗಿದೆ.

ಒಮ್ಮೆ ಬಾಲಕನೊಬ್ಬ ಆಟವಾಡುತ್ತಾ ಮರದ ಕೊಂಬೆಯನ್ನು ಜೋರಾಗಿ ಅಲುಗಾಡಿಸಿ, ಅದರ ಹೂವುಗಳು ಮತ್ತು ಎಲೆಗಳನ್ನು ಕೀಳುತ್ತಿದ್ದನು. ಆಗ ಆತನ ತಾಯಿ ಮೆಲ್ಲನೆ ಬಂದು, ಸಂಜೆಯ ಸಮಯವಾಗಿರುವುದರಿಂದ ಸಸ್ಯಗಳನ್ನು ಮುಟ್ಟಬಾರದು ಅಥವಾ ಅವುಗಳ ಎಲೆಗಳನ್ನು ಕೀಳಬಾರದು ಎಂದು ತಿಳಿಹೇಳಿದರು. ನಮ್ಮಂತೆಯೇ ಸಸ್ಯಗಳೂ ರಾತ್ರಿ ವೇಳೆ ನಿದ್ರಿಸುತ್ತವೆ. ಇಂತಹ ಸಮಯದಲ್ಲಿ ಅವುಗಳಿಗೆ ತೊಂದರೆ ನೀಡಿದರೆ ಅವುಗಳಿಗೆ ಬಹಳ ನೋವಾಗುತ್ತದೆ ಎಂದು ಆಕೆ ಬಾಲಕನಿಗೆ ವಿವರಿಸಿದರು. ಬಾಲ್ಯದಲ್ಲಿ ತಾಯಿ ಹೇಳಿದ ಈ ಮಾತು ಬಾಲಕನ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿತು. ನಮ್ಮಂತೆಯೇ ಸಸ್ಯಗಳೂ ನೋವು, ಸಂತೋಷ ಮತ್ತು ದುಃಖವನ್ನು ನಿಜವಾಗಿಯೂ ಅನುಭವಿಸುತ್ತವೆಯೇ ಎಂಬ ಕುತೂಹಲ ಆತನಲ್ಲಿ ಮೂಡಿತು. ಅವನು ಬೆಳೆದಂತೆ ಈ ಪ್ರಶ್ನೆಗೆ ವೈಜ್ಞಾನಿಕ ಸಂಶೋಧನೆಯ ಮೂಲಕ ಉತ್ತರ ಕಂಡುಕೊಳ್ಳಲು ಮುಂದಾದ. ಸಸ್ಯಗಳಲ್ಲಿನ ಅತ್ಯಂತ ಸೂಕ್ಷ್ಮ ಬೆಳವಣಿಗೆಯನ್ನೂ ಅಳೆಯಬಲ್ಲ 'ಕ್ರೆಸ್ಕೋಗ್ರಾಫ್' ಎಂಬ ಅತಿ ಸೂಕ್ಷ್ಮ ಸಾಧನವನ್ನು ಆವಿಷ್ಕರಿಸಿದನು. ಸಸ್ಯಗಳಿಗೂ ಜೀವ ಮತ್ತು ಪ್ರಜ್ಞೆ ಇವೆ ಎಂಬುದನ್ನು ಆತ ಜಗತ್ತಿಗೆ ಸಾಬೀತುಪಡಿಸಿದನು. ಆ ಮಹಾನ್ ವಿಜ್ಞಾನಿ ಬೇರಾರೂ ಅಲ್ಲ, ಅವರೇ ಜಗದೀಶ್ ಚಂದ್ರ ಬೋಸ್.

1858ರ ನವೆಂಬರ್ 30ರಂದು ಬಂಗಾಳದ ಮೈಮೆನ್ಸಿಂಗ್ ಗ್ರಾಮದಲ್ಲಿ (ಇಂದಿನ ಬಾಂಗ್ಲಾದೇಶ) ಜನಿಸಿದ ಜಗದೀಶ್ ಚಂದ್ರ ಬೋಸ್ ಅವರು ರೇಡಿಯೊ ಮತ್ತು ಮೈಕ್ರೋವೇವ್‌ಗಳ ಆಪ್ಟಿಕ್ಸ್ ಕ್ಷೇತ್ರದಲ್ಲಿ ಕೆಲಸ ಮಾಡಿದ ಮೊದಲ ವಿಜ್ಞಾನಿ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಕಾರ, ಬೋಸ್ ಅವರು ವೈರ್‌ಲೆಸ್ ರೇಡಿಯೊ ಪ್ರಸರಣದ ಸಹ-ಆವಿಷ್ಕಾರಕರಾಗಿದ್ದರು. ಅತ್ಯಂತ ಕಡಿಮೆ ತರಂಗಾಂತರದ ವಿದ್ಯುತ್ಕಾಂತೀಯ ಅಲೆಗಳನ್ನು ಉತ್ಪಾದಿಸಲು ಮತ್ತು ಪತ್ತೆಹಚ್ಚಲು ಬಳಸುವ ಸಾಧನಗಳಲ್ಲಿ ಅವರು ಗಮನಾರ್ಹ ಸುಧಾರಣೆಗಳನ್ನು ಮಾಡಿದರು. ಅವರನ್ನು ರೇಡಿಯೊ ವಿಜ್ಞಾನದ ಪಿತಾಮಹ ಎಂದೂ ಪರಿಗಣಿಸಲಾಗುತ್ತದೆ.

ಇಂದು ಬಳಕೆಯಲ್ಲಿರುವ ಅನೇಕ ಮೈಕ್ರೋವೇವ್ ಸಾಧನಗಳಾದ ವೇವ್‌ಗೈಡ್‌ಗಳು, ಪೋಲರೈಸರ್‌ಗಳು, ಡೈಎಲೆಕ್ಟ್ರಿಕ್ ಲೆನ್ಸ್‌ಗಳು ಮತ್ತು ವಿದ್ಯುತ್ಕಾಂತೀಯ ವಿಕಿರಣವನ್ನು ಪತ್ತೆಹಚ್ಚುವ ಸೆಮಿಕಂಡಕ್ಟರ್ ಡಿಟೆಕ್ಟರ್‌ಗಳನ್ನು ಬೋಸ್ ಅವರು 19ನೇ ಶತಮಾನದ ಕೊನೆಯ ದಶಕದಲ್ಲಿಯೇ ಆವಿಷ್ಕರಿಸಿದ್ದರು.

1917ರಲ್ಲಿ ಜಗದೀಶ್ ಚಂದ್ರ ಬೋಸ್ ಅವರಿಗೆ 'ನೈಟ್‌ಹುಡ್' ಗೌರವ ಪ್ರದಾನ ಮಾಡಲಾಯಿತು. ಇದಾದ ಕೆಲವೇ ದಿನಗಳಲ್ಲಿ ಭೌತಶಾಸ್ತ್ರ ಮತ್ತು ಜೀವಶಾಸ್ತ್ರ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳಿಗಾಗಿ ಲಂಡನ್‌ನ ರಾಯಲ್ ಸೊಸೈಟಿಯ ಫೆಲೋ ಆಗಿ ಅವರು ಆಯ್ಕೆಯಾದರು. ಅತ್ಯಾಧುನಿಕ ಮತ್ತು ದುಬಾರಿ ಉಪಕರಣಗಳು ಹಾಗೂ ಪ್ರಯೋಗಾಲಯಗಳಿಲ್ಲದೆಯೇ ಬೋಸ್ ತಮ್ಮ ಸಂಶೋಧನೆಗಳನ್ನು ನಡೆಸಿದ್ದರು. ಆದ್ದರಿಂದ, ಎಲ್ಲ ಸೌಲಭ್ಯಗಳನ್ನೂ ಹೊಂದಿರುವ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸುವ ಕನಸು ಕಂಡಿದ್ದರು. ಈ ಕನಸಿನ ಫಲವಾಗಿ 'ಬೋಸ್ ಇನ್‌ಸ್ಟಿಟ್ಯೂಟ್' (ಬೋಸ್ ವಿಜ್ಞಾನ ಮಂದಿರ) ಸ್ಥಾಪನೆಯಾಯಿತು. ಇಂದು ಇದು ದೇಶದ ಪ್ರಮುಖ ಸಂಶೋಧನಾ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಅವರು ವಿವಿಧ ವಿಷಯಗಳ ಕುರಿತು ಪುಸ್ತಕಗಳನ್ನೂ ರಚಿಸಿದ್ದರು. ಜಗದೀಶ್ ಚಂದ್ರ ಬೋಸ್ ಅವರು 1937ರ ನವೆಂಬರ್ 23ರಂದು ನಿಧನರಾದರು.

ವೈಜ್ಞಾನಿಕ ಸಂಶೋಧನೆಗಳ ಹೊರತಾಗಿಯೂ ಜಗದೀಶ್ ಚಂದ್ರ ಬೋಸ್ ಅವರು ತತ್ವನಿಷ್ಠ ವ್ಯಕ್ತಿಯಾಗಿದ್ದರು. ಬ್ರಿಟಿಷ್ ಆಡಳಿತಗಾರರು ನೀಡುತ್ತಿದ್ದ ಕಡಿಮೆ ವೇತನವನ್ನು ವಿರೋಧಿಸಿ ಅವರು ಧ್ವನಿ ಎತ್ತಿದ್ದರು. ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು 'ಸತ್ಯಾಗ್ರಹ'ವನ್ನೂ ಅನುಸರಿಸಿದ್ದರು. 2018ರ ಫೆಬ್ರವರಿ 25ರಂದು ಪ್ರಸಾರವಾದ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸರ್ ಜಗದೀಶ್ ಚಂದ್ರ ಬೋಸ್ ಅವರನ್ನು ಭಾರತದ ಹೆಮ್ಮೆಯ ಪ್ರತೀಕ ಎಂದು ಬಣ್ಣಿಸಿದ್ದರು. ಇದಲ್ಲದೆ, 2021ರ ಜನವರಿ 4ರಂದು ಪ್ರಧಾನಮಂತ್ರಿಯವರು ಜಗದೀಶ್ ಚಂದ್ರ ಬೋಸ್ ಅವರು ಕೋಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಮೈಕ್ರೋವೇವ್‌ಗಳ ತತ್ವಗಳನ್ನು ಮೊದಲ ಬಾರಿಗೆ ಮಂಡಿಸಿದ್ದರು ಎಂದು ಉಲ್ಲೇಖಿಸಿದ್ದರು. ಸರ್ ಬೋಸ್ ಅವರು ತಮ್ಮ ಸಂಶೋಧನೆಗಳ ವಾಣಿಜ್ಯ ಬಳಕೆಯತ್ತ ಗಮನಹರಿಸದಿದ್ದರೂ, ಆ ತತ್ವಗಳ ಆಧಾರದ ಮೇಲೆಯೇ ಆಧುನಿಕ ರೇಡಿಯೊ ಸಂವಹನ ವ್ಯವಸ್ಥೆಗಳು ರೂಪುಗೊಂಡಿವೆ.





ಇಂಡಿಯಾ ಕೆಮ್ 2026

ಜಾಗತಿಕ ಪಾಲುದಾರಿಕೆಗಳನ್ನು ಬಲಪಡಿಸುವುದು

ಅಭಿವೃದ್ಧಿ ಹೊಂದಿದ ಮತ್ತು ಸ್ವಾವಲಂಬಿ ಭಾರತ ನಿರ್ಮಾಣಕ್ಕೆ ಸದೃಢವಾದ, ವಿಶ್ವದರ್ಜೆಯ ರಾಸಾಯನಿಕ ಮತ್ತು ಪೆಟ್ರೋಕೆಮಿಕಲ್ ಉದ್ಯಮ ಅತ್ಯಗತ್ಯವಾಗಿದೆ. ಈ ಕಾರಣಕ್ಕಾಗಿ, ದೇಶದ ರಾಸಾಯನಿಕ ವಲಯಕ್ಕೆ ಅತ್ಯಂತ ಅನುಕೂಲಕರ ವಾತಾವರಣವನ್ನು ಸೃಷ್ಟಿಸಲು ಸರ್ಕಾರ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ, 'ಇಂಡಿಯಾ ಕೆಮ್ 2026'ರ 14ನೇ ಆವೃತ್ತಿಯನ್ನು ಅಕ್ಟೋಬರ್ 22ರಂದು ಮುಂಬೈನಲ್ಲಿ ಉದ್ಘಾಟಿಸಲಾಯಿತು. ರಾಸಾಯನಿಕ ಮತ್ತು ಪೆಟ್ರೋಕೆಮಿಕಲ್ ವಲಯದಲ್ಲಿ ಜಾಗತಿಕ ಪಾಲುದಾರಿಕೆಗಳನ್ನು ಬಲಪಡಿಸುವುದು, ಹೂಡಿಕೆಯನ್ನು ಆಕರ್ಷಿಸುವುದು ಮತ್ತು ಸುಸ್ಥಿರ ಅಭಿವೃದ್ಧಿಗೆ ಉತ್ತೇಜನ ನೀಡುವುದು ಇಂಡಿಯಾ ಕೆಮ್ 2026ರ ಪ್ರಮುಖ ಉದ್ದೇಶವಾಗಿದೆ.

2047ರ ವೇಳೆಗೆ ವಿಕಸಿತ ಭಾರತದ ಗುರಿಯನ್ನು ಸಾಧಿಸುವ ಸಂಕಲ್ಪದೊಂದಿಗೆ ದೇಶ ಮುನ್ನಡೆಯುತ್ತಿದೆ. ಈ ನಿಟ್ಟಿನಲ್ಲಿ, ಸರ್ಕಾರವು ಮೂರು ಹೊಸ ಮೀಸಲಾದ ರಾಸಾಯನಿಕ ಪಾರ್ಕ್‌ಗಳನ್ನು ಸ್ಥಾಪಿಸುವುದೂ ಸೇರಿದಂತೆ ಕೈಗೊಂಡಿರುವ 'ಭಾರತ್ ಔದ್ಯೋಗಿಕ ವಿಕಾಸ್ ಯೋಜನಾ' (BHAVYA) ಮಹತ್ವದ ಪಾತ್ರ ವಹಿಸಲಿದೆ. ಇಂಡಿಯಾ ಕೆಮ್ 2026ಕ್ಕೆ ನೀಡಿದ ಸಂದೇಶದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 'ವ್ಯವಹಾರವನ್ನು ಸುಲಭಗೊಳಿಸುವ' (ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್) ನಿಟ್ಟಿನಲ್ಲಿ ಕೈಗೊಳ್ಳಲಾಗುತ್ತಿರುವ ಪ್ರಯತ್ನಗಳು ಹಾಗೂ ಭಾರತದ ವಿಸ್ತರಿಸುತ್ತಿರುವ ಮುಕ್ತ ವ್ಯಾಪಾರ ಒಪ್ಪಂದಗಳ ಜಾಲವು ಹೂಡಿಕೆ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಿಗೆ ಪ್ರವೇಶಾವಕಾಶದ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿವೆ ಎಂದು ಹೇಳಿದರು. ಭಾರತದ ರಾಸಾಯನಿಕ ಉತ್ಪಾದಕರು ಈ ಅವಕಾಶಗಳನ್ನು ಬಳಸಿಕೊಂಡು ಜಾಗತಿಕ ಪೂರೈಕೆ ಸರಪಳಿಯಲ್ಲಿ ತಮ್ಮ ಪಾಲ್ಗೊಳ್ಳುವಿಕೆಯನ್ನು ಮತ್ತಷ್ಟು ಬಲಪಡಿಸಲಿದ್ದಾರೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಜೆ.ಪಿ. ನಡ್ಡಾ ಅವರು ಇಂಡಿಯಾ ಕೆಮ್ 2026ರ 14ನೇ ಆವೃತ್ತಿಯನ್ನು ಉದ್ಘಾಟಿಸಿದರು. ಭಾರತದೊಂದಿಗಿನ ಆರ್ಥಿಕ ಸಹಕಾರವನ್ನು ಬಲಪಡಿಸುವ ಉದ್ದೇಶದಿಂದ ಜಪಾನ್ ಈ ಕಾರ್ಯಕ್ರಮದ ಪಾಲುದಾರ ರಾಷ್ಟ್ರವಾಗಿ ಭಾಗವಹಿಸಿದೆ. ಈ ಸಹಯೋಗವು ರಾಸಾಯನಿಕ ಮತ್ತು ಪೆಟ್ರೋಕೆಮಿಕಲ್ ವಲಯದಲ್ಲಿ ಪಾಲುದಾರಿಕೆಗೆ ಹೊಸ ಅವಕಾಶಗಳನ್ನು ತೆರೆಯುತ್ತದೆ.

ಭಾರತೀಯ ರಾಸಾಯನಿಕ ಉದ್ಯಮದ ಬೆಳವಣಿಗೆಗೆ ಉತ್ತಮ ಅವಕಾಶಗಳು

- 2030ರ ವೇಳೆಗೆ ಭಾರತದ ರಾಸಾಯನಿಕ ಉದ್ಯಮವು $300 ಬಿಲಿಯನ್ ಮತ್ತು 2040ರ ವೇಳೆಗೆ $1 ಟ್ರಿಲಿಯನ್ ಮೌಲ್ಯಕ್ಕೆ ತಲುಪುವ ನಿರೀಕ್ಷೆಯಿದೆ.
- ಹೆಚ್ಚುತ್ತಿರುವ ದೇಶೀಯ ಬೇಡಿಕೆ, ವಿಸ್ತರಿಸುತ್ತಿರುವ ರಫ್ತು ಅವಕಾಶಗಳು, ಭಾರತದ ದೊಡ್ಡ ಯುವಜನಸಂಖ್ಯೆ, ತುಲನಾತ್ಮಕವಾಗಿ ಕಡಿಮೆ ತಲಾವಾರು ಬಳಕೆ ಹಾಗೂ ಸರ್ಕಾರದ ಬೆಂಬಲದ ಉಪಕ್ರಮಗಳಿಂದಾಗಿ ಈ ವಲಯದ ಬೆಳವಣಿಗೆಯ ನಿರೀಕ್ಷೆಗಳು ಅತ್ಯಂತ ಆಶಾದಾಯಕವಾಗಿವೆ.

8,000ಕ್ಕೂ ಅಧಿಕ ಪ್ರತಿನಿಧಿಗಳು ಭಾಗಿ

- ಜಪಾನ್, ಅಮೆರಿಕ, ಕೆನಡಾ, ಬ್ರಿಟನ್, ಯುರೋಪಿಯನ್ ಒಕ್ಕೂಟದ ದೇಶಗಳು, ಲ್ಯಾಟಿನ್ ಅಮೆರಿಕದ ರಾಷ್ಟ್ರಗಳು ಮತ್ತು ದಕ್ಷಿಣ ಕೊರಿಯಾ ಸೇರಿದಂತೆ ವಿವಿಧ ದೇಶಗಳ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- ಭಾರತ ಮತ್ತು ವಿದೇಶಗಳ 200ಕ್ಕೂ ಹೆಚ್ಚು ಪ್ರದರ್ಶಕರು, ಜಗತ್ತಿನ ವಿವಿಧ ಭಾಗಗಳಿಂದ 8,000ಕ್ಕೂ ಅಧಿಕ ಉದ್ಯಮ ವೃತ್ತಿಪರರು ಹಾಗೂ ಭಾರತದ ಮತ್ತು ಅಂತಾರಾಷ್ಟ್ರೀಯ ಮಟ್ಟದ 50 ಪ್ರಮುಖ ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಸಿಇಒಗಳು) ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ●

> *ಇಂಡಿಯಾ ಕೆಮ್ 2026 ಅರ್ಥಪೂರ್ಣ ಚರ್ಚೆಗಳಿಗೆ ವೇದಿಕೆಯಾಗುವುದರ ಜೊತೆಗೆ, ಈ ವಲಯದ ದೀರ್ಘಕಾಲೀನ ಬೆಳವಣಿಗೆಗೆ ಕೊಡುಗೆ ನೀಡುವ ಪಾಲುದಾರಿಕೆಗಳಿಗೆ ದಾರಿ ಮಾಡಿಕೊಡುತ್ತದೆ. – ನರೇಂದ್ರ ಮೋದಿ, ಪ್ರಧಾನಮಂತ್ರಿ*

ಸರ್ದಾರ್ ಪಟೇಲ್ ಖಚಿತಪಡಿಸಿದರು...

ಹಿಮಾಲಯದಿಂದ ಹಿಂದೂ ಮಹಾಸಾಗರದವರೆಗಿನ ಸುರಕ್ಷಿತ ಭಾರತ

ಸರ್ದಾರ್ ಪಟೇಲ್ ಅವರ 151ನೇ ಜನ್ಮ ವಾರ್ಷಿಕೋತ್ಸವದ (ರಾಷ್ಟ್ರೀಯ ಏಕತಾ ದಿನ) ಅಂಗವಾಗಿ ಆಯೋಜಿಸಲಾಗಿದ್ದ ಭವ್ಯ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶದ ಏಕತೆ, ಅಖಂಡತೆ ಮತ್ತು ಭದ್ರತೆಯನ್ನು ಬಲಪಡಿಸುವಲ್ಲಿ ಸರ್ದಾರ್ ಪಟೇಲ್ ಅವರ ಪಾತ್ರ ಐತಿಹಾಸಿಕವಾದುದು ಎಂದು ಹೇಳಿದರು. ಹಿಮಾಲಯದಿಂದ ಹಿಂದೂ ಮಹಾಸಾಗರದವರೆಗೆ ಭಾರತವನ್ನು ಸುರಕ್ಷಿತವಾಗಿಡಬೇಕೆಂಬ ಸರ್ದಾರ್ ಪಟೇಲ್ ಅವರ ದೂರದೃಷ್ಟಿಯನ್ನು ಮುಂದುವರಿಸಿಕೊಂಡು, ಆಂತರಿಕ ಭದ್ರತೆಯ ರಂಗದಲ್ಲಿ ಕೇಂದ್ರ ಸರ್ಕಾರವು ನಕ್ಸಲಿಸಂಗೆ ನಿರ್ಣಾಯಕ ಹೊಡೆತ ನೀಡಿದೆ. ಕಳೆದ ಒಂದು ದಶಕದಲ್ಲಿ ವಿಶ್ವಬ್ಯಾಂಕ್‌ನ ಅಂಕಿಅಂಶಗಳ ಪ್ರಕಾರ, ಸುಮಾರು 500 ಮಿಲಿಯನ್ (50 ಕೋಟಿ) ನಾಗರಿಕರು ಬಡತನದಿಂದ ಹೊರಬಂದಿದ್ದಾರೆ. ಇದು ಹೊಸ, ಸಶಕ್ತ ಮತ್ತು ಸ್ವಾವಲಂಬಿ ಭಾರತದತ್ತ ಸಾಗುತ್ತಿರುವ ಅಭೂತಪೂರ್ವ ಪರಿವರ್ತನೆಗೆ ಸಾಕ್ಷಿಯಾಗಿದೆ.

ಅಕ್ಟೋಬರ್ 31ರಂದು ಗುಜರಾತ್‌ನ ಏಕತಾ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಮಂತ್ರಿ ಮೋದಿ ಅವರು, ಸ್ವಾತಂತ್ರ್ಯವು ಒಂದು ರಾಷ್ಟ್ರಕ್ಕೆ ತನ್ನ ಭವಿಷ್ಯವನ್ನು ತಾನೇ ನಿರ್ಧರಿಸುವ ಹಕ್ಕನ್ನು ನೀಡಿದರೆ, ಏಕತೆಯು ಇಡೀ ದೇಶಕ್ಕೆ ಒಗ್ಗಟ್ಟಿನಿಂದ ಮುನ್ನಡೆಯುವ ಶಕ್ತಿಯನ್ನು ಒದಗಿಸುತ್ತದೆ ಎಂದು ಹೇಳಿದರು. ಇದೇ ಕಾರಣಕ್ಕೆ ಇಂದು ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವ ಮತ್ತು ರಾಷ್ಟ್ರೀಯ ಏಕತಾ ದಿನಗಳನ್ನು ದೇಶಾದ್ಯಂತ ಅತ್ಯಂತ ಉತ್ಸಾಹ ಮತ್ತು ಸಂಭ್ರಮದಿಂದ ಆಚರಿಸಲಾಗುತ್ತಿದೆ. ರಾಷ್ಟ್ರೀಯ ಏಕತಾ ದಿನವು ಕೇವಲ ಔಪಚಾರಿಕ ಆಚರಣೆಗೆ ಸೀಮಿತವಾಗಿಲ್ಲ; ಸಕ್ರಿಯ ಸಾರ್ವಜನಿಕ ಪಾಲ್ಗೊಳ್ಳುವಿಕೆಯೊಂದಿಗೆ ರಾಷ್ಟ್ರೀಯ ಹೆಮ್ಮೆಯ ಸಂಭ್ರಮಾಚರಣೆಯಾಗಿ ರೂಪುಗೊಂಡಿದೆ. ಸರ್ದಾರ್ ಪಟೇಲ್ ಅವರನ್ನು ಮಹಾನ್ ಐತಿಹಾಸಿಕ ವ್ಯಕ್ತಿತ್ವ ಎಂದು ಬಣ್ಣಿಸಿದ ಪ್ರಧಾನಮಂತ್ರಿಯವರು, ದೇಶದ ಇಂದಿನ ಭೌಗೋಳಿಕ ಮತ್ತು ರಾಜಕೀಯ ಸ್ವರೂಪವನ್ನು ರೂಪಿಸುವಲ್ಲಿ ಅವರು ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ಆಧುನಿಕ ಭಾರತದ ಅಡಿಪಾಯ ಹಾಕಿದ ಸರ್ದಾರ್ ಪಟೇಲ್ ಅವರು, ಭೌಗೋಳಿಕವಾಗಿ ಮಾತ್ರವಲ್ಲದೆ ಭಾವನಾತ್ಮಕವಾಗಿಯೂ ದೇಶವನ್ನು ಒಗ್ಗೂಡಿಸಿದರು. ದೇಶವನ್ನು ಭೌಗೋಳಿಕವಾಗಿ ಮತ್ತು ಭಾವನಾತ್ಮಕವಾಗಿ ಒಗ್ಗೂಡಿಸುವ ಮೂಲಕ ಸರ್ದಾರ್ ಪಟೇಲ್



ಪ್ರಧಾನಮಂತ್ರಿ ಮೋದಿ ಅವರ ಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಬನಸ್ಕಾಂತದಲ್ಲಿ ಪ್ರಧಾನಮಂತ್ರಿ



ಜಾನುವಾರು ತಳಿ ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರ

ಬನಸ್ಕಾಂತ ಜಿಲ್ಲೆಯ ಭಿಲ್ಡಿಯಲ್ಲಿರುವ ಜಾನುವಾರು ತಳಿ ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರವನ್ನು (ಬಿಬಿಆರ್‌ಸಿ) ರಾಷ್ಟ್ರಕ್ಕೆ ಸಮರ್ಪಿಸಲಾಯಿತು. 127 ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಈ ಸಂಸ್ಥೆಯನ್ನು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಶ್ರೇಷ್ಠತಾ ಕೇಂದ್ರವಾಗಿ ಸ್ಥಾಪಿಸಲಾಗಿದೆ. ಕಂಕ್ರೇಜ್ ತಳಿಯ ಜಾನುವಾರುಗಳ ಅಭಿವೃದ್ಧಿಗಾಗಿ ದೇಶದಲ್ಲೇ ವಿಶೇಷವಾಗಿ ಸ್ಥಾಪಿಸಲಾದ ಮೊದಲ ಕೇಂದ್ರ ಇದಾಗಿದೆ.

ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ಪ್ರಮುಖ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ...

- ಥರಾಡ್ ಮತ್ತು ರಾಧನ್‌ಪುರದಲ್ಲಿ ಬನಾಸ್ ಡೈರಿಯ ಎರಡು ಜೈವಿಕ-ಸಿಎನ್‌ಜಿ ಘಟಕಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಈ ಘಟಕಗಳು ಪ್ರತಿದಿನ ಕ್ರಮವಾಗಿ 75 ಮತ್ತು 100 ಮೆಟ್ರಿಕ್ ಟನ್ ಜಾನುವಾರುಗಳ ಸಗಣಿಯನ್ನು ಸಂಸ್ಕರಿಸುವ ಸಾಮರ್ಥ್ಯ ಹೊಂದಿವೆ.
- ಅಹಮದಾಬಾದ್ ಮೆಟ್ರೋದ 2ಎ ಹಂತ (ವಿಮಾನ ನಿಲ್ದಾಣದವರೆಗೆ ವಿಸ್ತರಣೆ) ಮತ್ತು 2ಬಿ ಹಂತ (ಗಿಫ್ಟ್ ಸಿಟಿವರೆಗೆ ವಿಸ್ತರಣೆ) ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. 2ಎ ಹಂತವು 6 ಕಿ.ಮೀ.ಗೂ ಹೆಚ್ಚು ಉದ್ದವಿದ್ದು, ಕೋಟೇಶ್ವರ ರಸ್ತೆಯಿಂದ ವಿಮಾನ ನಿಲ್ದಾಣದವರೆಗೆ ಐದು ನಿಲ್ದಾಣಗಳನ್ನು ಒಳಗೊಂಡಿರುತ್ತದೆ. 2ಬಿ ಹಂತವು 3.3 ಕಿ.ಮೀ.ಗೂ ಹೆಚ್ಚು ಉದ್ದವಿರಲಿದೆ.
- ಅಹಮದಾಬಾದ್–ಮೆಹಸಾನಾ ರಸ್ತೆಯನ್ನು (ರಾಜ್ಯ ಹೆದ್ದಾರಿ–41) ನಾಲ್ಕು ಪಥಗಳಿಂದ ಎಂಟು ಪಥಗಳಿಗೆ ಮೇಲ್ದರ್ಜೆಗೇರಿಸಿ ಬಲಪಡಿಸುವ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಈ ಯೋಜನೆಗೆ ಅಂದಾಜು ₹2,600 ಕೋಟಿ ವೆಚ್ಚವಾಗಲಿದೆ.
- ಮಕ್ಕಳ ಸ್ನೇಹಿ 4,030 ಹೊಸ ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಗುಜರಾತ್‌ನಲ್ಲಿ ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾದ 361 ಮಕ್ಕಳ ಸ್ನೇಹಿ ಅಂಗನವಾಡಿ ಕೇಂದ್ರಗಳನ್ನು ಉದ್ಘಾಟಿಸಲಾಯಿತು.
- ಕೃಷಿ ಮೂಲಸೌಕರ್ಯ ನಿಧಿಯಡಿ ಪೂರ್ಣಗೊಳಿಸಲಾದ ಅಂದಾಜು ₹4,950 ಕೋಟಿ ವೆಚ್ಚದ 521 ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಾಯಿತು.
- ದೇಶಾದ್ಯಂತ ರೈತರಿಗೆ ಆರ್ಥಿಕ ನೆರವು ಒದಗಿಸುವ ಉದ್ದೇಶದಿಂದ ಪಿಎಂ-ಕಿಸಾನ್ ಯೋಜನೆಯ 24ನೇ ಕಂತಿನಡಿ ₹19,000 ಕೋಟಿಯನ್ನು ಬಿಡುಗಡೆ ಮಾಡಲಾಯಿತು.

₹400 ಕೋಟಿ ಮೌಲ್ಯದ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ...

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಏಕತಾ ನಗರದಲ್ಲಿ ₹400 ಕೋಟಿಗೂ ಅಧಿಕ ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು, ಕೆಲವು ಯೋಜನೆಗಳನ್ನು ಉದ್ಘಾಟಿಸಿದರು.

ಅವರು ಆಧುನಿಕ ಭಾರತಕ್ಕೆ ಅಡಿಪಾಯ ಹಾಕಿದರು. ಸಾಂಸ್ಕೃತಿಕ ಪುನರುಜ್ಜೀವನಕ್ಕೆ ನಾಂದಿ ಹಾಡುವಲ್ಲಿಯೂ ಅವರು ನಿರ್ಣಾಯಕ ಪಾತ್ರ ವಹಿಸಿದರು. ಉದಾಹರಣೆಗೆ, ಗುಜರಾತ್‌ನ ಸೋಮನಾಥ ದೇವಾಲಯದ ಪುನರ್‌ನಿರ್ಮಾಣಕ್ಕೆ ನೆರವಾಗುವ ಮೂಲಕ ದೇಶದ ಸಾಂಸ್ಕೃತಿಕ ಪುನರುತ್ಥಾನಕ್ಕೆ ಅವರು ದಾರಿ ಮಾಡಿಕೊಟ್ಟರು. ರಾಷ್ಟ್ರೀಯ ಏಕತೆಯ ಭವ್ಯ ಆಚರಣೆಗಳು, ಜಾಗತಿಕ ವೇದಿಕೆಯಲ್ಲಿ ಭಾರತದ ಹೆಚ್ಚುತ್ತಿರುವ ಸ್ಥಾನಮಾನ, ತ್ವರಿತ ಆರ್ಥಿಕ ಅಭಿವೃದ್ಧಿ ಹಾಗೂ ಕಾಶಿ ವಿಶ್ವನಾಥಧಾಮದಿಂದ ರಾಮಮಂದಿರದವರೆಗೆ ಮುಂದುವರಿದಿರುವ ಸಾಂಸ್ಕೃತಿಕ ಪುನರುಜ್ಜೀವನದತ್ತ ಗಮನ ಸೆಳೆದ ಪ್ರಧಾನಮಂತ್ರಿ ಮೋದಿ ಅವರು, ಇಂದು ದೇಶವು ಸರ್ದಾರ್ ಪಟೇಲ್ ಅವರು ಕನಸು ಕಂಡಿದ್ದ ಹಾದಿಯಲ್ಲಿಯೇ ಮುನ್ನಡೆಯುತ್ತಿದೆ ಎಂದು ದೃಢವಾಗಿ ಹೇಳಿದರು.

ಸರ್ದಾರ್ ಪಟೇಲ್ ಅವರ 150ನೇ ಜನ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ ದೇಶಾದ್ಯಂತ ಎರಡು ವರ್ಷಗಳ ಕಾಲ ನಡೆದ ಸಂಭ್ರಮಾಚರಣೆಯನ್ನು ಸ್ಮರಿಸಿದ ಪ್ರಧಾನಮಂತ್ರಿಯವರು, ಆ ಅವಧಿಯಲ್ಲಿ ದೇಶವು ಹಲವು ಮಹತ್ವದ ಸಂಕಲ್ಪಗಳನ್ನು ಕೈಗೊಂಡಿತ್ತು ಎಂದು ಹೇಳಿದರು. ಸರ್ದಾರ್ ಪಟೇಲ್ ಅವರ 151ನೇ ಜನ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ, ಅತ್ಯಂತ ಕಡಿಮೆ ಅವಧಿಯಲ್ಲಿಯೇ ದೇಶವು ಆ ಸಂಕಲ್ಪಗಳನ್ನು ಈಡೇರಿಸಿರುವುದಕ್ಕೆ ಅವರು ಸಂತಸ ವ್ಯಕ್ತಪಡಿಸಿದರು. ಪ್ರಧಾನಮಂತ್ರಿ ಮೋದಿ ಅವರು, "ಈ ಎರಡು ವರ್ಷಗಳ ಅವಧಿಯಲ್ಲಿ, ಹಿಂದೆಂದೂ ಸಾಧಿಸದಿದ್ದ ಹಲವು ಮೈಲಿಗಲ್ಲುಗಳನ್ನು ದೇಶವು ಸಾಧಿಸಿದೆ" ಎಂದು ಹೇಳಿದರು.

ಸರ್ದಾರ್ ಪಟೇಲ್ ಅವರ 150ನೇ ಜನ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅವರ ಪಾದಗಳ ಬಳಿ ಕೈಗೊಂಡಿದ್ದ ಸಂಕಲ್ಪವನ್ನು ಸ್ಮರಿಸಿದ ಪ್ರಧಾನಮಂತ್ರಿಯವರು, ನಕ್ಸಲಿಸಂ ಮತ್ತು ಮಾವೋವಾದಿ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವವರೆಗೆ ವಿಶ್ರಮಿಸುವುದಿಲ್ಲ ಎಂಬ ಪ್ರತಿಜ್ಞೆಯನ್ನು ದೇಶ ಕೈಗೊಂಡಿತ್ತು ಎಂದು ಹೇಳಿದರು. ಕೇವಲ ಒಂದು ವರ್ಷದೊಳಗೆ ಎಡಪಂಥೀಯ ಉಗ್ರವಾದದ ಬೆನ್ನುಮೂಳೆಯನ್ನೇ ಮುರಿಯಲಾಗಿದೆ ಎಂದು ಅವರು ತಿಳಿಸಿದರು. ದಶಕಗಳಿಂದ ಹಿಂಸಾಚಾರದಿಂದ ನಲುಗಿದ್ದ ಪ್ರದೇಶಗಳು ಈಗ ಅಭಿವೃದ್ಧಿಯ ಮುಖ್ಯವಾಹಿನಿಗೆ ಸೇರ್ಪಡೆಯಾಗುತ್ತಿವೆ ಎಂದರು. ವಿಶ್ವಬ್ಯಾಂಕ್‌ನ ವರದಿಯನ್ನು ಉಲ್ಲೇಖಿಸಿದ ಅವರು, 2024ರವರೆಗಿನ ಹಿಂದಿನ 10–12 ವರ್ಷಗಳ ಅವಧಿಯಲ್ಲಿ 500 ಮಿಲಿಯನ್ (50 ಕೋಟಿ) ಭಾರತೀಯರು ಬಡತನದಿಂದ ಹೊರಬಂದಿದ್ದಾರೆ ಎಂದು ತಿಳಿಸಿದರು. ಈ ಹಿಂದೆ ಪ್ರತಿ 100 ಜನರಲ್ಲಿ 27 ಮಂದಿ ತೀವ್ರ ಬಡತನದಲ್ಲಿ ಬದುಕುತ್ತಿದ್ದರೆ, ಈಗ ಆ ಪ್ರಮಾಣ 3ಕ್ಕಿಂತಲೂ ಕಡಿಮೆಯಾಗಿದೆ ಎಂದು ಹೇಳಿದರು. ●

12ನೇ ಸಂವಿಧಾನ ದಿನಾಚರಣೆ ವಿಶೇಷ

ಮುಖಪುಟ ಲೇಖನ

'ಭಾರತದ ಪ್ರಜೆಗಳಾದ ನಾವು' ಪ್ರತಿಯೊಬ್ಬ ನಾಗರಿಕನ ಸಂಭ್ರಮಾಚರಣೆಯಾದಾಗ



36 ಕೋಟಿ ಜನಸಂಖ್ಯೆ, ಅಲ್ಪ ಸಂಪನ್ಮೂಲ ಮತ್ತು ಅಂತ್ಯವಿಲ್ಲದಷ್ಟು ಸವಾಲುಗಳಿದ್ದ ಹಾಗೂ ಹೊಸದಾಗಿ ಸ್ವತಂತ್ರಗೊಂಡ ದೇಶವನ್ನು ಊಹಿಸಿಕೊಳ್ಳಿ. 1949ರ ನವೆಂಬರ್ 26 ರಂದು, ಸಂವಿಧಾನವನ್ನು ಅಂಗೀಕರಿಸಿ, ಪ್ರತಿಯೊಬ್ಬ ಭಾರತೀಯನ ಕನಸುಗಳು, ಹೋರಾಟಗಳು ಮತ್ತು ಆಕಾಂಕ್ಷೆಗಳನ್ನು ಈಡೇರಿಸಲು ಎಡೆ ಮಾಡಿಕೊಡಲಾಯಿತು. ದುರದೃಷ್ಟವಶಾತ್, ಈ ಐತಿಹಾಸಿಕ ದಿನಾಂಕವು ಇತಿಹಾಸದಲ್ಲಿ ಕಳೆದುಹೋಗಿತ್ತು. ಆದಾಗ್ಯೂ, 2015ರಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಮರೆತು ಹೋದ ದಿನಾಂಕಕ್ಕೆ ಪುನಶ್ಚೇತನ ನೀಡಿದರು, ಸಂವಿಧಾನ ದಿನವನ್ನು ಪ್ರತಿಯೊಬ್ಬ ನಾಗರಿಕನ ನೈಜ ಆಚರಣೆಯಾಗಿ ಪರಿವರ್ತಿಸಿದರು.


ಈ ನವೆಂಬರ್ 26ರಂದು, ರಾಷ್ಟ್ರವು ತನ್ನ 12 ನೇ ಸಂವಿಧಾನ ದಿನವನ್ನು ಆಚರಿಸಲಿದೆ - ಇದು ನಿರಂತರ 77 ವರ್ಷಗಳ ಪ್ರಯಾಣದ ಆಚರಣೆಯಾಗಿದೆ. "ನಾವು ಜನರು" ("We the People") ಎಂಬ ಕರೆ ಇನ್ನು ಮುಂದೆ ಪೀಠಿಕೆಯಲ್ಲಿ ಕೇವಲ ಮೂರು ಪದಗಳಿಗೆ ಸೀಮಿತವಾಗಿರುವುದಿಲ್ಲ; ಇಂದು, ಈ ಮನೋಭಾವವು ನಿಷ್ಪಕ್ಷಪಾತವಾದ ಪ್ರತಿಯೊಂದು ಹೊಸ ಕಾನೂನಿನಲ್ಲಿ ಜೀವಂತವಾಗಿದೆ, ಪ್ರತಿಯೊಬ್ಬ ಫಲಾನುಭವಿಯ ತಲೆಯ ಮೇಲೆ ಶಾಶ್ವತ ಸೂರಾಗಿದೆ, ರೈತರ ಖಾತೆಗಳಿಗೆ ನೇರವಾಗಿ ವರ್ಗಾಯಿಸುವ ಆರ್ಥಿಕ ಬೆಂಬಲದಲ್ಲಿ ಪ್ರತಿಧ್ವನಿಸುತ್ತದೆ ಮತ್ತು ಸರಳೀಕೃತ ಜಿ ಎಸ್ ಟಿ ಚೌಕಟ್ಟಿನಲ್ಲಿ ಅಭಿವ್ಯಕ್ತಿಸುತ್ತದೆ. 'ಪ್ರಜಾಪ್ರಭುತ್ವದ ತಾಯಿ' ಆಗಿರುವ ಭಾರತವು ಈಗ ತನ್ನ ಹೆಮ್ಮೆಯನ್ನು ಜಾಗತಿಕ ವೇದಿಕೆಯಲ್ಲಿ ಅಣುರಣಿಸುತ್ತಿದೆ. ಇದು ಸಂಕಲ್ಪದಿಂದ ಸಿದ್ಧಿಯವರೆಗೆ ರಾಷ್ಟ್ರವನ್ನು ವಿಕಸಿತ ಭಾರತದತ್ತ ಕೊಂಡೊಯ್ಯುವ ಪಯಣವಾಗಿದೆ. ಈ ಅನ್ವೇಷಣೆಯಲ್ಲಿ, ಸಂವಿಧಾನವು ಇನ್ನು ಮುಂದೆ ಕೇವಲ ಕಾನೂನು ಪಠ್ಯವಾಗಿ ಉಳಿಯುವುದಿಲ್ಲ; ಬದಲಾಗಿ ಇದು 1.4 ಶತಕೋಟಿ ಭಾರತೀಯರ ಆತ್ಮೀಯ ಸಂಬಂಧವಾಗಿದೆ.

ಮಾನವ ರಚಿತ ಯಾವುದೇ ದಾಖಲೆಯನ್ನು ನಿಜವಾಗಿಯೂ 'ಅಮರ' ಎಂದು ಕರೆಯಬಹುದಾದರೆ, ಅದು ಭಾರತದ ಸಂವಿಧಾನವೇ ಆಗಿದೆ. ಕಳೆದ 12 ವರ್ಷಗಳಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಂವಿಧಾನವನ್ನು ರಾಷ್ಟ್ರದ ಪವಿತ್ರ ಗ್ರಂಥ ಮತ್ತು ಮಾರ್ಗದರ್ಶಿ ಬೆಳಕು ಎಂದು ಪರಿಗಣಿಸಿದ್ದಾರೆ, ದಶಕಗಳಿಂದ ದೇಶಕ್ಕೆ ಅಸ್ಪಷ್ಟವಾಗಿದ್ದ ಅಭಿವೃದ್ಧಿಯ ಅಡಿಪಾಯವನ್ನು ನಿರ್ಮಿಸಲು ಬಳಸಿದ್ದಾರೆ. ಒಂದು ಕಾಲದಲ್ಲಿ ರಾಜಕಾರಣಿಗಳು 'ಹಣೆಬರಹ' ಎಂದು ಹೇಳಿ, ನುಣುಚಿಕೊಂಡು ಮುಂದುವರಿಸಿದ್ದ ಸಮಸ್ಯೆಗಳನ್ನು ಪ್ರಧಾನಮಂತ್ರಿಯವರು ಎದುರಿಸಿದ್ದು ಮಾತ್ರವಲ್ಲದೆ ಪರಿಹರಿಸಿದ್ದಾರೆ ಕೂಡ. ಸಂವಿಧಾನವು ಈಗ ಕೇವಲ ಕಾನೂನು ಚೌಕಟ್ಟಿಗಿಂತ ಮಿಗಿಲಾಗಿದೆ. ಇದು ಕೇವಲ ಕಾನೂನು ದಾಖಲೆಗಿಂತ ಮೇಲಿದೆ; ನಿಜವಾದ ಅರ್ಥದಲ್ಲಿ, ಇದು ಸಾಮಾಜಿಕ ದಾಖಲೆಯಾಗಿ ವಿಕಸನಗೊಂಡಿದೆ. ಈ ನವೆಂಬರ್ 26 ರಂದು, ರಾಷ್ಟ್ರವು ತನ್ನ 12 ನೇ ಸಂವಿಧಾನ ದಿನವನ್ನು ಆಚರಿಸುತ್ತಿದೆ, ಸಂವಿಧಾನವನ್ನು ಅಂಗೀಕರಿಸಿದ 77 ವರ್ಷಗಳನ್ನು ಸಂಕೇತಿಸುತ್ತದೆ. ಈ ಸಂದರ್ಭದಲ್ಲಿ, "ಎಲ್ಲರೊಂದಿಗೆ, ಎಲ್ಲರ ವಿಕಾಸ, ಎಲ್ಲರ ವಿಶ್ವಾಸ, ಸರ್ವರ ಪ್ರಯತ್ನ" ("ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್") ಎಂಬ ಮಂತ್ರವು ಕಳೆದ ಒಂದು ದಶಕ ಅಥವಾ ಅದಕ್ಕೂ ಹೆಚ್ಚು ಕಾಲದಿಂದ ಸಂವಿಧಾನದ ಸ್ಫೂರ್ತಿಯ ಅತ್ಯಂತ ಪ್ರಬಲ ಅಭಿವ್ಯಕ್ತಿಯಾಗಿ ಹೊರಹೊಮ್ಮಿದೆ.

ಮರೆತುಹೋದ ದಿನಾಂಕದಿಂದ ರಾಷ್ಟ್ರೀಯ ಆಚರಣೆಯವರೆಗೆ

ನವೆಂಬರ್ 26, 1949 ರಂದು ಭಾರತದ ಸಂವಿಧಾನವನ್ನು ಅಂಗೀಕರಿಸಿದ ಈ ಐತಿಹಾಸಿಕ ದಿನವು ದಶಕಗಳ ಕಾಲ ಇತಿಹಾಸದ ಪುಟಗಳಲ್ಲಿ ಹುದುಗಿಹೋಗಿತ್ತು. ಸಂವಿಧಾನವನ್ನು ಅಂಗೀಕರಿಸಿದ 65 ವರ್ಷಗಳ ನಂತರ 2015ರ ನವೆಂಬರ್ 19 ರಂದು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಈ ದಿನಾಂಕವನ್ನು "ಸಂವಿಧಾನ ದಿನ" ಎಂದು ಔಪಚಾರಿಕವಾಗಿ ಆಚರಿಸಲು ಅಧಿಸೂಚನೆ ಹೊರಡಿಸಿತು. ಈ ಉಪಕ್ರಮವು ಕಾಕತಾಳೀಯವೆಂಬಂತೆ ಡಾ. ಭೀಮರಾವ್ ಅಂಬೇಡ್ಕರ್ ಅವರ 125 ನೇ ಜನ್ಮ ದಿನಾಚರಣೆಯ ಸಂಸ್ಮರಣೆಯ ಜೊತೆಗೂಡಿತ್ತು. ನಮ್ಮ ಸಂವಿಧಾನದ ಶಿಲ್ಪಿಯನ್ನು ಶಾಶ್ವತವಾಗಿ ಸ್ಮರಿಸುವುದನ್ನು ಖಚಿತಪಡಿಸಿಕೊಳ್ಳಲು ಇದಕ್ಕಿಂತ ಪವಿತ್ರ ಸಂದರ್ಭ ಬೇರೊಂದಿಲ್ಲ ಎಂದು ಪ್ರಧಾನಮಂತ್ರಿ ಮೋದಿ ಸ್ವತಃ ಹೇಳಿದ್ದಾರೆ. ಕುತೂಹಲಕಾರಿ ಸಂಗತಿಯೆಂದರೆ, ಪ್ರಧಾನಮಂತ್ರಿ ಮೋದಿ ಅವರು ಸಂವಿಧಾನಕ್ಕಾಗಿ ವಿಶೇಷ ದಿನವನ್ನು ಪ್ರತಿಪಾದಿಸುವುದು ಇದೇ ಮೊದಲೇನಲ್ಲ; 2009 ರಲ್ಲಿ, ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ಅವರ ರಾಜ್ಯ ಸರ್ಕಾರವು ಸಂವಿಧಾನದ 60 ನೇ ವಾರ್ಷಿಕೋತ್ಸವವನ್ನು ಅದ್ಧೂರಿಯಾಗಿ ಆಚರಿಸಿತ್ತು. ಮೆರವಣಿಗೆಯನ್ನು ಆಯೋಜಿಸಿ, ಸಂವಿಧಾನದ ಪ್ರತಿಕೃತಿಯನ್ನು ಆನೆಯ ಮೇಲಿಟ್ಟು ಸಂಭ್ರಮಿಸಲಾಯಿತು,

ಮುಖಪುಟ ಲೇಖನ



ರಾಷ್ಟ್ರಮೊದಲು, ಸಂವಿಧಾನ ಮೊದಲು

ಒಂದು ಪ್ರಯಾಣ ಒಂದು ಸಂಯುಕ್ತ ನೋಟ

ಸಂವಿಧಾನದ ಕರಡು ರಚನೆಗೆ ತೆಗೆದುಕೊಂಡ ಸಮಯ 2 ವರ್ಷ, 11 ತಿಂಗಳು, 18 ದಿನಗಳು.

60 ಕ್ಕೂ ಹೆಚ್ಚು ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿದ ನಂತರ ಮತ್ತು 2,000 ಕ್ಕೂ ಹೆಚ್ಚು ತಿದ್ದುಪಡಿಗಳನ್ನು ಸೇರಿಸಿದ ನಂತರ ಇದನ್ನು ಅಂತಿಮಗೊಳಿಸಲಾಯಿತು.

26 ನವೆಂಬರ್ 1949
ಸಂವಿಧಾನವನ್ನು ಅಂಗೀಕರಿಸಲಾಯಿತು.

26 ಜನವರಿ 1950
ಸಂವಿಧಾನವು ಜಾರಿಗೆ ಬಂದಿತು; ಭಾರತವು ಗಣರಾಜ್ಯವಾಯಿತು

19 ನವೆಂಬರ್ 2015
ನವೆಂಬರ್ 26 ಅನ್ನು 'ಸಂವಿಧಾನ ದಿನವನ್ನಾಗಿ ಆಚರಿಸಲು ಅಧಿಸೂಚನೆ ಹೊರಡಿಸಲಾಯಿತು'

2024
ಸಂವಿಧಾನ ಅಂಗೀಕಾರದ 75ನೇ ವಾರ್ಷಿಕೋತ್ಸವ; 10ನೇ ಸಂವಿಧಾನ ದಿನವನ್ನು ಆಚರಿಸಲಾಯಿತು.

25 ಜೂನ್ 2025
ತುರ್ತು ಪರಿಸ್ಥಿತಿಯ 50 ನೇ ವಾರ್ಷಿಕೋತ್ಸವ; ಸಂವಿಧಾನ್ ಹತ್ಯ ದಿವಸ್ ಎಂದು ಸ್ಮರಿಸಲಾಯಿತು.

26 ನವೆಂಬರ್ 2025
76 ನೇ ಸಂವಿಧಾನ ದಿನ; 'Constitution@75' ಅಭಿಯಾನದ ಸಮಾರೋಪ; ಸಂವಿಧಾನದ ಅನುವಾದಿತ ಆವೃತ್ತಿಯನ್ನು ಹೆಚ್ಚುವರಿಯಾಗಿ 9 ಭಾಷೆಗಳಲ್ಲಿ ಬಿಡುಗಡೆ ಮಾಡಲಾಯಿತು.

26 ನವೆಂಬರ್ 2026
12 ನೇ ಸಂವಿಧಾನ ದಿನ; ಸಂವಿಧಾನವನ್ನು ಅಂಗೀಕರಿಸಿದ 77ನೇ ವಾರ್ಷಿಕೋತ್ಸವ.

ಅಂದಿನ ಮುಖ್ಯಮಂತ್ರಿ ಮೋದಿ ಸ್ವತಃ ಮುಂಚೂಣಿಯಲ್ಲಿ ನಡೆಯುತ್ತಿದ್ದರು. ನವೆಂಬರ್ 26 ರ ಹೊರತು ಜನವರಿ 26 ರ ಮಹತ್ವವು ಅಪೂರ್ಣವಾಗಿರುತ್ತದೆ. ವಾಸ್ತವವಾಗಿ, ಜನವರಿ 26 ರ ಶಕ್ತಿಯು ನವೆಂಬರ್ 26 ರಲ್ಲಿ ಬೇರೂರಿದೆ. ಈ ದೃಷ್ಟಿಕೋನದಿಂದ ಮಾರ್ಗದರ್ಶಿತವಾದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಂವಿಧಾನ ದಿನವನ್ನು ಸಾರ್ವಜನಿಕ ಆಚರಣೆಯಾಗಿ ಪರಿವರ್ತಿಸಿದರು. ಇಂದು, ಪ್ರತಿ ವರ್ಷ ಕೇಂದ್ರದಿಂದ ಜಿಲ್ಲೆಗಳವರೆಗೆ ಭಾಷಣ ಸ್ಪರ್ಧೆಗಳು, ಮೂಲಭೂತ ಕರ್ತವ್ಯಗಳ ಕುರಿತು ಉಪನ್ಯಾಸಗಳು, ಪೀಠಿಕೆಯ ಸಾಮೂಹಿಕ ವಾಚನ, ಚಲನಚಿತ್ರ ಪ್ರದರ್ಶನಗಳು ಮತ್ತು ಶಾಲೆಗಳಲ್ಲಿ "ನಿಮ್ಮ ಸಂವಿಧಾನವನ್ನು ತಿಳಿಯಿರಿ" ಎಂಬಂತಹ ಉಪಕ್ರಮಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ನವೆಂಬರ್ 26, 2025 ರಂದು, 76 ನೇ ಸಂವಿಧಾನ ದಿನದಂದು, ಸಂವಿಧಾನ ಸದನದ ಐತಿಹಾಸಿಕ ಸೆಂಟ್ರಲ್ ಹಾಲ್ ನಲ್ಲಿ ರಾಷ್ಟ್ರೀಯ ಸಮಾರಂಭವನ್ನು ನಡೆಸಲಾಯಿತು, ಅಧ್ಯಕ್ಷತೆ ವಹಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಉಪರಾಷ್ಟ್ರಪತಿ, ಪ್ರಧಾನಮಂತ್ರಿ, ಲೋಕಸಭೆಯ ಸ್ಪೀಕರ್ ಮತ್ತು ಸಂಸತ್ತಿನ ಉಭಯ ಸದನಗಳ ಸದಸ್ಯರು ಇದರಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ಭಾರತದ ಸಂವಿಧಾನದ ಅನುವಾದಿತ ಆವೃತ್ತಿಯನ್ನು ಮಲಯಾಳಂ, ಮರಾಠಿ, ನೇಪಾಳಿ, ಪಂಜಾಬಿ,



ಬೋಡೋ, ಕಾಶ್ಮೀರಿ, ತೆಲುಗು, ಒಡಿಯಾ ಮತ್ತು ಅಸ್ಸಾಮಿ ಒಟ್ಟು ಒಂಬತ್ತು ಹೆಚ್ಚುವರಿ ಭಾಷೆಗಳಲ್ಲಿ ಬಿಡುಗಡೆ ಮಾಡಲಾಯಿತು.

"भारत के संविधान में कला और कैलीग्राफी" ('ಭಾರತದ ಸಂವಿಧಾನದಲ್ಲಿ ಕಲೆ ಮತ್ತು ಕ್ಯಾಲಿಗ್ರಫಿ') ಎಂಬ ಶೀರ್ಷಿಕೆಯ ಸ್ಮರಣಾರ್ಥ ಕಿರುಪುಸ್ತಕವನ್ನು ಸಹ ಅನಾವರಣಗೊಳಿಸಲಾಯಿತು. ಅದೇ ದಿನ, ಡಾ. ಅಂಬೇಡ್ಕರ್ ಪ್ರತಿಷ್ಠಾನ ತನ್ನ ಒಂದು ವರ್ಷದ 'Constitution@75' ಅಭಿಯಾನವನ್ನು 'ಜೀವಂತ ಸಂವಿಧಾನ: ಪ್ರಜಾಪ್ರಭುತ್ವ, ಘನತೆ ಮತ್ತು ಅಭಿವೃದ್ಧಿಯ 75 ವರ್ಷಗಳು' ಎಂಬ ವಿಷಯದ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸುವ ಮೂಲಕ ಸಮಾರೋಪಗೊಳಿಸಿತು. ಆದಾಗ್ಯೂ, ಸಂವಿಧಾನ ದಿನದ ಮಹತ್ವವನ್ನು ನಿಜವಾಗಿಯೂ ಗ್ರಹಿಸಲು, ಪ್ರತಿಯೊಬ್ಬರೂ ನಮ್ಮ ಪ್ರಜಾಪ್ರಭುತ್ವ ಇತಿಹಾಸದ ಕರಾಳ ಅಧ್ಯಾಯದತ್ತ ತಿರುಗಿ ನೋಡಲೇ ಬೇಕು – ಒಂದು ಕಾಲಘಟ್ಟದಲ್ಲಿ ನಾಗರಿಕರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳಲಾಗಿತ್ತು, ಮಾಧ್ಯಮಗಳ ಮೇಲೆ ಸೆನ್ಸಾರ್‌ಶಿಪ್ ಹೇರಲಾಗಿತ್ತು ಮತ್ತು ಭಿನ್ನಮತದ ಧ್ವನಿಗಳನ್ನು ಜೈಲು ಕಂಬಿಗಳ ಹಿಂದೆ ಅಡಗಿಸಲಾಯಿತು.

ಸಂವಿಧಾನ ಮತ್ತು ತುರ್ತುಪರಿಸ್ಥಿತಿಯ ಕರಾಳ ರಾತ್ರಿ

ಸಂವಿಧಾನ ದಿನವನ್ನು ಹೆಮ್ಮೆಯಿಂದ ಆಚರಿಸಲಾಗುತ್ತದೆ ಮತ್ತು ಇದು ರಾಷ್ಟ್ರೀಯ ಹಬ್ಬವಾಗಿ ವಿಕಸನಗೊಂಡಿದೆ. ಆದರೂ, ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಳಿಸಿಹಾಕಿದ ಕರಾಳ ಅಧ್ಯಾಯವೊಂದರ ಸಮಯವಿತ್ತು. ಜೂನ್ 25, 1975 ರಂದು, "ಆಂತರಿಕ ಕ್ಷೋಭೆ" ಎಂದು ಉಲ್ಲೇಖಿಸಿ ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಲಾಯಿತು. ಸಂಪುಟದ ಅನುಮೋದನೆಯಿಲ್ಲದೆ ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದಿದ್ದರಿಂದ ಇದು ಕಂಡು ಕೇಳರಿಯದಂತಿತ್ತು. ಯಾವುದೇ ಸರ್ಕಾರ ಸ್ಥಾಪಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಆದಾಗ್ಯೂ, ಈ ಸಂದರ್ಭದಲ್ಲಿ,

"ನಾವು ನಮ್ಮ ಪ್ರಜಾಸತ್ತಾತ್ಮಕ ಆದರ್ಶಗಳು ಮತ್ತು ನಮ್ಮ ಸಂವಿಧಾನವನ್ನು ಸರ್ವೋಚ್ಚ ಗೌರವದಿಂದ ನೋಡುತ್ತೇವೆ. ಆದ್ದರಿಂದ ನಾವು ಜೂನ್ 25 ಅನ್ನು ಎಂದಿಗೂ ಮರೆಯಲಾರೆವು. ಇದು ನಮ್ಮ ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಲಾದ ದಿನ. ಇದು ಭಾರತದ ಇತಿಹಾಸದ ಒಂದು ಕರಾಳ ಅಧ್ಯಾಯ. ಪ್ರಜಾಪ್ರಭುತ್ವದ ಪರವಾಗಿ ನಿಂತವರ ಮೇಲೆ ನಡೆದ ದೌರ್ಜನ್ಯಗಳು ಎಷ್ಟು ತೀವ್ರವಾಗಿದ್ದವು ಎಂದರೆ ಇಂದಿಗೂ ಅವರ ಬಗ್ಗೆ ಯೋಚಿಸುತ್ತಿದ್ದರೆ ನಡುಕ ಹುಟ್ಟುತ್ತದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ


ಮಂತ್ರಿಗಳನ್ನು ಸಹ ಕತ್ತಲಲ್ಲಿ ಇರಿಸಲಾಯಿತು. ಪರಿಣಾಮವಾಗಿ, ಅಂದಿನ ರಾಷ್ಟ್ರಪತಿಗಳು ಈ ವಿಷಯವನ್ನು ಸಂಪುಟದ ಮುಂದೆ ಇಡಬೇಕೆಂದು ವಿನಂತಿಸಿದರು, ಇದರಿಂದಾಗಿ ಜೂನ್ 26 ರಂದು ಬೆಳಗ್ಗೆ 6:00 ಗಂಟೆಗೆ ಸಚಿವ ಸಂಪುಟ ಸಭೆ ಕರೆಯಲಾಯಿತು. ಅದೇ ದಿನ, ಪತ್ರಿಕಾ ಮಾಧ್ಯಮಗಳ ಮೇಲೆ ಸೆನ್ಸಾರ್ ಶಿಪ್ ವಿಧಿಸುವ ಆದೇಶವನ್ನು ಹೊರಡಿಸಲಾಯಿತು. ಆ ಅವಧಿಯನ್ನು ಪ್ರತಿಬಿಂಬಿಸುತ್ತಾ, ಪ್ರಸಾರ ಭಾರತಿಯ ಮಾಜಿ ಅಧ್ಯಕ್ಷ ಎ. ಸೂರ್ಯ ಪ್ರಕಾಶ್ ಹೀಗೆ ಬರೆಯುತ್ತಾರೆ: "ಇದು ಬಹುಶಃ ಅಪರೂಪದ ಉದಾಹರಣೆಯಾಗಿದೆ - ತುರ್ತು ಪರಿಸ್ಥಿತಿಯ ಸುದ್ದಿಗಳು ಪ್ರಕಟವಾಗದಂತೆ ತಡೆಯಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ದೆಹಲಿಯ ಬಹದ್ದೂರ್ ಶಾ ಜಾಫರ್ ಮಾರ್ಗದಲ್ಲಿದ್ದ ಪತ್ರಿಕಾ ಕಚೇರಿಗಳಿಗೆ ವಿದ್ಯುತ್ ಸರಬರಾಜನ್ನು ಜೂನ್ 25 ರ ರಾತ್ರಿಯೇ ಕಡಿತಗೊಳಿಸಲಾಗಿತ್ತು."

ಸಂವಿಧಾನ ದಿನ...

1949 ನವೆಂಬರ್ 26ರಂದು, ಭಾರತದ ಸಂವಿಧಾನ ರಚನಾ ಸಭೆಯು ಸಂವಿಧಾನವನ್ನು ಅಂಗೀಕರಿಸಿತು. ಭಾರತದ ಸಂವಿಧಾನವು 1950 ಜನವರಿ 26 ರಂದು ಜಾರಿಗೆ ಬಂದಿತು. ಈ ಪವಿತ್ರ ಸಂದರ್ಭವನ್ನು ಗೌರವಿಸಲು 2015 ರಲ್ಲಿ, ಸರ್ಕಾರವು ನವೆಂಬರ್ 26 ಅನ್ನು 'ಸಂವಿಧಾನ ದಿನ' ಎಂದು ಘೋಷಿಸಿತು.

ಭಾರತದ ಸಂವಿಧಾನದ ಬಗ್ಗೆ ಕೆಲವು ಕುತೂಹಲಕಾರಿ ಸಂಗತಿಗಳು

- ಭಾರತದ ಜನರ ಮೊದಲ ಪ್ರಾತಿನಿಧಿಕ ಸಂಸ್ಥೆಯಾದ ಸಂವಿಧಾನ ರಚನಾ ಸಭೆಯು ಡಿಸೆಂಬರ್ 9, 1946 ರಂದು ತನ್ನ ಮಹತ್ವದ ಕಾರ್ಯವನ್ನು ಪ್ರಾರಂಭಿಸಿತು.
- ಸುಮಾರು ಮೂರು ವರ್ಷಗಳ ಕಾಲ ನಡೆದ ಸಂವಿಧಾನದ ಕರಡು ರಚನೆಯ ಪ್ರಕ್ರಿಯೆಯುದ್ದಕ್ಕೂ, 53,000 ಕ್ಕೂ ಹೆಚ್ಚು ನಾಗರಿಕರು ಸಂವಿಧಾನ ರಚನಾ ಸಭೆಯ ಸಾರ್ವಜನಿಕ ಗ್ಯಾಲರಿಯಿಂದ ಪರ್ಯಾಲೋಚನೆಗಳು ಮತ್ತು ಚರ್ಚೆಗಳನ್ನು ವೀಕ್ಷಿಸಿದರು.
- ಸಂವಿಧಾನದ ಕರಡು ರಚನೆಗೆ 2 ವರ್ಷ, 11 ತಿಂಗಳು ಮತ್ತು 18 ದಿನಗಳು ಬೇಕಾಯಿತು.
- ಸಂವಿಧಾನದ ವಿವಿಧ ನಿಬಂಧನೆಗಳ ಬಗ್ಗೆ 1,100 ಗಂಟೆ 32 ನಿಮಿಷಗಳ ಚರ್ಚೆ ನಡೆಯಿತು.
- ಏಳು ಸದಸ್ಯರ ಕರಡು ರಚನಾ ಸಮಿತಿಯು ಅದಕ್ಕೆ ಅಂತಿಮ ರೂಪ ನೀಡಿತು.
- ಭಾರತದ ಸಂವಿಧಾನವು ವಿಶ್ವದ ಅತಿ ದೊಡ್ಡ ಲಿಖಿತ ಸಂವಿಧಾನವಾಗಿದೆ. ಅದರ ಪ್ರಾರಂಭದ ಸಮಯದಲ್ಲಿ, ಇದು 395 ಅನುಚ್ಛೇದಗಳು, 22 ಭಾಗಗಳು ಮತ್ತು 8 ಅನುಸೂಚಿಗಳನ್ನು ಒಳಗೊಂಡಿತ್ತು.



- ಭಾರತದ ಸಂವಿಧಾನವನ್ನು ಟೈಪ್ ಮಾಡಲಾಗಿಲ್ಲ ಅಥವಾ ಮುದ್ರಿಸಲಾಗಿಲ್ಲ. ಇದು ಸುಮಾರು 90,000 ಪದಗಳನ್ನು ಒಳಗೊಂಡಿರುವ ಇಂಗ್ಲಿಷ್ ಮತ್ತು ಹಿಂದಿ ಎರಡರಲ್ಲೂ ಕೈಬರಹದಿಂದ ಕೂಡಿದೆ..
- ಆಚಾರ್ಯ ನಂದಲಾಲ್ ಬೋಸ್ ಅವರ ಮಾರ್ಗದರ್ಶನದಲ್ಲಿ ಶಾಂತಿನಿಕೇತನದ ಕಲಾವಿದರು ಸಂವಿಧಾನವನ್ನು ಕಲಾತ್ಮಕವಾಗಿ ಅಲಂಕರಿಸಿದ್ದಾರೆ. ದೆಹಲಿಯ ಪ್ರೇಮ್ ಬಿಹಾರಿ ನಾರಾಯಣ್ ರೈಜಾದಾ ಅವರು ಕ್ಯಾಲಿಗ್ರಫಿ ಮಾಡಿದ್ದಾರೆ.
- ಭಾರತದ ಸಂವಿಧಾನದ ಮೂಲ ಪ್ರತಿಗಳನ್ನು ಭಾರತದ ಸಂಸತ್ತಿನ ಗ್ರಂಥಾಲಯದಲ್ಲಿ ವಿಶೇಷ ಸಾರಜನಕ ತುಂಬಿದ ಸಂಪುಟಗಳಲ್ಲಿ ಇರಿಸಲಾಗಿದೆ.
- ಸಂವಿಧಾನದ ಪ್ರತಿಯೊಂದು ಭಾಗವು ಭಾರತೀಯ ಇತಿಹಾಸದ ಒಂದು ಹಂತ ಅಥವಾ ದೃಶ್ಯವನ್ನು ಚಿತ್ರಿಸುವ ಚಿತ್ರಣದೊಂದಿಗೆ ಪ್ರಾರಂಭವಾಗುತ್ತದೆ. ಈ ಚಿತ್ರಗಳನ್ನು ನಂದಲಾಲ್ ಬೋಸ್ ರಚಿಸಿದ್ದಾರೆ. ಸಂವಿಧಾನದಲ್ಲಿ ಅಂತಹ ಒಟ್ಟು 22 ಚಿತ್ರಗಳು ಮತ್ತು ಕಲಾಕೃತಿಗಳಿವೆ.



- ಜನವರಿ 24, 1950 ರಂದು, ಸಂವಿಧಾನ ರಚನಾ ಸಭೆಯ 284 ಸದಸ್ಯರು ನವದೆಹಲಿಯ ಸಂವಿಧಾನ ರಚನಾ ಸಭಾಂಗಣದಲ್ಲಿ ಭಾರತದ ಸಂವಿಧಾನಕ್ಕೆ ಸಹಿ ಹಾಕಿದರು.
- ಸಂವಿಧಾನ ರಚನಾ ಸಭೆಯ ಅಂತಿಮ ಸಭೆ ಜನವರಿ 24, 1950 ರಂದು ನಡೆಯಿತು. ಇದೇ ಸಭೆಯಲ್ಲಿ ಡಾ. ರಾಜೇಂದ್ರ ಪ್ರಸಾದ್ ಅವರನ್ನು ಭಾರತದ ಮೊದಲ ರಾಷ್ಟ್ರಪತಿಯಾಗಿ ಘೋಷಿಸಲಾಯಿತು.
- ಸಂವಿಧಾನ ರಚನಾ ಸಭೆಯಲ್ಲಿ 15 ಮಹಿಳಾ ಸದಸ್ಯರಿದ್ದರು. ಇವರಲ್ಲಿ ಸರೋಜಿನಿ ನಾಯ್ಡು, ರಾಜಕುಮಾರಿ ಅಮೃತ್ ಕೌರ್, ಹಂಸಾ ಮೆಹ್ತಾ, ಸುಚೇತಾ ಕೃಪಲಾನಿ ಮತ್ತು ಜಿ. ದುರ್ಗಾಬಾಯಿ ಸೇರಿದ್ದರು.
- ಭಾರತದ ಸಂವಿಧಾನವು ಜನವರಿ 26, 1950 ರಂದು ಜಾರಿಗೆ ಬಂದಿತು. ಭಾರತವು ಗಣರಾಜ್ಯವಾದ ನಂತರ, ಜಿ.ವಿ. ಮಾವಳಂಕರ್ ಲೋಕಸಭೆಯ ಮೊದಲ ಸ್ಪೀಕರ್ ಆದರು.



ಈ ನಿರಂಕುಶ ಧೋರಣೆಗೆ ಮತ್ತೊಂದು ಉದಾಹರಣೆ ಬೆಂಗಳೂರಿನಿಂದ ಬಂದಿತು. ಆ ಸಮಯದಲ್ಲಿ, ನಾನು ಬೆಂಗಳೂರಿನಲ್ಲಿ ಇಂಡಿಯನ್ ಎಕ್ಸ್ ಪ್ರೆಸ್ ನಲ್ಲಿ ಕೆಲಸ ಮಾಡುತ್ತಿದ್ದೆ. ಪ್ರಕಟಣಾಪೂರ್ವ-ಸೆನ್ಸಾರ್ ಶಿಪ್ ಹೇರಲಾಯಿತು ಮತ್ತು ಅದನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ಬೆಂಗಳೂರಿನ ಅಂದಿನ ಪೊಲೀಸ್ ಆಯುಕ್ತರಿಗೆ ವಹಿಸಲಾಯಿತು - ಸಮವಸ್ತ್ರಧಾರಿ ಅಧಿಕಾರಿಯನ್ನು ನಮ್ಮ ಸಂಪಾದಕರನ್ನಾಗಿ ಪರಿವರ್ತಿಸಲಾಯಿತು. ಯಾವುದನ್ನು ಪ್ರಕಟಿಸಬಹುದು ಮತ್ತು ಯಾವುದನ್ನು ಪ್ರಕಟಿಸಬಾರದು ಎಂದು ಅವರು ನಿರ್ಧರಿಸುತ್ತಿದ್ದರು, ಯಾವ ಪದಗಳು ಅಥವಾ ಛಾಯಾಚಿತ್ರಗಳನ್ನು ಸೇರಿಸಬೇಕು ಅಥವಾ ತೆಗೆದುಹಾಕಬೇಕು ಎಂದು ನಿರ್ಧರಿಸುತ್ತಿದ್ದರು. ಪ್ರೆಸ್ ಕೌನ್ಸಿಲ್ ಕಾಯ್ದೆಯನ್ನು ಸಹ ರದ್ದುಪಡಿಸಲಾಯಿತು ಮತ್ತು ಅನೇಕ ಪತ್ರಕರ್ತರನ್ನು ಜೈಲಿಗೆ ಕಳುಹಿಸಲಾಯಿತು. ಆ ಕಾಲಘಟ್ಟವನ್ನು ನೆನಪಿಸಿಕೊಳ್ಳುತ್ತಾ, ಅವರು ಬರೆಯುತ್ತಾರೆ, "ನನಗೆ ಮತ್ತೊಂದು ಘಟನೆ ನೆನಪಿದೆ: ಅಂದಿನ ವಾರ್ತಾ ಮತ್ತು ಪ್ರಸಾರ ಸಚಿವರ ಆದೇಶದ ಮೇರೆಗೆ, ಮುಂಜಾನೆ ಡಿಎವಿಪಿ ಮತ್ತು ಆಕಾಶವಾಣಿಗೆ ಕರೆ ಮಾಡಲಾಯಿತು ಮತ್ತು ಎಲ್ಲಾ ಅನುವಾದಕರನ್ನು ಶಾಸ್ತ್ರಿ ಭವನಕ್ಕೆ ಕರೆಸಲಾಯಿತು. ಏನಾಗುತ್ತಿದೆ ಎಂದು ತಿಳಿದಿಲ್ಲದ ಸುಮಾರು 10-15 ಅನುವಾದಕರನ್ನು ವಿಶ್ವ ಯುವಕ್ ಕೇಂದ್ರಕ್ಕೆ ಕರೆದೊಯ್ಯಲಾಯಿತು ಮತ್ತು ಮಧ್ಯಾಹ್ನ 2:00 ಗಂಟೆಗೆ ಒಂದು ಕೋಣೆಯಲ್ಲಿ ಕೂಡಿ ಬೀಗ ಹಾಕಲಾಯಿತು. ಇಂಗ್ಲಿಷ್ ನಲ್ಲಿ ಮುದ್ರಣಗೊಂಡ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಅವರಿಗೆ ಹಸ್ತಾಂತರಿಸಲಾಯಿತು ಮತ್ತು ಅದನ್ನು 15 ಭಾಷೆಗಳಿಗೆ ಅನುವಾದಿಸುವ ಕೆಲಸವನ್ನು ವಹಿಸಲಾಯಿತು. ರಾತ್ರಿ 10:00 ರಿಂದ ಮಧ್ಯರಾತ್ರಿಯ ನಡುವೆ ಕೆಲಸ ಮುಗಿಸಿದ ನಂತರ ಮಾತ್ರ ಅವರಿಗೆ ಮನೆಗೆ ಮರಳಲು ಅನುಮತಿ ನೀಡಲಾಯಿತು. ತುರ್ತು ಪರಿಸ್ಥಿತಿಯ ಬಗ್ಗೆ ಲೋಕಸಭೆಯಲ್ಲಿ ನಡೆದ ಚರ್ಚೆಯ ಸಮಯದಲ್ಲಿ, ಪ್ರಧಾನಮಂತ್ರಿ ಮೋದಿ, "ಜೂನ್ 25 ರ ಆ ರಾತ್ರಿ, ರಾಷ್ಟ್ರದ ಆತ್ಮವನ್ನು ಪುಡಿಪುಡಿ ಮಾಡಲಾಯಿತು. ಭಾರತದಲ್ಲಿ ಪ್ರಜಾಪ್ರಭುತ್ವವು ಕೇವಲ ಸಂವಿಧಾನದ ಪುಟಗಳಿಂದ ಹುಟ್ಟಿಕೊಂಡಿಲ್ಲ; ಇದು ಶತಮಾನಗಳಿಂದ ನಮ್ಮ ರಾಷ್ಟ್ರದ ಆತ್ಮವಾಗಿದೆ - ಮತ್ತು ಆ ಆತ್ಮವನ್ನು ಪುಡಿಮಾಡಲಾಯಿತು. ರಾಷ್ಟ್ರದ ಮಾಧ್ಯಮಗಳನ್ನು ಹತ್ತಿಕ್ಕಲಾಯಿತು. ಮಹಾನ್ ರಾಷ್ಟ್ರೀಯ ವ್ಯಕ್ತಿಗಳನ್ನು ಜೈಲಿಗೆ ತಳ್ಳಲಾಯಿತು. ಅಧಿಕಾರದ ಮೇಲೆ ಯಾರೊಬ್ಬರ ಹಿಡಿತವು ಹಾಗೇ ಉಳಿಯುವುದನ್ನು ಖಚಿತಪಡಿಸಿಕೊಳ್ಳಲು ಇಡೀ ದೇಶವನ್ನು ಜೈಲಾಗಿ ಪರಿವರ್ತಿಸಲಾಯಿತು. ತನ್ನದೇ ಆದ ತೀರ್ಪುಗಳ ಹೊರತಾಗಿಯೂ ನ್ಯಾಯಾಂಗವನ್ನು ಹೇಗೆ ಅಗೌರವಗೊಳಿಸಬಹುದು ಎಂಬುದಕ್ಕೆ ಇದು ಜೀವಂತ ಉದಾಹರಣೆಯಾಗಿತ್ತು.

... ನಂತರದ, ಸಾಂವಿಧಾನಿಕ ತಿದ್ದುಪಡಿಗಳು ತುರ್ತು ಪರಿಸ್ಥಿತಿಯನ್ನು ಹೇರುವುದು ಅಸಾಧ್ಯವಾಗಿಸಿದವು

ತುರ್ತು ಪರಿಸ್ಥಿತಿಯ ಸಮಯದಲ್ಲಿ ಸಂವಿಧಾನದ ಹಲವಾರು ನಿಬಂಧನೆಗಳನ್ನು ಬದಲಾಯಿಸಲಾಯಿತು. ನಂತರ ಮೊರಾರ್ಜಿ ದೇಸಾಯಿ ಸರ್ಕಾರದ ಅವಧಿಯಲ್ಲಿ ಇವುಗಳನ್ನು ಸರಿಪಡಿಸಲಾಯಿತು. ಇದು ಮಹತ್ವದ್ದಾಗಿದೆ ಏಕೆಂದರೆ ತುರ್ತು ಪರಿಸ್ಥಿತಿಯ ಸಮಯದಲ್ಲಿ ಜಾರಿಗೆ ತಂದ 42 ನೇ ತಿದ್ದುಪಡಿಯು ಸರ್ವೋಚ್ಚ ನ್ಯಾಯಾಲಯದ ಅಧಿಕಾರವನ್ನು

ತುರ್ತು ಪರಿಸ್ಥಿತಿಯ ಬಗ್ಗೆ ಬರೆದ 'ಟಾರ್ಚರ್ ಆಫ್ ಪೊಲಿಟಿಕಲ್ ಪ್ರಿಸನರ್ಸ್ ಇನ್ ಇಂಡಿಯಾ' ಎಂಬ ಪುಸ್ತಕದಲ್ಲಿ ಅಂದಿನ ಸರ್ಕಾರವು ಪ್ರಜಾಪ್ರಭುತ್ವದ ರಕ್ಷಕರನ್ನು ಹೇಗೆ ಅತ್ಯಂತ ಕ್ರೂರ ಶಿಕ್ಷೆಗೆ ಒಳಪಡಿಸಿತು ಎಂಬುದನ್ನು ವಿವರಿಸುತ್ತದೆ. ರಾಷ್ಟ್ರದ ಸ್ವಾತಂತ್ರ್ಯಕ್ಕೆ ಧಕ್ಕೆ ತಂದ ಇಂತಹ ಉಲ್ಲಂಘನೆಗಳ ಬಗ್ಗೆ ಪ್ರತಿಯೊಬ್ಬರೂ ಆಲೋಚಿಸಬೇಕೆಂದು ನಾನು ಒತ್ತಾಯಿಸುತ್ತೇನೆ. ಹಾಗೆ ಮಾಡುವುದರಿಂದ ಯುವ ಪೀಳಿಗೆಗೆ ಪ್ರಜಾಪ್ರಭುತ್ವದ ನಿಜವಾದ ಅರ್ಥ ಮತ್ತು ಮಹತ್ವವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಮೊಟಕುಗೊಳಿಸಿತ್ತು ಮತ್ತು ನಮ್ಮ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ದುರ್ಬಲಗೊಳಿಸುವ ಇತರ ನಿಬಂಧನೆಗಳನ್ನು ಸೇರಿಸಿತ್ತು. ಇವುಗಳನ್ನು 44ನೇ ತಿದ್ದುಪಡಿಯ ಮೂಲಕ ಮರುಸ್ಥಾಪಿಸಲಾಯಿತು. ಇದೇ ತಿದ್ದುಪಡಿಯಲ್ಲಿ ಸಂವಿಧಾನದ 20 ಮತ್ತು 21 ನೇ ವಿಧಿಗಳ ಅಡಿಯಲ್ಲಿ ಖಾತರಿಯಲ್ಲಿರುವ ಮೂಲಭೂತ ಹಕ್ಕುಗಳನ್ನು ತುರ್ತು ಪರಿಸ್ಥಿತಿಯ ಸಮಯದಲ್ಲಿಯೂ ಅಮಾನತುಗೊಳಿಸುವಂತಿಲ್ಲ ಎಂದು ಷರತ್ತು ವಿಧಿಸಿತು. ದೇಶದಲ್ಲಿ ಮೊದಲ ಬಾರಿಗೆ, ಸಂಪುಟದ ಲಿಖಿತ ಶಿಫಾರಸ್ಸಿನ ಮೇರೆಗೆ ಮಾತ್ರ ರಾಷ್ಟ್ರಪತಿಗಳು ತುರ್ತು ಪರಿಸ್ಥಿತಿ ಘೋಷಿಸುವ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಇದಲ್ಲದೆ, ತುರ್ತು ಪರಿಸ್ಥಿತಿಯ ಅವಧಿಯನ್ನು ಒಂದೇ

ಸಂವಿಧಾನ ಮತ್ತು ತುರ್ತುಪರಿಸ್ಥಿತಿ



ತುರ್ತುಪರಿಸ್ಥಿತಿ

ಜೂನ್ 25, 1975 ರಂದು, ಅಂದಿನ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹ್ಮದ್ ಅವರು "ಆಂತರಿಕ ಕ್ಷೋಭೆ" ಎಂದು ಉಲ್ಲೇಖಿಸಿ ಸಂವಿಧಾನದ 352 ನೇ ವಿಧಿಯ ಅಡಿಯಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದರು. ಜೂನ್ 24, 1975 ರ ರಾತ್ರಿ ಸ್ವತಂತ್ರ ಭಾರತದ ಇತಿಹಾಸದಲ್ಲಿ ಅತಿ ದೀರ್ಘ ರಾತ್ರಿಯಾಯಿತು, ಏಕೆಂದರೆ ನಂತರದ ಸೂರ್ಯೋದಯವು 21 ತಿಂಗಳವರೆಗೆ ಬರಲಿಲ್ಲ. ತುರ್ತುಪರಿಸ್ಥಿತಿ ಜೂನ್ 25, 1975 ರಿಂದ ಮಾರ್ಚ್ 21, 1977 ರವರೆಗೆ ಜಾರಿಯಲ್ಲಿತ್ತು.

- ಇದು ಭಾರತದ ಇತಿಹಾಸದಲ್ಲಿ ಮೂರನೇ ತುರ್ತು ಪರಿಸ್ಥಿತಿಯಾಗಿದೆ, ಆದರೆ ಶಾಂತಿಯ ಸಮಯದಲ್ಲಿ ಹೇರಲಾದ ಮೊದಲ ತುರ್ತು ಪರಿಸ್ಥಿತಿಯಾಗಿದೆ.
- ಇದಕ್ಕೂ ಮುನ್ನ 1962ರಲ್ಲಿ ಚೀನಾ ಮತ್ತು 1971ರಲ್ಲಿ ಪಾಕಿಸ್ತಾನದ ಜತೆ ನಡೆದ ಯುದ್ಧದ ಸಂದರ್ಭದಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು.
- ಆ ಸಮಯದಲ್ಲಿ, ಅನುಚ್ಛೇದ 352 ಯುದ್ಧ, ಬಾಹ್ಯ ಆಕ್ರಮಣ ಅಥವಾ ಆಂತರಿಕ ಕ್ಷೋಭೆಯ ಆಧಾರದ ಮೇಲೆ ತುರ್ತು ಪರಿಸ್ಥಿತಿಯನ್ನು ಘೋಷಿಸಲು ಅವಕಾಶ ಕಲ್ಪಿಸಿತ್ತು.
- 1,10,000 ವಿರೋಧ ಪಕ್ಷದ ರಾಜಕೀಯ ನಾಯಕರನ್ನು ಜೈಲಿಗೆ ಹಾಕಲಾಯಿತು.
- ಜೂನ್ 26, 1975 ರಿಂದ, ಎಲ್ಲಾ ಪತ್ರಿಕೆಗಳ ಮೇಲೆ ಪ್ರಕಟಣಾಪೂರ್ವ ಸೆನ್ಸಾರ್ ಶಿಪ್ ವಿಧಿಸಲಾಯಿತು.
- ಸುದ್ದಿಗಳು, ಸಂಪಾದಕೀಯಗಳು ಅಥವಾ ಛಾಯಾಚಿತ್ರಗಳನ್ನು ಪ್ರಕಟಿಸುವ ಮೊದಲು ಸಂಪಾದಕರು ಸರ್ಕಾರದ ಅನುಮೋದನೆ ಪಡೆಯಬೇಕಾಗಿತ್ತು.



- ಸೆನ್ಸಾರ್ ಶಿಪ್ ನ ಆರಂಭಿಕ ದಿನಗಳಲ್ಲಿ, ದೆಹಲಿಯ ಪತ್ರಿಕೆ ಕಚೇರಿಗಳಿಗೆ ವಿದ್ಯುತ್ ಸರಬರಾಜು ಕಡಿತಗೊಳಿಸಲಾಯಿತು.
- ಕಾರ್ಯಕರ್ತರು, ಸ್ವತಂತ್ರ ಸಂಪಾದಕರು, ಪತ್ರಕರ್ತರು, ಭಿನ್ನಮತೀಯ ವಿದ್ಯಾರ್ಥಿ ನಾಯಕರು ಮತ್ತು ವಿವಿಧ ಸೃಜನಶೀಲ ಅನ್ವೇಷಣೆಗಳಲ್ಲಿ ತೊಡಗಿರುವ ವ್ಯಕ್ತಿಗಳನ್ನು ಸಹ ಜೈಲಿಗೆ ಹಾಕಲಾಯಿತು.
- ವಿಷಯದ ಮೇಲಿನ ನಿಯಂತ್ರಣ: ಸೆನ್ಸಾರ್ ಶಿಪ್ ಅನ್ನು ಸಂಸದೀಯ ಮತ್ತು ನ್ಯಾಯಾಂಗ ಪ್ರಕ್ರಿಯೆಗಳಿಗೆ ವಿಸ್ತರಿಸಲಾಯಿತು. ನ್ಯಾಯಾಲಯದ ತೀರ್ಪುಗಳ ಪ್ರಕಟಣೆಯನ್ನು ಬದಲಾಯಿಸಲಾಯಿತು ಅಥವಾ ನಿಯಂತ್ರಣಕ್ಕೆ ಒಳಪಡಿಸಲಾಯಿತು.
- ಮಾಧ್ಯಮಗಳ ವರ್ಗೀಕರಣ: ಪತ್ರಿಕೆಗಳನ್ನು ಅವುಗಳ ಸಂಪಾದಕೀಯ ನಿಲುವು ಮತ್ತು ಪ್ರಸಾರದ ಆಧಾರದ ಮೇಲೆ "ಅನುಕೂಲಕರ", "ತಟಸ್ಥ" ಅಥವಾ "ಪ್ರತಿಕೂಲ" ಎಂದು ವರ್ಗೀಕರಿಸಲಾಗಿದೆ.
- ಸಂವಿಧಾನವನ್ನು ದುರುಪಯೋಗ ಪಡಿಸಿಕೊಳ್ಳಲಾಯಿತು, ಅದು ಭಾರತದ ಪ್ರಜಾಪ್ರಭುತ್ವದ ನೆನಪಿನಲ್ಲಿ ದುಃಸ್ವಪ್ನದಂತೆ ಉಳಿಯುತ್ತದೆ.



ಬಾರಿಗೆ ಆರು ತಿಂಗಳಿಗಿಂತ ಹೆಚ್ಚು ವಿಸ್ತರಿಸುವಂತಿಲ್ಲ ಎಂದು ಕಡ್ಡಾಯಗೊಳಿಸಲಾಯಿತು. ಈ ರೀತಿಯಾಗಿ, ಮೊರಾರ್ಜಿ ದೇಸಾಯಿ ಸರ್ಕಾರವು 1975 ರ ತುರ್ತುಪರಿಸ್ಥಿತಿಯನ್ನು ದೇಶದಲ್ಲಿ ಎಂದಿಗೂ ಪುನರಾವರ್ತಿಸುವಂತಿಲ್ಲ ಎಂದು ಖಚಿತಪಡಿಸಿತು. ಬೇರೆ ರೀತಿಯಲ್ಲಿ ಹೇಳುವುದಾದರೆ, ಮೊರಾರ್ಜಿ ದೇಸಾಯಿ ಅವರು ಪ್ರಧಾನಮಂತ್ರಿಯಾದ ನಂತರ, ತುರ್ತು ಪರಿಸ್ಥಿತಿಯ ಸಮಯದಲ್ಲಿ ಸಂವಿಧಾನದಲ್ಲಿ ಪರಿಚಯಿಸಲಾದ ವಿರೂಪಗಳನ್ನು ಸರಿಪಡಿಸಿದರು. ನ್ಯಾಯಾಂಗ, ಸಂಸತ್ತು, ಪತ್ರಿಕಾ ಮತ್ತು ನಾಗರಿಕರ ಹಕ್ಕುಗಳನ್ನು ಮರುಸ್ಥಾಪಿಸಲಾಯಿತು. ಇದನ್ನು ಪ್ರತಿಬಿಂಬಿಸುತ್ತಾ, ಪ್ರಧಾನಮಂತ್ರಿ ನರೇಂದ್ರ ಮೋದಿ ಹಲವಾರು ಸಂದರ್ಭಗಳಲ್ಲಿ ಹೀಗೆ ಹೇಳಿದ್ದಾರೆ: "1975 ರಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ ಕಂಡ 'ಪ್ರಜಾಪ್ರಭುತ್ವದ ಹತ್ಯೆ' ಭವಿಷ್ಯದಲ್ಲಿ ಎಂದಿಗೂ ಪುನರಾವರ್ತನೆಯಾಗುವುದಿಲ್ಲ ಎಂದು ಮೊರಾರ್ಜಿ ಭಾಯ್ ಖಚಿತಪಡಿಸಿದರು. ಭಾರತೀಯ ಪ್ರಜಾಪ್ರಭುತ್ವದ ಪಾವಿತ್ರ್ಯವನ್ನು ಎತ್ತಿಹಿಡಿಯುವಲ್ಲಿ ಅವರ ಅಮೂಲ್ಯ ಕೊಡುಗೆಯನ್ನು ಭವಿಷ್ಯದ ಪೀಳಿಗೆಗಳು ಸದಾ ಸ್ಮರಿಸುತ್ತದೆ. ಮತ್ತೊಮ್ಮೆ, ಅಂತಹ ಮಹಾನ್ ನಾಯಕನಿಗೆ ನನ್ನ ಗೌರವವನ್ನು ಸಲ್ಲಿಸುತ್ತೇನೆ."

ಜನರ ಸಾಂವಿಧಾನಿಕ ಹಕ್ಕುಗಳು, ಸರ್ಕಾರದ ಬದ್ಧತೆ

ತುರ್ತುಪರಿಸ್ಥಿತಿಯ ಸಮಯದಲ್ಲಿ ಸಂವಿಧಾನದ ತಿದ್ದುಪಡಿಗಳು

ತುರ್ತು ಪರಿಸ್ಥಿತಿಯ ಸಮಯದಲ್ಲಿ, ಸಂವಿಧಾನಕ್ಕೆ ಅನೇಕ ತಿದ್ದುಪಡಿಗಳನ್ನು ಮಾಡಲಾಯಿತು, ಅದನ್ನು ಸಂವಿಧಾನದ "ಮಿನಿ-ಆವೃತ್ತಿ" ಎಂದು ಉಲ್ಲೇಖಿಸಲಾಯಿತು. ಪೀಠಿಕೆಯನ್ನು ಬದಲಾಯಿಸಲಾಯಿತು, ಅನುಚ್ಛೇದ 14 ಅನ್ನು ಬದಲಾಯಿಸಲಾಯಿತು ಮತ್ತು ಏಳು ಅನುಸೂಚಿಗಳನ್ನು ಮಾರ್ಪಡಿಸಲಾಯಿತು. 40 ಪ್ರತ್ಯೇಕ ಷರತ್ತುಗಳಿಗೆ ಬದಲಾವಣೆಗಳನ್ನು ತರಲಾಯಿತು; ಹೊಸ ಅನುಚ್ಛೇದಗಳು ಮತ್ತು ಹೊಸ ವಿಭಾಗಗಳನ್ನು ಸೇರಿಸಲಾಯಿತು.

- **38 ನೇ ತಿದ್ದುಪಡಿ:** ತುರ್ತುಪರಿಸ್ಥಿತಿ ಘೋಷಿಸುವ ರಾಷ್ಟ್ರಪತಿಗಳ ನಿರ್ಧಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ವಿನಾಯಿತಿ ನೀಡಲಾಯಿತು.
- **39ನೇ ತಿದ್ದುಪಡಿ:** ಪ್ರಧಾನಮಂತ್ರಿ ಮತ್ತು ಲೋಕಸಭೆಯ ಸ್ಪೀಕರ್ ಚುನಾವಣೆಯನ್ನು ನ್ಯಾಯಾಂಗ ಪರಿಶೀಲನೆಯ ವ್ಯಾಪ್ತಿಯಿಂದ ಹೊರಗಿಡಲಾಯಿತು.
- **42 ನೇ ತಿದ್ದುಪಡಿ:** ಕೇಂದ್ರದ ಅಧಿಕಾರವನ್ನು ಮತ್ತಷ್ಟು ವಿಸ್ತರಿಸಲಾಯಿತು. ಮೂಲಭೂತ ಹಕ್ಕುಗಳಿಗಿಂತ ರಾಜ್ಯ ನೀತಿಯ ನಿರ್ದೇಶಕ ತತ್ವಗಳಿಗೆ ಆದ್ಯತೆ ನೀಡಲಾಯಿತು. ಇದು ಸಂವಿಧಾನದ ಮೂಲ ರಚನೆಯನ್ನು ಗಣನೀಯವಾಗಿ ಬದಲಾಯಿಸಿತು.
- **42ನೇ ತಿದ್ದುಪಡಿ:** ಸಾಂವಿಧಾನಿಕ ತಿದ್ದುಪಡಿಗಳ ನ್ಯಾಯಾಂಗ ಪರಿಶೀಲನೆಯನ್ನು ನಿಷೇಧಿಸಲಾಯಿತು.
- 69ನೇ ತಿದ್ದುಪಡಿಯ ಒಂದು ವಿಭಾಗವು ಸರ್ವೋಚ್ಚ ನ್ಯಾಯಾಲಯದ ಅಧಿಕಾರವನ್ನು ಕಸಿದುಕೊಳ್ಳಲು ಸಹ ಸಹಾಯ ಮಾಡಿತು.
- ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಅವಧಿಯನ್ನು ಐದರಿಂದ ಆರು ವರ್ಷಗಳಿಗೆ ವಿಸ್ತರಿಸಲಾಗಿತ್ತು.





ಲೋಕಸಭೆ ಚುನಾವಣೆಯ ನಂತರ ತುರ್ತುಪರಿಸ್ಥಿತಿ ಕೊನೆಗಾಣಿಕೆ

- 1977 ಮಾರ್ಚ್ 16 ಮತ್ತು ಮಾರ್ಚ್ 20 ರ ನಡುವೆ ಲೋಕಸಭಾ ಚುನಾವಣೆಗಳು ನಡೆದವು ಮತ್ತು ಮಾರ್ಚ್ 21, 1977 ರಂದು ತುರ್ತು ಪರಿಸ್ಥಿತಿಯನ್ನು ತೆಗೆದುಹಾಕಲಾಯಿತು.
- 44 ನೇ ಸಾಂವಿಧಾನಿಕ ತಿದ್ದುಪಡಿಯನ್ನು 1978 ರಲ್ಲಿ ಜಾರಿಗೆ ತರಲಾಯಿತು. ಇದು ತುರ್ತು ಪರಿಸ್ಥಿತಿಯನ್ನು ಘೋಷಿಸುವ ಆಧಾರವಾಗಿ "ಆಂತರಿಕ ಕ್ಷೋಭೆ" ಯನ್ನು "ಸಶಸ್ತ್ರ ದಂಗೆ" ಯೊಂದಿಗೆ ಬದಲಾಯಿಸಿತು.
- ನ್ಯಾಯಾಂಗ ಪರಿಶೀಲನೆಯನ್ನು ಮರುಸ್ಥಾಪಿಸಲಾಯಿತು. ತುರ್ತುಪರಿಸ್ಥಿತಿಯ ಭವಿಷ್ಯದ ಘೋಷಣೆಗೆ ಸಂಬಂಧಿಸಿದಂತೆ ಕಾನೂನು ರಕ್ಷಣೆಗಳನ್ನು ಪರಿಚಯಿಸಲಾಯಿತು.
- 44 ನೇ ತಿದ್ದುಪಡಿಯು ಸಂವಿಧಾನದ 20 ಮತ್ತು 21 ನೇ ವಿಧಿಗಳ ಅಡಿಯಲ್ಲಿ ಖಾತರಿಪಡುವ ಮೂಲಭೂತ ಹಕ್ಕುಗಳನ್ನು ತುರ್ತು ಪರಿಸ್ಥಿತಿಯಲ್ಲಿಯೂ ಅಮಾನತುಗೊಳಿಸಲಾಗುವುದಿಲ್ಲ ಎಂದು ಷರತ್ತು ವಿಧಿಸಿತು.
- ದೇಶದಲ್ಲಿ ಮೊದಲ ಬಾರಿಗೆ, ಸಚಿವ ಸಂಪುಟದ ಲಿಖಿತ ಶಿಫಾರಸಿನ ಮೇರೆಗೆ ಮಾತ್ರ ರಾಷ್ಟ್ರಪತಿಗಳು ತುರ್ತು ಪರಿಸ್ಥಿತಿಯನ್ನು ಘೋಷಿಸುವ ನಿಬಂಧನೆಯನ್ನು ಅಳವಡಿಸಲಾಯಿತು.
- ತುರ್ತು ಪರಿಸ್ಥಿತಿಯ ಅವಧಿಯನ್ನು ಒಂದೇ ಬಾರಿಗೆ ಆರು ತಿಂಗಳಿಗಿಂತ ಹೆಚ್ಚು ವಿಸ್ತರಿಸುವಂತಿಲ್ಲ ಎಂದು ಕಡ್ಡಾಯಗೊಳಿಸಲಾಯಿತು.

ದೇಶದ ನವ ಪೀಳಿಗೆಯು ತುರ್ತುಸ್ಥಿತಿಗೆ ಮುಂಚಿನ ಘಟನೆಗಳ ಬಗ್ಗೆ ಅರಿವು ಹೊಂದಿರಬೇಕು; ಏಕೆಂದರೆ, ಭಾರತೀಯರು ಪ್ರಜಾಪ್ರಭುತ್ವವನ್ನು ನಿಜವಾಗಿಯೂ ಬದುಕಿ ತೋರಿಸಿದ್ದಾರೆ ಮತ್ತು ಅದನ್ನು ಎತ್ತಿಹಿಡಿದಿದ್ದಾರೆ ಎಂಬುದಕ್ಕೆ ಅವರ ಶಕ್ತಿ ಸಾಕ್ಷಿಯಾಗಿದೆ. ಆ ಕ್ಷಣ ಬಂದಾಗ, ರಾಷ್ಟ್ರದ ಜನರು ಪ್ರಜಾಪ್ರಭುತ್ವ ಶಕ್ತಿಯನ್ನು ಪ್ರದರ್ಶಿಸಿದರು. ಅಂತಹ ಗುಣಲಕ್ಷಣಗಳು ಯಾವುದೇ ದೇಶಕ್ಕೆ ಅಸಾಧಾರಣ ಶಕ್ತಿಯನ್ನು ರೂಪಿಸುತ್ತವೆ; ಜನರ ಶಕ್ತಿಯನ್ನು ಸದಾ ಗುರುತಿಸಬೇಕು. ಚುನಾವಣಾ ಪ್ರಕ್ರಿಯೆಯ ಮೂಲಕ, ಪ್ರಜಾಪ್ರಭುತ್ವವನ್ನು ಪ್ರೀತಿಸುವವರು ತಾವು ನಡೆಸಿದ ಯುದ್ಧದ ಪ್ರಮಾಣವನ್ನು ಪ್ರದರ್ಶಿಸಿದರು - ಪ್ರಜಾಪ್ರಭುತ್ವವು ಜನರ ಜೀವನದ ಚೌಕಟ್ಟಿನಲ್ಲಿ ಎಷ್ಟು ಆಳವಾಗಿ ಹೆಣೆಯಲಾಗಿದೆ ಎಂಬುದನ್ನು ಬಹಿರಂಗಪಡಿಸಿತು. ಪ್ರತಿಯೊಬ್ಬ ನಾಗರಿಕನ ರಕ್ತನಾಳಗಳಲ್ಲಿ ಹರಿಯುತ್ತಿರುವ ಪ್ರಜಾಪ್ರಭುತ್ವದ ಈ ಮನೋಭಾವವು ಭಾರತದ ಅಮರ ಪರಂಪರೆಯಾಗಿದೆ. ತುರ್ತು ಪರಿಸ್ಥಿತಿಯ ವಾರ್ಷಿಕೋತ್ಸವವು ಈ ಪರಂಪರೆಯನ್ನು ಮತ್ತಷ್ಟು ಬಲಪಡಿಸಲು ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ. ಕಳೆದ 12 ವರ್ಷಗಳಲ್ಲಿ, 'ಸಂವಿಧಾನ ದಿನ'ದ ಆಚರಣೆಯು ರಾಷ್ಟ್ರದಾದ್ಯಂತ ಹೊಸ ಜಾಗೃತಿಯನ್ನು ಬೆಳೆಸಿದೆ. ಇಂದು, ಕೇಂದ್ರ ಸರ್ಕಾರವು ಜನರ ಸಾಂವಿಧಾನಿಕ ಹಕ್ಕುಗಳನ್ನು ಖಾತ್ರಿಪಡಿಸುತ್ತಿದೆ - ಈ ಹಿಂದಿನ ಕಾಲದಲ್ಲಿ ಊಹಿಸಲಾಗದ ವಾಸ್ತವವಾಗಿದೆ.


ಹೊಸ ಪೀಳಿಗೆಯ ಕಾನೂನುಗಳು
ಈಗ ನ್ಯಾಯವು ವೇಗವಾಗಿದೆ, ಸರಳವಾಗಿದೆ ಮತ್ತು ಭಾರತೀಯವಾಗಿದೆ

- **ಭಾರತೀಯ ನ್ಯಾಯ ಸಂಹಿತೆ (ಐಪಿಸಿ ಬದಲಾವಣೆ):** ಈಗ 358 ಸೆಕ್ಷನ್ ಗಳನ್ನು ಒಳಗೊಂಡಿದೆ (511ಕ್ಕಿಂತ ಕಡಿಮೆ); 20 ಹೊಸ ಅಪರಾಧಗಳನ್ನು ಸೇರಿಸಲಾಗಿದೆ; 23 ಅಪರಾಧಗಳಿಗೆ ಕಡ್ಡಾಯ ಕನಿಷ್ಠ ಶಿಕ್ಷೆಯನ್ನು ಸೇರಿಸಲಾಗಿದೆ; 6 ಅಪರಾಧಗಳಿಗೆ ಸಮುದಾಯ ಸೇವೆಯ ಅವಕಾಶವನ್ನು ಸೇರಿಸಲಾಗಿದೆ.
- **ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಸಿ.ಆರ್.ಪಿ.ಸಿ ಬದಲಾವಣೆ):** ಈಗ 531 ಸೆಕ್ಷನ್ ಗಳನ್ನು ಹೊಂದಿದೆ (484 ರಿಂದ ಹೆಚ್ಚು); 9 ಹೊಸ ಸೆಕ್ಷನ್ ಗಳನ್ನು ಸೇರಿಸಲಾಗಿದೆ.
- ಭಾರತೀಯ ಸಾಕ್ಷ್ಯ ಅಧಿನಿಯಮ (ಸಾಕ್ಷ್ಯ ಕಾಯ್ದೆಯ ಬದಲಿಗೆ): ಈಗ 170 ಸೆಕ್ಷನ್ ಗಳನ್ನು ಹೊಂದಿದೆ (167 ರಿಂದ ಹೆಚ್ಚು).
- 'ದೇಶದ್ರೋಹ'ದ ಕಾನೂನಿನ ಬದಲಿಗೆ 'ರಾಷ್ಟ್ರದ್ರೋಹ'ಕ್ಕೆ ಸಂಬಂಧಿಸಿದ ನಿಬಂಧನೆಯನ್ನು ಸೇರಿಸುವುದು - ಸರ್ಕಾರವನ್ನು ಟೀಕಿಸುವುದು ಇನ್ನು ಮುಂದೆ ಅಪರಾಧವಲ್ಲ; ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಲಪಡಿಸಲಾಗಿದೆ.

ಗೃಹ ಸಚಿವರಾದ ಅಮಿತ್ ಶಾ ಅವರು ನಡೆಸಿದ ಒಟ್ಟು

3200

ಸಲಹೆಗಳು ಮತ್ತು 158 ಸಭೆಗಳ ನಂತರ ಈ ಕಾನೂನುಗಳನ್ನು ರೂಪಿಸಲಾಗಿದೆ.



“ನಮ್ಮ ಸಂವಿಧಾನದ ಆಶಯವನ್ನು ಹೇಗೆ ಉಲ್ಲಂಘಿಸಲಾಯಿತು, ಸಂಸತ್ತಿನ ಧ್ವನಿಯನ್ನು ಹೇಗೆ ಹತ್ತಿಕ್ಕಲಾಯಿತು ಮತ್ತು ನ್ಯಾಯಾಂಗದ ಮೇಲೆ ನಿಯಂತ್ರಣ ಸಾಧಿಸುವ ಪ್ರಯತ್ನಗಳನ್ನು ಹೇಗೆ ಮಾಡಲಾಯಿತು ಎಂಬುದನ್ನು ಯಾವ ಭಾರತೀಯನೂ ಮರೆಯಲಾರರು. 42 ನೇ ತಿದ್ದುಪಡಿಯು ಅವರ ದ್ವಂದ್ವ ವರ್ತನೆಗೆ ಒಂದು ಪ್ರಮುಖ ಉದಾಹರಣೆಯಾಗಿದೆ. ಬಡವರು, ಅಂಚಿನಲ್ಲಿರುವವರು ಮತ್ತು ದಲಿತರನ್ನು ವಿಶೇಷವಾಗಿ ಗುರಿಯಾಗಿಸಲಾಯಿತು; ಇದೊಂದು ರೀತಿಯ ದಾಳಿಯಾಗಿದ್ದು, ಇದು ಅವರ ಘನತೆಯನ್ನೇ ಉಲ್ಲಂಘಿಸುವಂತಿತ್ತು.”

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಇಂದು, ಒಬ್ಬರು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯಬಹುದು, ಸಾಮಾಜಿಕ ಮಾಧ್ಯಮಗಳಲ್ಲಿ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು, ಮುಕ್ತವಾಗಿ ಮಾತನಾಡಬಹುದು ಮತ್ತು ಸರ್ಕಾರದ ವಿರುದ್ಧ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಬಹುದು. ಈ ಶಕ್ತಿ ಎಲ್ಲಿಂದ ಬಂತು? ವಾಸ್ತವವಾಗಿ, ಭಾರತದ ಪ್ರಸ್ತುತ ನಾಯಕತ್ವವು ತುರ್ತು ಪರಿಸ್ಥಿತಿಯನ್ನು ನೇರವಾಗಿ ನೋಡಿದೆ ಮತ್ತು ಅದು ಉಂಟುಮಾಡಿದ ಸಂಕಟವನ್ನು ಆಳವಾಗಿ ಅರ್ಥಮಾಡಿಕೊಂಡಿದೆ. ತುರ್ತು ಪರಿಸ್ಥಿತಿಯ ಉಸಿರುಗಟ್ಟಿಸುವ ನಿರ್ಬಂಧಗಳ ನಡುವೆ ಪ್ರತಿರೋಧಿಸಲು ಧೈರ್ಯ ಮಾಡಿದ ಅದೇ ಧ್ವನಿಗಳಿಂದ ಈ ಶಕ್ತಿ ಹುಟ್ಟಿಕೊಂಡಿದೆ. ಈ ಕಾರಣಕ್ಕಾಗಿಯೇ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ, ಸಂವಿಧಾನದ 60 ನೇ ವಾರ್ಷಿಕೋತ್ಸವದ ಅಂಗವಾಗಿ 'ಸಂವಿಧಾನ್ ಗೌರವ್ ಯಾತ್ರೆ'ಯನ್ನು ಆಯೋಜಿಸಿದ್ದರು; ನಂತರ, ಪ್ರಧಾನಮಂತ್ರಿಯಾದ ನಂತರ, ಅವರು ನವೆಂಬರ್ 26 ಅನ್ನು 'ಸಂವಿಧಾನ ದಿನ'ವನ್ನಾಗಿ ಘೋಷಿಸಿದರು.

"ನಾವು ಜನರು" - ಒಂದು ಕರೆ, ಪ್ರತಿಜ್ಞೆ, ದೃಢನಿಶ್ಚಯ

ಪ್ರಧಾನಮಂತ್ರಿ ಮೋದಿ ಅವರು ಒಮ್ಮೆ ಸುಪ್ರೀಂ ಕೋರ್ಟ್ ನಲ್ಲಿ ನಡೆದ ಸಂವಿಧಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ಪೀಠಿಕೆಯ ಆರಂಭಿಕ ಮೂರು ಪದಗಳಾದ 'ನಾವು ಜನರು' (We the People) ಕೇವಲ ಪದಗಳಲ್ಲ, ಆದರೆ ಕರೆ, ಪ್ರತಿಜ್ಞೆ ಮತ್ತು ದೃಢನಿಶ್ಚಯವಾಗಿದೆ ಎಂದು ಹೇಳಿದ್ದರು. ಈ ಸ್ಫೂರ್ತಿಯಲ್ಲಿ, ನವೆಂಬರ್ 26, 2025 ರಂದು, ಪ್ರಧಾನಮಂತ್ರಿಯವರು 1949 ರಲ್ಲಿ ಸಂವಿಧಾನವನ್ನು ಐತಿಹಾಸಿಕವಾಗಿ ಅಂಗೀಕರಿಸಿದ್ದನ್ನು ಮತ್ತು ರಾಷ್ಟ್ರದ ಪ್ರಗತಿಯಲ್ಲಿ ಅದರ ನಿರಂತರ ಪಾತ್ರವನ್ನು ಸ್ಮರಿಸುತ್ತಾ ರಾಷ್ಟ್ರಕ್ಕೆ ಪತ್ರವೊಂದನ್ನು ಬರೆದರು. ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ, ಸಂವಿಧಾನ ರಚನಾಕಾರರಿಗೆ ಗೌರವ ಸಲ್ಲಿಸುವಾಗ, ದಾಖಲೆಯು ಮಾನವ ಘನತೆ, ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಅತ್ಯುನ್ನತ ಪ್ರಾಮುಖ್ಯತೆಯನ್ನು ನೀಡುತ್ತದೆ ಎಂದು ಒತ್ತಿ ಹೇಳಿದರು. ಸರ್ದಾರ್ ವಲ್ಲಭಭಾಯಿ ಪಟೇಲ್

ಮತ್ತು ಭಗವಾನ್ ಬಿರ್ಸಾ ಮುಂಡಾ ಅವರ 150 ನೇ ಜನ್ಮ ದಿನಾಚರಣೆ, 'ವಂದೇ ಮಾತರಂ' ನ 150 ನೇ ವಾರ್ಷಿಕೋತ್ಸವ ಮತ್ತು ಗುರು ತೇಜ್ ಬಹದ್ದೂರ್ ಜಿ ಅವರ 350 ನೇ ಹುತಾತ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ, ಏಕತೆ, ತ್ಯಾಗ, ದೇಶಭಕ್ತಿ ಮತ್ತು ಸದಾಚಾರದ ರಕ್ಷಣೆ (ಧರ್ಮ) ಎಂಬ ನಾಲ್ಕು ಮಹಾನ್ ಪರಂಪರೆಗಳ ಸಮ್ಮಿಲನವಾದ ಈ ನಿರ್ದಿಷ್ಟ ಸಂವಿಧಾನ ದಿನವು ವಿಶೇಷ ಮಹತ್ವವನ್ನು ಹೊಂದಿದೆ ಎಂದು ಅವರು ಹೇಳಿದರು. 12ನೇ ಸಂವಿಧಾನ ದಿನದಂದು ಈ ಪ್ರತಿಬಿಂಬವು ಇನ್ನಷ್ಟು ಮಹತ್ವದ್ದಾಗಿದೆ, ಏಕೆಂದರೆ ಈ ವರ್ಷ ಆ ಐತಿಹಾಸಿಕ ನೆನಪುಗಳ ಮುಂದುವರಿಕೆಯನ್ನು ಸಹ ಸೂಚಿಸುತ್ತದೆ - 2025 ರಲ್ಲಿ 50 ನೇ ವರ್ಷಕ್ಕೆ ಕಾಲಿಟ್ಟ ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ರಾಷ್ಟ್ರವು ಮರೆಯಲು ಸಾಧ್ಯವಿಲ್ಲ ಮತ್ತು ಮಾಡಬಾರದು. 1975 ರ ಜೂನ್ 25 ರಂದು ಭಾರತದ ಪ್ರಜಾಪ್ರಭುತ್ವದ ಮೇಲೆ ಬೀರಿದ ಕರಾಳ ಕಳಂಕವನ್ನು ಹೊಸ ಪೀಳಿಗೆ ಎಂದಿಗೂ ಮರೆಯುವುದಿಲ್ಲ ಮತ್ತು ರಾಷ್ಟ್ರವು ತನ್ನ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಸಂಪ್ರದಾಯಗಳನ್ನು ರಕ್ಷಿಸಲು ಹೆಮ್ಮೆಯಿಂದ ಸಂಕಲ್ಪ ಮಾಡುತ್ತದೆ ಎಂದು ಪ್ರಧಾನಮಂತ್ರಿ ಬಲವಾಗಿ ಒತ್ತಿ ಹೇಳಿದರು.

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹೊಸ ಶಕ್ತಿ

ಸಂವಿಧಾನದ ಅಂತಿಮ ಪರೀಕ್ಷೆಯು ತನ್ನ ಮೂಲ ಮನೋಭಾವವಾದ ಹಕ್ಕುಗಳು ಮತ್ತು ಕರ್ತವ್ಯಗಳ ರಕ್ಷಣೆಯನ್ನು ಎಷ್ಟು ಚೆನ್ನಾಗಿ ಎತ್ತಿಹಿಡಿಯುತ್ತದೆ ಎಂಬುದರ ಮೇಲೆ ಅಡಗಿದೆ. ದುಃಖದ ಸಂಗತಿಯಂತೆ, ಸಂವಿಧಾನದ ಮೊದಲ ತಿದ್ದುಪಡಿಯು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿತು. ಇದಲ್ಲದೆ, ಬ್ರಿಟಿಷ್ ವಸಾಹತುಶಾಹಿ ಯುಗದ ಅವಶೇಷವಾದ ದೇಶದ್ರೋಹ ಕಾನೂನು ಸ್ವತಂತ್ರ ಭಾರತದಲ್ಲಿ ದಶಕಗಳ ಕಾಲ ಜಾರಿಯಲ್ಲಿತ್ತು. ಮಹಾತ್ಮ ಗಾಂಧಿ, ಬಾಲಗಂಗಾಧರ ತಿಲಕ್ ಮತ್ತು ವೀರ್ ಸಾವರ್ಕರ್ ಅವರಂತಹ ವ್ಯಕ್ತಿಗಳು ಜೈಲಿನಲ್ಲಿ ವರ್ಷಗಟ್ಟಲೆ ಕಳೆದಿದ್ದು ಇದೇ ಕಾನೂನಿಂದ. ಭಾರತೀಯ ನ್ಯಾಯ ಸಂಹಿತೆಯ ಮೂಲಕ, ಕೇಂದ್ರ ಸರ್ಕಾರವು 'ದೇಶದ್ರೋಹ'ದ ನಿಬಂಧನೆಯನ್ನು 'ರಾಜದ್ರೋಹ'ಕ್ಕೆ ('sedition' with 'treason') ಬದಲಾಯಿಸಿದೆ, ಆ ಮೂಲಕ ಸರ್ಕಾರದ ಮೇಲಿನ ಟೀಕೆಗಳನ್ನು ಅಪರಾಧಮುಕ್ತಗೊಳಿಸಿದೆ, ಆದರೆ ರಾಷ್ಟ್ರದ ವಿರುದ್ಧ ಮಾಡಿದ ಕೃತ್ಯಗಳಿಗೆ ಕಠಿಣ ದಂಡನೆ ಇದ್ದೇ ಇರುತ್ತದೆ.

ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮದೊಂದಿಗೆ, ರಾಷ್ಟ್ರದ ಅಪರಾಧ ನ್ಯಾಯ ವ್ಯವಸ್ಥೆಯು 19ನೇ ಶತಮಾನದ ಸಂಕೋಲೆಗಳಿಂದ ಮುಕ್ತವಾಗಿದೆ ಮತ್ತು ನೇರವಾಗಿ 21 ನೇ ಶತಮಾನಕ್ಕೆ ಕಾಲಿಟ್ಟಿದೆ. ಗೃಹ ವ್ಯವಹಾರಗಳ ಸಚಿವಾಲಯವು 2019 ರಿಂದ ಈ ಕಾನೂನುಗಳ ಬಗ್ಗೆ ವ್ಯಾಪಕ ಸಮಾಲೋಚನೆಗಳನ್ನು ನಡೆಸಿತು, ಒಟ್ಟು 3,200 ಸಲಹೆಗಳನ್ನು ಸ್ವೀಕರಿಸಿತು, ಕೇಂದ್ರ ಗೃಹ ಸಚಿವರು ವೈಯಕ್ತಿಕವಾಗಿ 158 ಸಭೆಗಳನ್ನು ನಡೆಸಿದರು. ಸಣ್ಣ ಅಥವಾ ಮೊದಲ ಬಾರಿಗೆ ಅಪರಾಧಗಳಿಗೆ ಜೈಲು ಶಿಕ್ಷೆಗೆ ಪರ್ಯಾಯವಾಗಿ ಸಮುದಾಯ ಸೇವೆಯನ್ನು ಪರಿಚಯಿಸಲಾಯಿತು, ಕಾಲಮಿತಿಯಲ್ಲಿ ನ್ಯಾಯವನ್ನು ಖಚಿತಪಡಿಸಿಕೊಳ್ಳಲು ತಂತ್ರಜ್ಞಾನದ ಬಳಕೆ ಮತ್ತು ದೇಶಾದ್ಯಂತ ಏಕರೂಪದ ನ್ಯಾಯ ವ್ಯವಸ್ಥೆಯನ್ನು ಸ್ಥಾಪಿಸುವುದು ಮುಂತಾದ ಸುಧಾರಣೆಗಳು ಸಂವಿಧಾನದ ಮೂಲ ಸ್ಫೂರ್ತಿಯನ್ನು ಅರಿತುಕೊಳ್ಳುವತ್ತ ದೃಢವಾದ ಹೆಜ್ಜೆಗಳಾಗಿವೆ - ಪ್ರತಿಯೊಬ್ಬ ನಾಗರಿಕನಿಗೂ ಸಮಾನ ನ್ಯಾಯದ ಲಭ್ಯತೆಯನ್ನು ಇದು ಖಾತ್ರಿಪಡಿಸುತ್ತದೆ.

ಜಮ್ಮು ಮತ್ತು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಒಂದೇ ಸಂವಿಧಾನ



370 ನೇ ವಿಧಿಯ ರದ್ದತಿ

ಆಗಸ್ಟ್ 2019 ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ 370 ನೇ ವಿಧಿಯನ್ನು ಪರಿಣಾಮಕಾರಿಯಾಗಿ ರದ್ದುಪಡಿಸಲಾಯಿತು, ಇದು ಈ ಪ್ರದೇಶದಲ್ಲಿ ಭಾರತೀಯ ಸಂವಿಧಾನದ ಸಂಪೂರ್ಣ ಅನುಷ್ಠಾನಕ್ಕೆ ಕಾರಣವಾಯಿತು.

ಇಡಬ್ಲ್ಯೂಎಸ್ ಮೀಸಲಾತಿ (103 ನೇ ತಿದ್ದುಪಡಿ)

ಸಾಮಾನ್ಯ ವರ್ಗದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯೂಎಸ್) ಶೇಕಡಾ 10 ಮೀಸಲಾತಿಯನ್ನು ಪರಿಚಯಿಸಲಾಯಿತು, ಇದನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.



ಒಬಿಸಿ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನ (102 ನೇ ತಿದ್ದುಪಡಿ)


ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ (ಎನ್.ಸಿ.ಬಿ.ಸಿ) ಸಂಪೂರ್ಣ ಸಾಂವಿಧಾನಿಕ ಸ್ಥಾನಮಾನವನ್ನು ನೀಡಲಾಯಿತು, ಇದು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಹಕ್ಕುಗಳಿಗೆ ಸಾಂವಿಧಾನಿಕ ರಕ್ಷಣೆಯನ್ನು ಒದಗಿಸಿತು. 105ನೇ ತಿದ್ದುಪಡಿಯ ಮೂಲಕ, ರಾಜ್ಯಗಳಿಗೆ ತಮ್ಮದೇ ಆದ ಒಬಿಸಿಗಳ ಪಟ್ಟಿಗಳನ್ನು ನಿರ್ವಹಿಸಲು ಅಧಿಕಾರ ನೀಡಲಾಯಿತು.

ಉತ್ತಮ ಆಡಳಿತದ ಆಧಾರ ಸ್ತಂಭಗಳು

ಸಂವಿಧಾನದ ಸ್ಫೂರ್ತಿಯನ್ನು ಪ್ರತಿಬಿಂಬಿಸುವ ಯೋಜನೆಗಳು

ಜನ್ ಧನ್ ಯೋಜನೆ

- ಜೂನ್ 2026 ರ ವೇಳೆಗೆ **590** ದಶಲಕ್ಷಕ್ಕೂ ಹೆಚ್ಚು (59 ಕೋಟಿ) ಬ್ಯಾಂಕ್ ಖಾತೆಗಳು
- **3** ಲಕ್ಷ ಕೋಟಿ ರೂ.ಗಿಂತ ಹೆಚ್ಚಿನ ಠೇವಣಿ
- ಇಲ್ಲಿಯವರೆಗೆ ವರ್ಗಾವಣೆಯಾಗಿರುವ ಒಟ್ಟು ಅಂದಾಜು ಮೊತ್ತ **54** ಲಕ್ಷ ಕೋಟಿ ರೂ.



ಆಯುಷ್ಮಾನ್ ಭಾರತ್



- **470** ದಶಲಕ್ಷಕ್ಕೂ ಹೆಚ್ಚು (47 ಕೋಟಿ) ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ
- **33,000+** ನೋಂದಾಯಿತ ಆಸ್ಪತ್ರೆಗಳು
- 70+ ವರ್ಷ ವಯಸ್ಸಿನ ವ್ಯಕ್ತಿಗಳಿಗೆ **9.3** ದಶಲಕ್ಷಕ್ಕೂ ಹೆಚ್ಚು (93 ಲಕ್ಷ) 'ಆಯುಷ್ಮಾನ್ ವಯ್ ವಂದನಾ' ಕಾರ್ಡ್ ಗಳನ್ನು ನೀಡಲಾಗಿದೆ.

ಜಲ ಜೀವನ್ ಮಿಷನ್



- ಆರಂಭದಲ್ಲಿ, ಕೇವಲ **ಶೇ.17** ರಷ್ಟು ಗ್ರಾಮೀಣ ಕುಟುಂಬಗಳು ಮಾತ್ರ ನಲ್ಲಿ ಸಂಪರ್ಕವನ್ನು ಹೊಂದಿದ್ದವು
- **82.56%** (159.8 ದಶಲಕ್ಷ / 15.98 ಕೋಟಿ ಕುಟುಂಬಗಳು) ಅಕ್ಟೋಬರ್ 15, 2026 ರೊಳಗೆ ವ್ಯಾಪ್ತಿಗೆ ಒಳಪಟ್ಟಿವೆ
- ಈಗ 2028 ರವರೆಗೆ ವಿಸ್ತರಿಸಲಾಗಿದೆ (ಜಲ ಜೀವನ್ ಮಿಷನ್ 2.0).

ಪ್ರಧಾನಮಂತ್ರಿ ವಸತಿ ಯೋಜನೆ

प्रधान मंत्री आवास योजना-ग्रामीण
Pradhan Mantri Awaas Yojana-Gramin

- ಗ್ರಾಮೀಣ ಪ್ರದೇಶಗಳಲ್ಲಿ **12.5** ದಶಲಕ್ಷಕ್ಕೂ ಹೆಚ್ಚು (1.25 ಕೋಟಿ) ನಗರ ಮನೆಗಳನ್ನು ಮಂಜೂರು ಮಾಡಲಾಗಿದೆ (ಆಗಸ್ಟ್ 2026 ರ ಹೊತ್ತಿಗೆ)
- ಮಂಜೂರಾದ 3.91 ಕೋಟಿ ಮನೆಗಳ ಪೈಕಿ **3.12** ಕೋಟಿ ಮನೆಗಳು ಪೂರ್ಣಗೊಂಡಿವೆ
- 2029ರ ವೇಳೆಗೆ 49.5 ಮಿಲಿಯನ್ (4.95 ಕೋಟಿ) ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ.

ಪಿಎಂ ಕಿಸಾನ್ ಸಮ್ಮಾನ್ ನಿಧಿ



- 24 ನೇ ಕಂತಿಗೆ (ಅಕ್ಟೋಬರ್ 2026) ಒಟ್ಟು **4.65** ಲಕ್ಷ ಕೋಟಿ ರೂ.ಗಳನ್ನು ವಿತರಿಸಲಾಗಿದೆ
- **94.4** ದಶಲಕ್ಷ (9.44 ಕೋಟಿ) ಕೃಷಿ ಕುಟುಂಬಗಳಿಗೆ ಪ್ರಯೋಜನವಾಗಿದೆ.

ನಾರಿ ಶಕ್ತಿ ವಂದನ್ ಅಧಿನಿಯಮ

- ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ **ಶೇ.33** ರಷ್ಟು ಮೀಸಲಾತಿ.

ಜಿ ಎಸ್ ಟಿ ಸುಧಾರಣೆಗಳು 2025



- ಎರಡು ಪ್ರಾಥಮಿಕ ತೆರಿಗೆ ಸ್ಲ್ಯಾಬ್ ಗಳಾಗಿ ಸರಳೀಕರಣ (5% ಮತ್ತು 18%)
- **16.5** ದಶಲಕ್ಷ (1.65 ಕೋಟಿ) ನೋಂದಾಯಿತ ತೆರಿಗೆದಾರರು
- 2025-26ರಲ್ಲಿ **22.27** ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹ

ಸಮಾನತೆಯ ತತ್ವ: ಕಟ್ಟಕಡೆಯ ವ್ಯಕ್ತಿಯವರೆಗೆ ಎಲ್ಲರಿಗೂ ಅಭಿವೃದ್ಧಿಯನ್ನು ಖಾತರಿಪಡಿಸುವುದು

ಸಂವಿಧಾನದ ಪ್ರಾಥಮಿಕ ವಾಸ್ತುಶಿಲ್ಪಿ ಡಾ. ಅಂಬೇಡ್ಕರ್ ಅವರು ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವ ಮೂಲಕ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವ ಭಾರತವನ್ನು ಕಲ್ಪಿಸಿಕೊಂಡರು. ಇತ್ತೀಚಿನ ವರ್ಷಗಳಲ್ಲಿ, ಕೇಂದ್ರ ಸರ್ಕಾರವು "ವಂಚಿತರಿಗೆ ಆದ್ಯತೆ" ನೀಡುವ ತತ್ವವನ್ನು ಅಳವಡಿಸಿಕೊಂಡಿದೆ, ದಶಕಗಳಿಂದ ಸರ್ಕಾರದ ಯೋಜನೆಗಳಿಂದ ಹೊರಗುಳಿದವರನ್ನು ಸಕ್ರಿಯವಾಗಿ ತಲುಪಿದೆ. ಇದು ದತ್ತಾಂಶದಲ್ಲಿ ಪ್ರತಿಫಲಿಸುತ್ತದೆ: ವಿವಿಧ ಅಧ್ಯಯನಗಳ ಪ್ರಕಾರ, ಕೇಂದ್ರ ಸರ್ಕಾರದ ಕಲ್ಯಾಣ ಯೋಜನೆಗಳಿಗೆ ಧನ್ಯವಾದಗಳು: ಕಳೆದ ದಶಕದಲ್ಲಿ ದೇಶದಲ್ಲಿ 250 ದಶಲಕ್ಷಕ್ಕೂ ಹೆಚ್ಚು (25 ಕೋಟಿ) ಜನರು ಬಹು ಆಯಾಮದ ಬಡತನದಿಂದ ಹೊರಬಂದಿದ್ದಾರೆ. ಸಾರ್ವಜನಿಕ ಕಲ್ಯಾಣದತ್ತ ಈ ಪ್ರಯಾಣವು ಹಲವಾರು ಸರ್ಕಾರಿ ಯೋಜನೆಗಳಲ್ಲಿ ಸ್ಪಷ್ಟವಾಗಿದೆ. ಪ್ರತಿ ಉಪಕ್ರಮದ ಇತ್ತೀಚಿನ ಅಂಕಿಅಂಶಗಳು ಈ ಪ್ರಯತ್ನದ ವೇಗ ಮತ್ತು ಪ್ರಗತಿಯನ್ನು ಎತ್ತಿ ತೋರಿಸುತ್ತವೆ. ಪ್ರಧಾನ ಮಂತ್ರಿ ಜನ್ ಧನ್ ಯೋಜನೆಯಡಿಯಲ್ಲಿ, ಇಲ್ಲಿಯವರೆಗೆ 590 ದಶಲಕ್ಷಕ್ಕೂ ಹೆಚ್ಚು (59 ಕೋಟಿ) ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ, ಒಟ್ಟು ಠೇವಣಿಗಳು ₹3 ಲಕ್ಷ ಕೋಟಿ ಮೀರಿವೆ. ಜನ್ ಧನ್ ಖಾತೆಗಳು, ಆಧಾರ್ ಮತ್ತು ಮೊಬೈಲ್ ಸಂಪರ್ಕದ 'ತ್ರಿವಳಿಗಳನ್ನು' ಬಳಸಿಕೊಳ್ಳುವ ಮೂಲಕ, ಅಕ್ಟೋಬರ್ 15, 2026 ರವರೆಗೆ ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕ 320 ಕ್ಕೂ ಹೆಚ್ಚು ಯೋಜನೆಗಳ ಅಡಿಯಲ್ಲಿ ಒಟ್ಟು ಸುಮಾರು 53.80 ಲಕ್ಷ ಕೋಟಿ ರೂ.ಗಳನ್ನು ನೇರವಾಗಿ ನಾಗರಿಕರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ. ಇದು 5 ಲಕ್ಷ

“ಸೇವೆಯನ್ನು ಪವಿತ್ರ ಕರ್ತವ್ಯವೆಂದು ಪರಿಗಣಿಸುವ, ಜನರ ಕಲ್ಯಾಣಕ್ಕಾಗಿ ದಣಿವರಿಯದೆ ಶ್ರಮಿಸುವ, ಉತ್ತಮ ಆಡಳಿತದ ಮೂಲಕ ಅವರ ಭದ್ರತೆ ಮತ್ತು ಸಮೃದ್ಧಿಯನ್ನು ಖಾತ್ರಿಪಡಿಸುವ ಮತ್ತು ನಮ್ರತೆ, ಸ್ವಯಂ ಶಿಸ್ತು ಮತ್ತು ಅಭಿವೃದ್ಧಿಯ ಬದ್ಧತೆಯಿಂದ ನಿರೂಪಿತವಾದ ಸಮಾಜದ ಪ್ರಗತಿಗೆ ಸಮರ್ಪಿತರಾಗಿರುವ ಜನಪ್ರತಿನಿಧಿಯು ನಿಜವಾಗಿಯೂ ಜನರ ನಂಬಿಕೆ, ಗೌರವ, ಮನ್ನಣೆ ಮತ್ತು ಸಮೃದ್ಧಿಯನ್ನು ಗಳಿಸುತ್ತಾನೆ.”

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಕೋಟಿ ರೂ.ಗೂ ಹೆಚ್ಚು ಹಣ ಅನರ್ಹರ ಕೈಗೆ ಹೋಗುವುದನ್ನು ತಡೆಯಿದೆ ಮತ್ತು ಮಧ್ಯವರ್ತಿಗಳನ್ನು ತೆಗೆದುಹಾಕಲಾಗಿದೆ. ಆಯುಷ್ಮಾನ್ ಭಾರತ್-ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಅಡಿಯಲ್ಲಿ, 470 ದಶಲಕ್ಷಕ್ಕೂ ಹೆಚ್ಚು (47 ಕೋಟಿ) ಜನರು ಈಗ ನೋಂದಾಯಿಸಿಕೊಂಡಿದ್ದಾರೆ, ದೇಶಾದ್ಯಂತ 33,000 ಕ್ಕೂ ಹೆಚ್ಚು ಆಸ್ಪತ್ರೆಗಳು (17,685 ಸಾರ್ವಜನಿಕ ಮತ್ತು 15,380 ಖಾಸಗಿ) ಈ ಯೋಜನೆಯಡಿಯಲ್ಲಿ ನೋಂದಾಯಿಸಿಕೊಂಡಿವೆ. ಹೆಚ್ಚುವರಿಯಾಗಿ, 70 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ 9.3 ದಶಲಕ್ಷಕ್ಕೂ ಹೆಚ್ಚು (93 ಲಕ್ಷ) ಹಿರಿಯ ನಾಗರಿಕರಿಗೆ 'ಆಯುಷ್ಮಾನ್ ವಯೋ ವಂದನಾ' ಕಾರ್ಡ್ ಗಳನ್ನು ನೀಡಲಾಗಿದೆ. ಜಲ ಜೀವನ್ ಮಿಷನ್ ಮೂಲಕ, ಅಕ್ಟೋಬರ್ 15, 2026 ರ ಹೊತ್ತಿಗೆ, ದೇಶದ 193.5 ದಶಲಕ್ಷ (19.35 ಕೋಟಿ) ಗ್ರಾಮೀಣ ಕುಟುಂಬಗಳಲ್ಲಿ ನಲ್ಲಿ ನೀರು ಸರಿಸುಮಾರು 159.8 ದಶಲಕ್ಷ (15.98 ಕೋಟಿ) ಅಥವಾ 82.56 ಪ್ರತಿಶತವನ್ನು ತಲುಪಿದೆ. ಇದಕ್ಕೆ ವ್ಯತಿರಿಕ್ತವಾಗಿ, 2019 ರಲ್ಲಿ ಮಿಷನ್ ಪ್ರಾರಂಭವಾದಾಗ, ಕೇವಲ 17 ಪ್ರತಿಶತದಷ್ಟು ಕುಟುಂಬಗಳು ಈ ಸೌಲಭ್ಯಕ್ಕೆ ಪ್ರವೇಶವನ್ನು ಹೊಂದಿದ್ದವು. ಶೇಕಡಾ 100 ರಷ್ಟು ಗುರಿಯನ್ನು ಸಾಧಿಸಲು, ಸಂಪುಟ ಮಾರ್ಚ್ 2026 ರಲ್ಲಿ 'ಜಲ ಜೀವನ್ ಮಿಷನ್ 2.0' ಅನ್ನು ಅನುಮೋದಿಸಿತು, ಈ ಉಪಕ್ರಮವನ್ನು 2028 ರವರೆಗೆ ವಿಸ್ತರಿಸಿತು. ಪ್ರಧಾನ ಮಂತ್ರಿ ವಸತಿ ಯೋಜನೆ-ನಗರ ಅಡಿಯಲ್ಲಿ, ಆಗಸ್ಟ್ 2026 ರ ವೇಳೆಗೆ 12.5 ಮಿಲಿಯನ್ (1.25 ಕೋಟಿ) ಮನೆಗಳನ್ನು ಮಂಜೂರು ಮಾಡಲಾಗಿದೆ. ಏತನ್ಮಧ್ಯೆ, ಯೋಜನೆಯ ಗ್ರಾಮೀಣ ಘಟಕದ ಅಡಿಯಲ್ಲಿ, ಮೊದಲ ಎರಡು ಹಂತಗಳಲ್ಲಿ ಮಂಜೂರಾದ 3.91 ಕೋಟಿ ಮನೆಗಳಲ್ಲಿ 3.12 ಕೋಟಿ ಮನೆಗಳು ಪೂರ್ಣಗೊಂಡಿವೆ ಮತ್ತು 2029 ರ ವೇಳೆಗೆ 49.5 ದಶಲಕ್ಷ (4.95 ಕೋಟಿ) ಮನೆಗಳ ಗುರಿಯತ್ತ ಕೆಲಸ ವೇಗವಾಗಿ ಸಾಗುತ್ತಿದೆ. ಅಕ್ಟೋಬರ್ 2026 ರಲ್ಲಿ ಪಿಎಂ ಕಿಸಾನ್ ಸಮ್ಮಾನ್ ನಿಧಿಯ 24 ನೇ ಕಂತಿನ ಬಿಡುಗಡೆಯೊಂದಿಗೆ, ಒಟ್ಟು 4.65 ಲಕ್ಷ ಕೋಟಿ ರೂ.ಗಳನ್ನು 21.8 ದಶಲಕ್ಷಕ್ಕೂ ಹೆಚ್ಚು (2.18 ಕೋಟಿ) ಮಹಿಳೆಯರು ಸೇರಿದಂತೆ 94.4 ದಶಲಕ್ಷ (9.44 ಕೋಟಿ) ರೈತ ಕುಟುಂಬಗಳಿಗೆ ನೇರವಾಗಿ ವರ್ಗಾಯಿಸಲಾಗಿದೆ. ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33 ರಷ್ಟು ಮೀಸಲಾತಿಯನ್ನು ಒದಗಿಸುವ 'ನಾರಿ ಶಕ್ತಿ

ನಿರ್ಲಕ್ಷಿತ ಇತಿಹಾಸದ ಮರುಸ್ಥಾಪನೆ



- **ಸೆಂಗೋಲ್:** ಹೊಸ ಸಂಸತ್ ಕಟ್ಟಡದ ಲೋಕಸಭಾ ಕೊಠಡಿಯಲ್ಲಿ ಸ್ಥಾಪಿಸಲಾಗಿದೆ; ಅಧಿಕಾರ ವರ್ಗಾವಣೆ ಮತ್ತು ಕರ್ತವ್ಯದ ಪಥದ ಪ್ರಾಚೀನ ಸಂಕೇತ (ಕರ್ತವ್ಯಪಥ್)
- **'ಸಂವಿಧಾನ್ ಹತ್ಯಾ ದಿವಸ್' - ಜೂನ್ 25:** ತುರ್ತು ಪರಿಸ್ಥಿತಿಯ ಅತಿರೇಕಗಳನ್ನು ಸ್ಮರಿಸಲು
- **'ವಿಭಜನ್ ವಿಭೀಷಿಕ ಸ್ಮೃತಿ ದಿವಸ್' – ಆಗಸ್ಟ್ 14:** ವಿಭಜನೆಯ ಸಂತ್ರಸ್ತರಿಗೆ ಗೌರವ ನಮನ.
- **ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ:** 103 ನೇ ಸಾಂವಿಧಾನಿಕ ತಿದ್ದುಪಡಿಯ ಮೂಲಕ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯೂಎಸ್) ಶೇ.10 ಮೀಸಲಾತಿ.
- **ಶ್ರೀ ರಾಮ ಮಂದಿರ:** ಜನವರಿ 22, 2024 ರಂದು ಅಯೋಧ್ಯೆಯಲ್ಲಿ ರಾಮ್ ಲಲ್ಲಾ ಪ್ರಾಣ ಪ್ರತಿಷ್ಠಾಪನೆ.



- **ಪದ್ಮ ಪ್ರಶಸ್ತಿ:** ಸಾಮಾನ್ಯ ನಾಗರಿಕರ ಸಾಧನೆಗಳನ್ನು ಗೌರವಿಸುವುದು- 'ಜನ-ಪದ್ಮ' (ಜನರ ಪದ್ಮ)



12ನೇ ಸಂವಿಧಾನ ದಿನಾಚರಣೆ ವಿಶೇಷ

ಮುಖಪುಟ ಲೇಖನ

ಒಂದು ರಾಷ್ಟ್ರ ಒಂದು ಚುನಾವಣೆ

- ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 2, 2023 ರಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಯಿತು.
- 1951 ಮತ್ತು 1967 ರ ನಡುವೆ ದೇಶದಲ್ಲಿ ಏಕಕಾಲದಲ್ಲಿ ಚುನಾವಣೆಗಳು ನಡೆದಿದ್ದವು.
- 2024 ರಲ್ಲಿ ಬಿಡುಗಡೆಯಾದ ಸಮಿತಿ ವರದಿ; ಕೇಂದ್ರ ಸಚಿವ ಸಂಪುಟವು ಸಂವಿಧಾನ (129 ನೇ ತಿದ್ದುಪಡಿ) ಮಸೂದೆ, 2024 ಮತ್ತು ಕೇಂದ್ರಾಡಳಿತ ಪ್ರದೇಶ ಕಾನೂನುಗಳು (ತಿದ್ದುಪಡಿ) ಮಸೂದೆಯನ್ನು ಅನುಮೋದಿಸಿತು.
- ಪ್ರಸ್ತುತ ಸ್ಥಿತಿ: ಎರಡೂ ಮಸೂದೆಗಳು ಸಂಸದ ಪಿ.ಪಿ.ಚೌಧರಿ ನೇತೃತ್ವದ 41 ಸದಸ್ಯರ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಪರಿಗಣನೆಯಲ್ಲಿವೆ. 2026 ರ ಚಳಿಗಾಲದ ಅಧಿವೇಶನದ ವೇಳೆಗೆ ವರದಿಯನ್ನು ನಿರೀಕ್ಷಿಸಲಾಗಿದೆ.
- ಜೆಪಿಸಿ ಅಂದಾಜಿನ ಪ್ರಕಾರ, 7 ಲಕ್ಷ ಕೋಟಿ ರೂ.ಗಳ ಸಂಭಾವ್ಯ ಉಳಿತಾಯ ಮತ್ತು ಜಿಡಿಪಿಯಲ್ಲಿ 1.6% ರಷ್ಟು ಹೆಚ್ಚಳವಾಗಿದೆ.
- ಎಲ್ಲಾ ಚುನಾವಣೆಗಳಿಗೆ ಏಕ, ಏಕೀಕೃತ ಮತದಾರರ ಪಟ್ಟಿಯ ಪ್ರಸ್ತಾಪ.

ಪ್ರಸ್ತಾಪಿತ ಮಾದರಿ

ಮೊದಲ ಹಂತದಲ್ಲಿ ಏಕಕಾಲದಲ್ಲಿ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳು, ನಂತರ ಎರಡನೇ ಹಂತದಲ್ಲಿ 100 ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸಲು ಉದ್ದೇಶಿಸಲಾಗಿದೆ.



“ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಲಾದ ತತ್ವಗಳನ್ನು ಬಲಪಡಿಸುವ ಮತ್ತು ವಿಕಸಿತ ಭಾರತದ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡುವ ನಮ್ಮ ಬದ್ಧತೆಯನ್ನು ನಾವು ಪುನರುಚ್ಚರಿಸುತ್ತೇವೆ. ನಾವು ಪ್ರಗತಿಯ ಹೊಸ ಎತ್ತರವನ್ನು ಏರೋಣ ಮತ್ತು ಬಡವರು ಮತ್ತು ದೀನದಲಿತರ ಆಕಾಂಕ್ಷೆಗಳನ್ನು ಈಡೇರಿಸೋಣ.”

- ನರೇಂದ್ರ ಮೋದಿ, ಪ್ರಧಾನಮಂತ್ರಿ

ವಂದನ್ ಅಧಿನಿಯಮ'ದ ಜಾರಿಯು ರಾಷ್ಟ್ರದ ಮಹಿಳೆಯರನ್ನು ಗೌರವಿಸುವ ನಿಟ್ಟಿನಲ್ಲಿ ಒಂದು ಐತಿಹಾಸಿಕ ಹೆಜ್ಜೆಯಾಗಿದೆ.

ಆರ್ಥಿಕ ಪ್ರಜಾಪ್ರಭುತ್ವ: ನ್ಯಾಯದ ಸಾಂವಿಧಾನಿಕ ತತ್ವವನ್ನು ಪ್ರತಿಯೊಬ್ಬ ನಾಗರಿಕನಿಗೂ ವಿಸ್ತರಿಸುವುದು

ಸಮಾನತೆಯ ಸಾಂವಿಧಾನಿಕ ತತ್ವವು ಸಾಮಾಜಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ; ಇದು ಆರ್ಥಿಕ ಜೀವನವನ್ನು ಸಹ ವ್ಯಾಪಿಸಿದೆ. ಮುಂದಿನ ಪೀಳಿಗೆಯ ಜಿಎಸ್ಟಿ ಸುಧಾರಣೆಗಳು ಸೆಪ್ಟೆಂಬರ್ 2025 ರಲ್ಲಿ ಜಾರಿಗೆ ಬಂದವು, ತೆರಿಗೆ ರಚನೆಯನ್ನು ಕೇವಲ ಎರಡು ಪ್ರಾಥಮಿಕ ಸ್ಲ್ಯಾಬ್ ಗಳಾಗಿ ಸರಳಗೊಳಿಸಿತು: ಶೇಕಡಾ 5 ಮತ್ತು 18. ಸಾಬೂನು, ಟೂತ್ಪೇಸ್ಟ್ ಮತ್ತು ಭಾರತೀಯ ಬ್ರೆಡ್ ಗಳಂತಹ ದೈನಂದಿನ ವಸ್ತುಗಳ ಮೇಲಿನ ತೆರಿಗೆಯನ್ನು ಶೇಕಡಾ 5 ಅಥವಾ ಶೂನ್ಯಕ್ಕೆ ಇಳಿಸಲಾಗಿದೆ. ಜೀವ ಉಳಿಸುವ ಔಷಧಿಗಳ ಮೇಲಿನ ತೆರಿಗೆ ದರಗಳನ್ನು ಶೂನ್ಯ ಅಥವಾ 5 ಪ್ರತಿಶತಕ್ಕೆ ಇಳಿಸಲಾಗಿದೆ, ಆದರೆ ಟ್ರ್ಯಾಕ್ಟರ್ ಗಳು, ಹಾರ್ವೆಸ್ಟರ್ ಗಳು ಮತ್ತು ರೋಟಾವೇಟರ್ ಗಳು ಸೇರಿದಂತೆ ಕೃಷಿ ಉಪಕರಣಗಳ ದರವನ್ನು ಶೇಕಡಾ 5 ಕ್ಕೆ ಇಳಿಸಲಾಗಿದೆ. ಈ ಕ್ರಮವನ್ನು ರೈತರಿಗೆ ವರದಾನ ಎಂದು ಕೇಂದ್ರ ಕೃಷಿ ಸಚಿವರು ಬಣ್ಣಿಸಿದರು. ಕರಕುಶಲ ವಸ್ತುಗಳ ಮೇಲಿನ ಜಿಎಸ್ಟಿಯನ್ನು ಶೇಕಡಾ 12 ರಿಂದ 5 ಕ್ಕೆ ಇಳಿಸಲಾಗಿದೆ, ಇದು ಶಿಲ್ಪಗಳು, ವರ್ಣಚಿತ್ರಗಳು, ಕಸೂತಿ ಕೆಲಸಗಳು ಮತ್ತು ಕೈಚೀಲಗಳನ್ನು ತಯಾರಿಸುವ ಕುಶಲಕರ್ಮಿಗಳಿಗೆ ಗಮನಾರ್ಹ ಪರಿಹಾರವನ್ನು ನೀಡುತ್ತದೆ. ಅಂತೆಯೇ, ಆಟಿಕೆಗಳು ಮತ್ತು ಕ್ರೀಡಾ ಸರಕುಗಳ ದರವನ್ನು ಶೇಕಡಾ 12 ರಿಂದ ಶೇಕಡಾ 5 ಕ್ಕೆ ಕಡಿತಗೊಳಿಸಲಾಯಿತು, ಇದು ಮಕ್ಕಳ ಬೆಳವಣಿಗೆಗಾಗಿ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿರುವ ಎಂಎಸ್ಎಂಇಗಳಿಗೆ ಉತ್ತೇಜನ ನೀಡಿತು. ಈ ಸುಧಾರಣೆಗಳು ದೇಶದಲ್ಲಿ 16.5 ದಶಲಕ್ಷ (1.65 ಕೋಟಿ) ಜಿಎಸ್ಟಿ-ನೋಂದಾಯಿತ ತೆರಿಗೆದಾರರಿಗೆ ನೇರವಾಗಿ ಪ್ರಯೋಜನವನ್ನು ನೀಡಿವೆ - ಇದು 2017 ರಲ್ಲಿ ನೋಂದಾಯಿಸಲ್ಪಟ್ಟ 6.65 ದಶಲಕ್ಷ (66.5 ಲಕ್ಷ) ರಿಂದ ಗಣನೀಯ ಹೆಚ್ಚಳವಾಗಿದೆ. ತೆರಿಗೆ ಸಂಗ್ರಹವು ಸತತವಾಗಿ ಹೊಸ ಎತ್ತರವನ್ನು ತಲುಪಿದೆ, ಇದು 2021-22 ರಲ್ಲಿ ಸರಿಸುಮಾರು 13.76 ಲಕ್ಷ ಕೋಟಿ ರೂ.ಗಳಿಂದ 2025-26 ರಲ್ಲಿ ಸುಮಾರು 22.27 ಲಕ್ಷ ಕೋಟಿ ರೂ.ಗೆ ಏರಿದೆ. ಈ ಆವೇಗವು 2026-27 ರಲ್ಲಿಯೂ ಮುಂದುವರೆದಿದೆ, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಜಿಎಸ್ ಟಿ ಸಂಗ್ರಹವು ಸುಮಾರು 4.37 ಲಕ್ಷ ಕೋಟಿ ರೂ.ಗಳನ್ನು ತಲುಪಿದೆ. ಸರಳೀಕೃತ ತೆರಿಗೆ ರಚನೆಯು ಆದಾಯದ ಬೆಳವಣಿಗೆಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡುವುದರೊಂದಿಗೆ

ಹೆಚ್ಚುತ್ತಿರುವ ಸಂಖ್ಯೆಯ ವ್ಯವಹಾರಗಳು ಔಪಚಾರಿಕ ತೆರಿಗೆ ವ್ಯವಸ್ಥೆಗೆ ಹೇಗೆ ಸೇರುತ್ತಿವೆ ಎಂಬುದನ್ನು ಇದು ತೋರಿಸುತ್ತದೆ. ಸ್ವಾವಲಂಬನೆ ಮತ್ತು ಸ್ಥಳೀಯ ಗಮನದ ಈ ಮನೋಭಾವವು 'ಸ್ಥಳೀಯತೆಗೆ ಧ್ವನಿ' ('ವೋಕಲ್ ಫಾರ್ ಲೋಕಲ್') ಅಡಿಯಲ್ಲಿ ಜನಾಂದೋಲನವಾಗಿ ವಿಕಸನಗೊಂಡಿದೆ. ಸ್ಥಳೀಯ ಉತ್ಪನ್ನಗಳನ್ನು ಉತ್ತೇಜಿಸುವ ಕರೆಯನ್ನು ಮೊದಲು ಪ್ರಧಾನಮಂತ್ರಿಯವರು ತಮ್ಮ 'ಮನ್ ಕಿ ಬಾತ್' ಪ್ರಸಾರದಲ್ಲಿ ಮಾಡಿದರು - ಈಗ ಆಟಿಕೆ ಉದ್ಯಮದಂತಹ ಕ್ಷೇತ್ರಗಳಲ್ಲಿ ಸ್ಪಷ್ಟ ಫಲಿತಾಂಶಗಳನ್ನು ನೀಡುತ್ತಿದೆ. ಭಾರತವು 2025-26ರಲ್ಲಿ ಪ್ರಮುಖ ಆಟಿಕೆ ವಿಭಾಗಗಳಲ್ಲಿ 152 ದಶಲಕ್ಷ ಡಾಲರ್ ವ್ಯಾಪಾರ ಹೆಚ್ಚುವರಿಯನ್ನು ಸಾಧಿಸಿದೆ-ಇದು 2017-18ರಲ್ಲಿ ಅಸ್ತಿತ್ವದಲ್ಲಿದ್ದ ವ್ಯಾಪಾರ ಕೊರತೆಯಿಂದ ಗಮನಾರ್ಹ ಬದಲಾವಣೆಯಾಗಿದೆ. 'ಒಂದು ಜಿಲ್ಲೆ ಒಂದು ಉತ್ಪನ್ನ' (ಒಡಿಒಪಿ) ಯೋಜನೆಯಡಿಯಲ್ಲಿ, ಪ್ರತಿ ಜಿಲ್ಲೆಯ ವಿಶಿಷ್ಟ ಗುರುತನ್ನು ಮಾರುಕಟ್ಟೆಗೆ ತರುವ ಗುರಿಯನ್ನು ಹೊಂದಿರುವ ಉಪಕ್ರಮಗಳು 1.71 ಲಕ್ಷ ಕೋಟಿ ರೂ.ಗಳ ಮೌಲ್ಯವನ್ನು ತಲುಪಿವೆ. ಮಾರ್ಜಿನ್ ಮನಿ ಯೋಜನೆಯಡಿ 6,000 ಕೋಟಿ ರೂ.ಗಳ ಯೋಜನೆಗಳನ್ನು ಮಂಜೂರು ಮಾಡಲಾಗಿದ್ದು, 1.25 ಕೋಟಿಗೂ ಹೆಚ್ಚು ಒಡಿಒಪಿ ಕುಶಲಕರ್ಮಿಗಳು ತರಬೇತಿ ಮತ್ತು ಆಧುನಿಕ ಟೂಲ್ಕಿಟ್ಗಳನ್ನು ಪಡೆದಿದ್ದಾರೆ. ಕರಕುಶಲ ವಲಯದಲ್ಲಿ, ರಾಷ್ಟ್ರೀಯ ಕರಕುಶಲ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ 837 ಕೋಟಿ ರೂ.ಗಳ ಅನುಮೋದಿತ ವೆಚ್ಚದ ಬೆಂಬಲದೊಂದಿಗೆ 2,325 ಯೋಜನೆಗಳು ಮತ್ತು ಕಾರ್ಯಕ್ರಮಗಳು 66,000 ಕ್ಕೂ ಹೆಚ್ಚು ಕುಶಲಕರ್ಮಿಗಳಿಗೆ ನೇರವಾಗಿ ಪ್ರಯೋಜನವನ್ನು ನೀಡಿವೆ. ದೇಶಾದ್ಯಂತ 35 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ಒದಗಿಸುವ ಕೈಮಗ್ಗ ಕ್ಷೇತ್ರವು ಸಾಂವಿಧಾನಿಕ ದೃಷ್ಟಿಕೋನದ ಜೀವಂತ ಸಾಕಾರವಾಗಿ ಕಾರ್ಯನಿರ್ವಹಿಸುತ್ತದೆ: ಪ್ರತಿಯೊಬ್ಬ ವ್ಯಕ್ತಿಗೆ ಗೌರವಯುತ ಕೆಲಸವನ್ನು ಖಾತ್ರಿಪಡಿಸುವುದು ಮತ್ತು ಪ್ರತಿ ಕುಶಲಕರ್ಮಿಯ ಕರಕುಶಲತೆಗೆ ನ್ಯಾಯಯುತ ಸಂಭಾವನೆಯನ್ನು ಖಾತ್ರಿಪಡಿಸುವುದು.

ರಕ್ಷಣಾ ಉತ್ಪಾದನೆಯಲ್ಲಿ ಇದೇ ರೀತಿಯ ಸ್ವದೇಶೀಕರಣದ ಕಥೆ ತೆರೆದುಕೊಂಡಿದೆ. ರಕ್ಷಣಾ ರಫ್ತು 2013-14ರಲ್ಲಿದ್ದ 686 ಕೋಟಿ ರೂ.ಗಳಿಂದ 2025-26ರಲ್ಲಿ 38,424 ಕೋಟಿ ರೂ.ಗೆ ಏರಿದೆ. ಇದು 56 ಪಟ್ಟು ಹೆಚ್ಚಳವಾಗಿದೆ. ಐದು 'ಸಕಾರಾತ್ಮಕ ಸ್ವದೇಶೀಕರಣ ಪಟ್ಟಿಗಳ' ಮೂಲಕ 5,500 ಕ್ಕೂ ಹೆಚ್ಚು ರಕ್ಷಣಾ ವಸ್ತುಗಳನ್ನು ಗುರುತಿಸಲಾಗಿದೆ; ಇವುಗಳಲ್ಲಿ 3,000 ಕ್ಕೂ ಹೆಚ್ಚು ಫೆಬ್ರವರಿ 2025 ರ ವೇಳೆಗೆ ದೇಶೀಯವಾಗಿದೆ. ಎಲ್ಸಿಎ ತೇಜಸ್, ಅರ್ಜುನ್ ಟ್ಯಾಂಕ್, ಫಿರಂಗಿ ಬಂದೂಕುಗಳು, ಅಸಾಲ್ಟ್ ರೈಫಲ್ ಗಳು, ಕಾರ್ವೆಟ್ ಗಳು, ಸೋನಾರ್ ವ್ಯವಸ್ಥೆಗಳು, ಲಘು ಯುದ್ಧ ಹೆಲಿಕಾಪ್ಟರ್ ಗಳು ಮತ್ತು ದೇಶೀಯ ರಾಡಾರ್ ಗಳಂತಹ ವ್ಯವಸ್ಥೆಗಳು ಈಗ ಭಾರತದ ಕಾರ್ಯತಂತ್ರದ ಸ್ವಾವಲಂಬನೆಯ ವಿಶಿಷ್ಟ ಲಕ್ಷಣಗಳಾಗಿವೆ. ಉತ್ಪಾದನೆ-ಆಧರಿತ ಪ್ರೋತ್ಸಾಹಕ (ಪಿಎಲ್ಐ) ಯೋಜನೆಗಳ ಅಡಿಯಲ್ಲಿ, ಮಾರ್ಚ್ 2026 ರ ವೇಳೆಗೆ 2.40 ಲಕ್ಷ ಕೋಟಿ ರೂ.ಗಳ ಹೂಡಿಕೆಗಳನ್ನು ಆಕರ್ಷಿಸಲಾಗಿದೆ. ಇದಲ್ಲದೆ, 15.2 ಲಕ್ಷ ಕೋಟಿ ರೂ.ಗಿಂತ ಹೆಚ್ಚಿನ ರಫ್ತುಗಳನ್ನು ಸುಗಮಗೊಳಿಸಲಾಗಿದೆ ಮತ್ತು 14 ಲಕ್ಷಕ್ಕೂ ಹೆಚ್ಚು ನೇರ ಅಥವಾ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. ಸಂವಿಧಾನವು ಕಲ್ಪಿಸಿರುವ 'ಸಮಾನ ಆರ್ಥಿಕ ಅವಕಾಶಗಳನ್ನು' ಈಗ ನೀತಿ ಮತ್ತು ಅನುಷ್ಠಾನದ ದೃಷ್ಟಿಯಿಂದ ಸಾಕಾರಗೊಳಿಸಲಾಗುತ್ತಿದೆ ಎಂಬುದನ್ನು ಇದು ತೋರಿಸುತ್ತದೆ.

12ನೇ ಸಂವಿಧಾನ ದಿನಾಚರಣೆ ವಿಶೇಷ

ಮುಖಪುಟ ಲೇಖನ

ಸಂವಿಧಾನ ದಿನಕ್ಕೆ (2025-26) ಹೊಂದಿಕೆಯಾಗುವ ಮಹತ್ವದ ಮೈಲಿಗಲ್ಲುಗಳು



■ ಸಂವಿಧಾನವನ್ನು ಅಳವಡಿಸಿಕೊಂಡಾಗಿನಿಂದ 75–77 ವರ್ಷಗಳು (2024–2026)

ಪ್ರಜಾಪ್ರಭುತ್ವದ ತಾಯಿ: ಜಾಗತಿಕ ವೇದಿಕೆಯಲ್ಲಿ ಭಾರತದ ಪ್ರಾಚೀನ ಪರಂಪರೆ

ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಮಾತ್ರವಲ್ಲದೆ 'ಪ್ರಜಾಪ್ರಭುತ್ವದ ತಾಯಿ' ಕೂಡ ಆಗಿದೆ. ಭಾರತದ 5,000 ವರ್ಷಗಳಷ್ಟು ಹಳೆಯದಾದ ವೇದಗಳು ಸಭಾಗಳು ಮತ್ತು ಸಮಿತಿಗಳ ಉಲ್ಲೇಖಗಳನ್ನು ಹೊಂದಿವೆ; ಮಹಾಭಾರತದಂತಹ



ನಮ್ಮ ಸಂವಿಧಾನವು ಮಾನವ ಘನತೆ, ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ. ಇದು ನಮಗೆ ಹಕ್ಕುಗಳೊಂದಿಗೆ ಅಧಿಕಾರ ನೀಡುತ್ತದೆ, ಇದು ನಾಗರಿಕರಾಗಿ ನಮ್ಮ ಕರ್ತವ್ಯಗಳನ್ನು ನೆನಪಿಸುತ್ತದೆ - ಇವು ನಾವು ಸದಾ ಎತ್ತಿಹಿಡಿಯಲು ಶ್ರಮಿಸಬೇಕಾದ ಕರ್ತವ್ಯಗಳು. ಈ ಜವಾಬ್ದಾರಿಗಳು ದೃಢವಾದ ಪ್ರಜಾಪ್ರಭುತ್ವದ ಅಡಿಪಾಯವನ್ನು ರೂಪಿಸುತ್ತವೆ. ನಮ್ಮ ಕಾರ್ಯಗಳ ಮೂಲಕ, ನಮ್ಮ ಸಾಂವಿಧಾನಿಕ ಮೌಲ್ಯಗಳನ್ನು ಬಲಪಡಿಸುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸೋಣ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಪಠ್ಯಗಳು ಗಣಗಳ ಅಸ್ತಿತ್ವವನ್ನು ಉಲ್ಲೇಖಿಸುತ್ತವೆ; ಮತ್ತು ಡಾ. ಅಂಬೇಡ್ಕರ್ ಸ್ವತಃ ಬೌದ್ಧ ಸಂಘವನ್ನು ಭಾರತೀಯ ಸಂಸತ್ತಿಗೆ ಹೋಲಿಸಿದ್ದಾರೆ, ನಿರ್ಣಯಗಳು, ಕೋರಂಗಳು ಮತ್ತು ಮತದಾನಕ್ಕೆ ಸಂಬಂಧಿಸಿದ ನಿಯಮಗಳ ಉಪಸ್ಥಿತಿಯನ್ನು ಗಮನಿಸಿದ್ದಾರೆ. ಭಾರತಕ್ಕೆ ಪ್ರಜಾಪ್ರಭುತ್ವವು ಕೇವಲ ಒಂದು ವ್ಯವಸ್ಥೆಯಲ್ಲ, ಆದರೆ ಸಾಂಸ್ಕೃತಿಕ ನೀತಿ, ಒಂದು ಕಲ್ಪನೆ ಮತ್ತು ಸಂಪ್ರದಾಯವಾಗಿದೆ ಎಂದು ಪ್ರಧಾನಮಂತ್ರಿ ಮೋದಿ ಪದೇ ಪದೇ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಒತ್ತಿ ಹೇಳಿದ್ದಾರೆ. ಇಂದು, ಭಾರತದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿರುವಂತೆ ಮತ್ತು ಅದರ ಅಂತಾರಾಷ್ಟ್ರೀಯ ಸ್ಥಾನಮಾನವು ಬಲಗೊಳ್ಳುತ್ತಿದೆ, ಜಗತ್ತು ಅದನ್ನು ಬಹಳ ಭರವಸೆಯಿಂದ ನೋಡುತ್ತಿದೆ. ಒಂದು ಕಾಲದಲ್ಲಿ ಸ್ಥಿರತೆ ಅನುಮಾನಾಸ್ಪದವಾಗಿದ್ದ ರಾಷ್ಟ್ರವು ಈಗ ತನ್ನ ವೈವಿಧ್ಯತೆಯ ಬಗ್ಗೆ ಹೆಮ್ಮೆ ಪಡುತ್ತಾ ಪೂರ್ಣ ಹುರುಪಿನಿಂದ ಮುನ್ನಡೆಯುತ್ತಿದೆ. ಹೊಸ ಸಂಸತ್ ಭವನದಲ್ಲಿ ಸ್ಥಾಪಿಸಲಾದ ಪವಿತ್ರ ಸೆಂಗೋಲ್ ಈ ಶಾಶ್ವತ ಸಾಂಸ್ಕೃತಿಕ ನಿರಂತರತೆಯ ಸಂಕೇತವಾಗಿ ನಿಂತಿದೆ. ಮಹಾನ್ ಚೋಳ ಸಾಮ್ರಾಜ್ಯದಲ್ಲಿ ಅಧಿಕಾರ ವರ್ಗಾವಣೆ ಮತ್ತು ಕರ್ತವ್ಯದ ಪಥದ ಸಂಕೇತವಾದ ಸೆಂಗೋಲ್ ಅನ್ನು ಈಗ ಪ್ರತಿ ಅಧಿವೇಶನದ ಆರಂಭಗೊಳ್ಳುವಾಗ ರಾಷ್ಟ್ರಪತಿಗಳ ಭಾಷಣಕ್ಕೆ ಮೊದಲು ಸಂಸತ್ ಭವನದಲ್ಲಿ ಇಡಲಾಗುತ್ತದೆ, ಇದು ವಸಾಹತುಶಾಹಿ ಯುಗದಿಂದ ಹೊರಹೊಮ್ಮಿದ ಭಾರತವು ಅಳವಡಿಸಿಕೊಂಡ ಸಾಂವಿಧಾನಿಕ ಅಧಿಕಾರದ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ.

ಚುನಾವಣಾ ಸುಧಾರಣೆ: 'ಒಂದು ರಾಷ್ಟ್ರ, ಒಂದು ಚುನಾವಣೆ'ಯ ಕಡೆಗೆ - ಆಗಾಗ್ಗೆ ಚುನಾವಣೆಗಳಿಂದ ಉಂಟಾಗುವ ಅಭಿವೃದ್ಧಿಯ ವೇಗದಲ್ಲಿ ನಿಶ್ಚಲತೆಯನ್ನು ತಡೆಗಟ್ಟಲು, ಕೇಂದ್ರ ಸರ್ಕಾರವು 'ಒಂದು ರಾಷ್ಟ್ರ, ಒಂದು ಚುನಾವಣೆ'ಯತ್ತ ದೃಢವಾದ ಕ್ರಮಗಳನ್ನು ಕೈಗೊಂಡಿದೆ. ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿಯು ಬಾಧ್ಯಸ್ಥರೊಂದಿಗೆ ವ್ಯಾಪಕ ಸಮಾಲೋಚನೆಯ ನಂತರ 2024 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಇದರ ಆಧಾರದ ಮೇಲೆ, ಸಂವಿಧಾನ (129 ನೇ ತಿದ್ದುಪಡಿ) ಮಸೂದೆ, 2024 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ, 2024 ಅನ್ನು ಸಂಸತ್ತಿನಲ್ಲಿ ಮಂಡಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿತು. ಈ ಎರಡೂ ಮಸೂದೆಗಳು ಪ್ರಸ್ತುತ ಸಂಸದ ಪಿ.ಪಿ.ಚೌಧರಿ ಅಧ್ಯಕ್ಷತೆಯ 41 ಸದಸ್ಯರ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಪರಿಗಣನೆಯಲ್ಲಿದೆ, ಇದು ದೇಶಾದ್ಯಂತದ ಬಾಧ್ಯಸ್ಥರೊಂದಿಗೆ ವ್ಯಾಪಕ ಸಮಾಲೋಚನೆ ನಡೆಸಿದೆ. ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು 2026 ರ ಸಂಸತ್ತಿನ ಚಳಿಗಾಲದ ಅಧಿವೇಶನದವರೆಗೆ ಕಾಲಾವಕಾಶ ನೀಡಲಾಗಿದೆ. ಸಮಿತಿಯ ಅಂದಾಜಿನ ಪ್ರಕಾರ, ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವುದರಿಂದ ಕಾಲಾನಂತರದಲ್ಲಿ ಸರಿಸುಮಾರು ₹7 ಲಕ್ಷ ಕೋಟಿ ಉಳಿತಾಯವಾಗಬಹುದು ಮತ್ತು ಭಾರತದ ಜಿಡಿಪಿಯನ್ನು ಶೇಕಡಾ 1.6 ರಷ್ಟು ಹೆಚ್ಚಿಸಬಹುದು. ಪ್ರಸ್ತಾವಿತ ಚೌಕಟ್ಟು ಮೊದಲ ಹಂತದಲ್ಲಿ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಲು ಸೂಚಿಸುತ್ತದೆ, ನಂತರ ಎರಡನೇ ಹಂತದಲ್ಲಿ 100 ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸಲು ಸೂಚಿಸುತ್ತದೆ. ಈ ಕ್ರಮವು ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದ ಸಮಯ, ಸಂಪನ್ಮೂಲಗಳು ಮತ್ತು ಆಡಳಿತಾತ್ಮಕ ಹೊರೆಯನ್ನು ಗಮನಾರ್ಹವಾಗಿ ತಗ್ಗಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಹಕ್ಕುಗಳು ಮತ್ತು ಕರ್ತವ್ಯಗಳ ನಡುವಿನ ಬೇರ್ಪಡಿಸಲಾಗದ ಬಂಧ

ಮಹಾತ್ಮ ಗಾಂಧಿಯವರು ಹಕ್ಕುಗಳು ನಾಗರಿಕರು ನಿಷ್ಠೆಯಿಂದ ನಿರ್ವಹಿಸುವ ಕರ್ತವ್ಯಗಳಿಂದ ಹುಟ್ಟಿಕೊಳ್ಳುತ್ತದೆ ಎಂದು ಒಮ್ಮೆ ಹೇಳಿದ್ದರು. ಕಳೆದ ಶತಮಾನದ ಆರಂಭಿಕ ದಶಕಗಳಲ್ಲಿ, ಜಗತ್ತು ಕೇವಲ ಹಕ್ಕುಗಳ ಮೇಲೆ ಕೇಂದ್ರೀಕರಿಸಿದ್ದಾಗ, ಗಾಂಧೀಜಿ ನಾಗರಿಕರ ಕರ್ತವ್ಯಗಳಿಗೆ ಒತ್ತು ನೀಡುವ ಮೂಲಕ ಒಂದು ಹೆಜ್ಜೆ ಮುಂದೆ ಹೋಗಿದ್ದರು. ಸಂವಿಧಾನವು ಹಕ್ಕುಗಳ ಅನುಭೋಗಕ್ಕೆ ಎಷ್ಟು ಪ್ರಾಮುಖ್ಯತೆ ನೀಡುತ್ತದೆಯೋ ಅಷ್ಟೇ ಪ್ರಾಮುಖ್ಯತೆಯನ್ನು ಸಂವಿಧಾನವು ನೀಡುತ್ತದೆ ಎಂಬ ಕಲ್ಪನೆಯನ್ನು ಪ್ರಧಾನಮಂತ್ರಿ ಮೋದಿ ಸತತವಾಗಿ ಪ್ರತಿಪಾದಿಸಿದ್ದಾರೆ. ಸಂವಿಧಾನ ದಿನದಂದು ಪೀಠಿಕೆಯ ಸಾಮೂಹಿಕ ಪಠಣವು ಪ್ರತಿಯೊಬ್ಬ ನಾಗರಿಕನನ್ನು - ವಿಶೇಷವಾಗಿ ಯುವ ಪೀಳಿಗೆಯನ್ನು 'ವಿಕಸಿತ ಭಾರತ'ದ ದೃಷ್ಟಿಕೋನವನ್ನು ಸಾಕಾರಗೊಳಿಸಲು ನಾಗರಿಕ ಕರ್ತವ್ಯಗಳಿಗೆ ಆದ್ಯತೆ ನೀಡಲು ಪ್ರೋತ್ಸಾಹಿಸುವ ಉದ್ದೇಶವನ್ನು ಹೊಂದಿದೆ. ಈ



ಭಾವನೆಯು ಕೇವಲ ಭಾಷಣಗಳಿಗೆ ಮಾತ್ರ ಸೀಮಿತವಾಗಿಲ್ಲ; ಇದು ನೀತಿ ನಿರೂಪಣೆಯಲ್ಲಿಯೂ ಪ್ರತಿಫಲಿಸುತ್ತದೆ. ಐಜಿಒಟಿ ಕರ್ಮಯೋಗಿ ವೇದಿಕೆಯ ಮೂಲಕ, ಸರ್ಕಾರಿ ನೌಕರರನ್ನು ದಕ್ಷತೆ ಮತ್ತು ಉತ್ತರದಾಯಿತ್ವದ ಹೊಸ ಸಂಸ್ಕೃತಿಯಲ್ಲಿ ಸಂಯೋಜಿಸಲಾಗುತ್ತಿದೆ, ಆದರೆ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಸುಮಾರು 120 ದಶಲಕ್ಷ (12 ಕೋಟಿ) ಶೌಚಾಲಯಗಳ ನಿರ್ಮಾಣವು ನಾಗರಿಕ ಕರ್ತವ್ಯವನ್ನು ಸ್ವಚ್ಛತೆಯ ಪ್ರಾಯೋಗಿಕ ಬದ್ಧತೆಯಾಗಿ ಪರಿವರ್ತಿಸಿದೆ. ಇದಲ್ಲದೆ, 'ಏಕ್ ಭಾರತ್ ಶ್ರೇಷ್ಠ ಭಾರತ್' ಉಪಕ್ರಮವು ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಂಸ್ಕೃತಿಗಳು, ಭಾಷೆಗಳು ಮತ್ತು ಸಂಪ್ರದಾಯಗಳ ಪರಸ್ಪರ ತಿಳುವಳಿಕೆಯನ್ನು ಬೆಳೆಸುವ ಮೂಲಕ ಭಾರತದ ಏಕತೆ ಮತ್ತು ಸಮಗ್ರತೆಯನ್ನು ಬಲಪಡಿಸುತ್ತಿದೆ - ಇದು ಸಂವಿಧಾನದ ಪೀಠಿಕೆಯಲ್ಲಿ ಪ್ರತಿಪಾದಿಸಲಾದ 'ರಾಷ್ಟ್ರದ ಏಕತೆ ಮತ್ತು ಸಮಗ್ರತೆ'ಯ ಆದರ್ಶದ ವಿಸ್ತರಣೆಯಾಗಿದೆ.

ಸಾಂವಿಧಾನಿಕ ಮನೋಭಾವವನ್ನು ಪುನರುಜ್ಜೀವನಗೊಳಿಸುವುದು: ಹೊಸ ಪೀಳಿಗೆಗೆ ಪ್ರತಿಜ್ಞೆ

ಕಳೆದ 12 ವರ್ಷಗಳಲ್ಲಿ, ಜಗತ್ತು ಭಾರತ ಮತ್ತು ಅದರ ಸಂವಿಧಾನದ ದೃಢವಾದ ಶಕ್ತಿಗೆ ಸಾಕ್ಷಿಯಾಗಿದೆ. ಈ ಹಿಂದೆ, ಪ್ರಜಾಪ್ರಭುತ್ವದ ಬಗ್ಗೆ ಜಾಗತಿಕ ಚರ್ಚೆಗಳು ಹೆಚ್ಚಾಗಿ ಅಥೆನ್ಸ್, ಯುನೈಟೆಡ್ ಸ್ಟೇಟ್ಸ್, ಫ್ರಾನ್ಸ್ ಮತ್ತು ಮ್ಯಾಗ್ನಾ ಕಾರ್ಟಾದ ಮೇಲೆ ಕೇಂದ್ರೀಕೃತವಾಗಿದ್ದವು, ಆದರೆ ಪ್ರಾಚೀನ ಭಾರತೀಯ ಪ್ರಜಾಪ್ರಭುತ್ವ ಸಂಪ್ರದಾಯಗಳು ಆಗಾಗ್ಗೆ ಗಮನಕ್ಕೆ ಬರುತ್ತಿರಲಿಲ್ಲ. ಪ್ರಧಾನಮಂತ್ರಿ ಮೋದಿ ಅವರು ಭಾರತದ ಈ ಮಹಾನ್ ಪ್ರಜಾಪ್ರಭುತ್ವ ಪರಂಪರೆಯನ್ನು ಪುನರುಜ್ಜೀವಗೊಳಿಸಿದ್ದಾರೆ. ಯಾವುದೇ ಆಡಳಿತಗಾರನು ಈಗ ಸಂವಿಧಾನವನ್ನು ಹಾಳುಮಾಡಲು ಧೈರ್ಯ ಮಾಡದ ಮಟ್ಟಿಗೆ ಅವರು ಸಾಂವಿಧಾನಿಕತೆಯನ್ನು ಮರುಸ್ಥಾಪಿಸಿದ್ದಾರೆ. ಪ್ರತಿ ವರ್ಷ ಜೂನ್ 25 ಅನ್ನು 'ಸಂವಿಧಾನ್ ಹತ್ಯ ದಿವಸ್' ಎಂದು ಆಚರಿಸುವುದು ರಾಷ್ಟ್ರದ ದೃಢ ಸಂಕಲ್ಪಕ್ಕೆ ಸಾಕ್ಷಿಯಾಗಿದೆ: ತುರ್ತು ಪರಿಸ್ಥಿತಿಯಂತಹ ಘಟನೆಯ ಪುನರಾವರ್ತನೆಯನ್ನು ದೇಶವು ಎಂದಿಗೂ ಸ್ವೀಕರಿಸುವುದಿಲ್ಲ. ನಿಸ್ಸಂದೇಹವಾಗಿ, 12 ನೇ ಸಂವಿಧಾನ ದಿನವು ಕೇವಲ ದಿನಾಂಕದ ಆಚರಣೆಯಲ್ಲ, ಆದರೆ ಸಾಮೂಹಿಕ ಪ್ರಜ್ಞೆಯ ಆಚರಣೆಯಾಗಿದೆ - ಇದರಲ್ಲಿ ಪ್ರತಿಯೊಬ್ಬ ನಾಗರಿಕನು ತಮ್ಮ ಹಕ್ಕುಗಳನ್ನು ಚಲಾಯಿಸುವಾಗ ಅದೇ ಸಮರ್ಪಣೆಯಿಂದ ತಮ್ಮ ಕರ್ತವ್ಯಗಳನ್ನು ಎತ್ತಿಹಿಡಿಯುತ್ತಾನೆ. ಸಂವಿಧಾನ ರಚನಾ ಸಭೆಯ ಸದಸ್ಯರು, 2 ವರ್ಷ, 11 ತಿಂಗಳು ಮತ್ತು 18 ದಿನಗಳ ದಣಿವರಿಯದ ಪ್ರಯತ್ನದ ಮೂಲಕ ಈ ಭವ್ಯ ದಾಖಲೆಯನ್ನು ನಮಗೆ ವಹಿಸಿದಾಗ, ಮುಂದಿನ ಪೀಳಿಗೆಯು ಅದರಿಂದ ಬದುಕುವುದು, ಅದನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರಿಂದ ಕಲಿಯುವುದು ಅವರ ದೃಷ್ಟಿಕೋನವಾಗಿತ್ತು. ಇಂದು, ರಾಷ್ಟ್ರವು 'ವಿಕಸಿತ ಭಾರತ'ವನ್ನು ನಿರ್ಮಿಸುವ ಸಂಕಲ್ಪದೊಂದಿಗೆ ಮುಂದುವರಿಯುತ್ತಿರುವಾಗ, ಈ ಸಾಮೂಹಿಕ ಬದ್ಧತೆಯಲ್ಲಿ ಸೇರುವುದು ಮತ್ತು ಈ ಪುನರುಜ್ಜೀವಗೊಂಡ ಸಾಂವಿಧಾನಿಕ ಮನೋಭಾವದ ದಾರಿದೀಪಗಳಾಗುವುದು ಎಲ್ಲಾ 1.4 ಶತಕೋಟಿ ನಾಗರಿಕರ ಜವಾಬ್ದಾರಿಯಾಗಿದೆ - ಇದು ನಿಜವಾದ ಅರ್ಥದಲ್ಲಿ, ಸಂವಿಧಾನ ದಿನವನ್ನು ಆಚರಿಸುವ ಉದ್ದೇಶವಾಗಿದೆ. ●



ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ಪ್ರಧಾನಮಂತ್ರಿ ನರೇಂದ್ರ ಮೋದಿ ದೆಹಲಿಯಲ್ಲಿ ವಿಜಯದಶಮಿ ಆಚರಣೆಯಲ್ಲಿ ಪಾಲ್ಗೊಂಡರು

'ರಾಮ್ ಸೇ ರಾಷ್ಟ್ರ' ಮತ್ತು 'ದೇವ್ ಸೇ ದೇಶ್' ಎಂಬ ಸಂಕಲ್ಪ ಸಾಕಾರಗೊಳ್ಳಲಿದೆ

ವಿಜಯದಶಮಿಯ ಶುಭ ಸಂದರ್ಭದಲ್ಲಿ ಆಯೋಜಿಸಲಾದ ರಾಮ್‌ಲೀಲಾವು ರಾಷ್ಟ್ರೀಯ ಏಕತೆ, ಸಾಮಾಜಿಕ ಸಾಮರಸ್ಯ ಮತ್ತು ಭಗವಾನ್ ಶ್ರೀರಾಮನ ಆದರ್ಶಗಳ ಸಂದೇಶವನ್ನು ಸಾರಿತು. ಅಕ್ಟೋಬರ್ 20ರಂದು ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ವಿಜಯದಶಮಿಯ ಶುಭಾಶಯಗಳನ್ನು ತಿಳಿಸಿದರು. ಅಯೋಧ್ಯೆಯಲ್ಲಿ ನಡೆದ ಪ್ರಾಣಪ್ರತಿಷ್ಠಾಪನೆಯ ಸಂದರ್ಭದಲ್ಲಿ ಕೈಗೊಂಡಿದ್ದ 'ರಾಮ್ ಸೇ ರಾಷ್ಟ್ರ' ಮತ್ತು 'ದೇವ್ ಸೇ ದೇಶ್' ಎಂಬ ಸಂಕಲ್ಪಗಳು ನಮ್ಮೆಲ್ಲರ ಸಾಮೂಹಿಕ ಪ್ರಯತ್ನಗಳ ಮೂಲಕ ಖಂಡಿತವಾಗಿಯೂ ಸಾಕಾರಗೊಳ್ಳಲಿವೆ ಎಂಬ ದೃಢ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ನಾವಿರಾರು ವರ್ಷಗಳಿಂದ ನಮ್ಮ ಪೂರ್ವಜರು ಭಗವಾನ್ ಶ್ರೀರಾಮನನ್ನು ಆರಾಧಿಸುತ್ತಾ ಬಂದಿದ್ದಾರೆ. ಭಗವಾನ್ ಶ್ರೀರಾಮನು ರಾಕ್ಷಸ ರಾಜ ರಾವಣನನ್ನು ಸಂಹರಿಸಿದ ಎಂಬ ಕಾರಣಕ್ಕೆ ಮಾತ್ರ ಈ ಭಕ್ತಿ ಸೀಮಿತವಾಗಿಲ್ಲ; ಮಾನವ ಇತಿಹಾಸದಲ್ಲಿಯೇ ಸರಿಸಾಟಿಯಿಲ್ಲದ ಆದರ್ಶಗಳನ್ನು ಅವರು ಮೈಗೂಡಿಸಿಕೊಂಡಿದ್ದರು ಎಂಬುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ತಮ್ಮ ಜೀವನದುದ್ದಕ್ಕೂ ಭಗವಾನ್ ಶ್ರೀರಾಮನು ಅನೇಕ ಕಷ್ಟಗಳನ್ನು ಎದುರಿಸಿದರೂ ಸತ್ಯ ಮತ್ತು ಧರ್ಮದ ಮಾರ್ಗದಿಂದ ಎಂದಿಗೂ ವಿಚಲಿತರಾಗಲಿಲ್ಲ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸ್ಮರಿಸಿದರು. ಅವರ ವ್ಯಕ್ತಿತ್ವ ಎಷ್ಟೊಂದು ಸ್ಥಿತಪ್ರಜ್ಞತೆಯಿಂದ ಕೂಡಿತ್ತೆಂದರೆ, ರಾಜನ ಪಟ್ಟದ ನಿರೀಕ್ಷೆಯಿಂದ ಅವರು ಉದ್ವೇಗಕ್ಕೆ ಒಳಗಾಗಲಿಲ್ಲ; ವನವಾಸಕ್ಕೆ ತೆರಳಬೇಕಾದ ಸಂದರ್ಭದಲ್ಲಿ ವಿಚಲಿತರೂ ಆಗಲಿಲ್ಲ. ತೀವ್ರ ಸಂಕಷ್ಟಗಳನ್ನು ಎದುರಿಸುವಾಗಲೂ ಅವರು ಧರ್ಮವನ್ನು ದೃಢವಾಗಿ ಎತ್ತಿಹಿಡಿದು ಸತ್ಯವನ್ನು ಪ್ರತಿಷ್ಠಾಪಿಸಿದರು.

ಭಗವಾನ್ ಶ್ರೀರಾಮನ ಜೀವನದಿಂದ ದೊರೆಯುವ ಮಹತ್ವದ ಪಾಠವೆಂದರೆ, ಬಿಕ್ಕಟ್ಟು ಎಷ್ಟೇ ಗಂಭೀರವಾಗಿರಲಿ ಅಥವಾ ಸವಾಲು ಎಷ್ಟೇ ಕಠಿಣವಾಗಿರಲಿ, ಇತರರನ್ನು ಅವಲಂಬಿಸಬಾರದು ಎಂಬುದು. ಬದಲಾಗಿ, ನಮ್ಮೊಳಗಿನ ಸಾಮರ್ಥ್ಯವನ್ನು ಗುರುತಿಸಬೇಕು, ನಮ್ಮ ಸ್ವಂತ ಸಂಪನ್ಮೂಲಗಳ ಮೇಲೆ ವಿಶ್ವಾಸವಿಡಬೇಕು, ನಮ್ಮ ಸಂಕಲ್ಪವನ್ನು ಶಕ್ತಿಯಾಗಿ ಪರಿವರ್ತಿಸಿಕೊಳ್ಳಬೇಕು ಮತ್ತು ಸ್ವಂತ ಪರಿಶ್ರಮದ ಮೂಲಕ ಪರಿಹಾರಗಳನ್ನು ಕಂಡುಕೊಳ್ಳಬೇಕು. ದಾರಿಯಲ್ಲಿ ಎದುರಾಗುವ ಅಡೆತಡೆಗಳು ನಮ್ಮ ಪ್ರಯಾಣವನ್ನು ತಡೆಯಲು ಸಾಧ್ಯವಿಲ್ಲ ಎಂಬುದನ್ನು ಭಗವಾನ್ ಶ್ರೀರಾಮರ ನಮಗೆ ಕಲಿಸಿದ್ದಾರೆ. ಅವರು ಜನರ ಸಾಮೂಹಿಕ ಶಕ್ತಿಯನ್ನು





“ದೇಶಾದ್ಯಂತ ರಾಮಲೀಲೆಗಳ ಪ್ರದರ್ಶನವು ಭಗವಾನ್ ಶ್ರೀರಾಮನ ಆದರ್ಶಗಳನ್ನು ಜೀವಂತವಾಗಿರಿಸುವ ಸಂಪ್ರದಾಯವಾಗಿದೆ. ಇದು ದೌರ್ಜನ್ಯ ಮತ್ತು ಭಯೋತ್ಪಾದನೆಯ ಅಂತ್ಯವನ್ನು ಸಾರುತ್ತದೆ ಹಾಗೂ ಅಸತ್ಯದ ವಿರುದ್ಧ ಸತ್ಯದ ವಿಜಯವಾಗಲಿದೆ ಎಂಬ ನಂಬಿಕೆಯನ್ನು ಮತ್ತಷ್ಟು ದೃಢಪಡಿಸುತ್ತದೆ. ಇದು ಕೇವಲ ಒಂದು ಹಬ್ಬವಲ್ಲ; ಭಾರತದ ಜೀವಾಳವಾಗಿದೆ.

ನರೇಂದ್ರ ಮೋದಿ, ಪ್ರಧಾನಮಂತ್ರಿ

ಯಶಸ್ಸಿನ ಮೂಲಮಂತ್ರ

- ಸ್ವಂತ ಶಕ್ತಿಯ ಮೇಲೆ ನಂಬಿಕೆ.
- ಸ್ವಂತ ಸಾಮರ್ಥ್ಯಗಳ ಬಗ್ಗೆ ಆತ್ಮವಿಶ್ವಾಸ.
- ಸ್ವಂತ ಸಂಪನ್ಮೂಲಗಳ ಸಮರ್ಪಕ ಬಳಕೆ.
- ಗುರಿಯ ಸಾಧನೆಯತ್ತ ಅಚಲ ಸಂಕಲ್ಪ.

ಜಾಗೃತಗೊಳಿಸಿದರು, ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನೇ ತಮ್ಮ ಶಕ್ತಿಯ ಮೂಲವನ್ನಾಗಿ ಮಾಡಿಕೊಂಡರು, ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡರು ಮತ್ತು ಅಸಾಧ್ಯವೆಂದು ತೋರುತ್ತಿದ್ದುದನ್ನು ಸಾಧ್ಯವಾಗಿಸಿದರು. ಇಂದು ನಾವು ವಿಕಸಿತ ಭಾರತ ಮತ್ತು ‘ಆತ್ಮನಿರ್ಭರ ಭಾರತ’ದ ಗುರಿಗಳನ್ನು ನಮ್ಮ ಮುಂದಿಟ್ಟುಕೊಂಡಿದ್ದೇವೆ. ಜನರ ಶಕ್ತಿಯನ್ನು ಬಳಸಿಕೊಂಡು ಸಾರ್ವಜನಿಕ ಕಲ್ಯಾಣಕ್ಕಾಗಿ ಶ್ರಮಿಸಬೇಕು ಮತ್ತು ಅವರ ಎಲ್ಲ ಆಶೋತ್ತರಗಳನ್ನು ಈಡೇರಿಸಬೇಕು. ಇದಕ್ಕಾಗಿ ನಾವು ಸ್ವತಃ ಭಗವಾನ್ ಶ್ರೀರಾಮರಿಂದ ಸ್ಫೂರ್ತಿ ಪಡೆಯಬೇಕು.

ಬಡವರು ಮತ್ತು ವಂಚಿತ ವರ್ಗದವರ ಸೇವೆಯೇ ಪರಮ ಆದ್ಯತೆ

ಭಗವಾನ್ ಶ್ರೀರಾಮರು ಅರಣ್ಯವಾಸದಲ್ಲಿದ್ದಾಗ ನಿಷಾದರಾಜನನ್ನು ಆಲಿಂಗಿಸಿದರು ಮತ್ತು ಮಾತೆ ಶಬರಿಯವರಿಗೆ ಅಪಾರ ಗೌರವ ತೋರಿದರು. ಕರುಣೆ, ದಯೆ, ಪ್ರೀತಿ ಮತ್ತು ಸಾಮರಸ್ಯಕ್ಕೆ ಅವರು ಉನ್ನತ ಮಾದರಿಯನ್ನು ಸ್ಥಾಪಿಸಿದರು. ಅರಣ್ಯದಿಂದ ಹಿಂತಿರುಗಿ ಅಯೋಧ್ಯೆಯ ರಾಜನಾದ ಬಳಿಕ ಅವರು ‘ರಾಮರಾಜ್ಯ’ವನ್ನು ಸ್ಥಾಪಿಸಿದರು. ಇಂದಿಗೂ ಉತ್ತಮ ಆಡಳಿತದ ಅತ್ಯುನ್ನತ ಮಾನದಂಡವೆಂದು ಪರಿಗಣಿಸಲಾಗುವ ಆಡಳಿತ ವ್ಯವಸ್ಥೆಯೇ ರಾಮರಾಜ್ಯವಾಗಿದೆ. ‘ರಾಮರಾಜ್ಯ’ ಎಂದರೆ ಯಾವುದೇ ತಾರತಮ್ಯವಿಲ್ಲದ, ಎಲ್ಲರಿಗೂ ನ್ಯಾಯ ದೊರೆಯುವ ಮತ್ತು ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳು ಲಭ್ಯವಿರುವ ಆಡಳಿತ ವ್ಯವಸ್ಥೆಯಾಗಿದೆ. ಜನರನ್ನು ‘ಜನತಾ ಜನಾರ್ದನ’ ಎಂದು ಪರಿಗಣಿಸಬೇಕು ಮತ್ತು ‘ನಾಗರಿಕ ದೇವೋ ಭವ’ ಎಂಬ ಆಶಯವನ್ನು ಅಳವಡಿಸಿಕೊಳ್ಳಬೇಕು ಎಂದು ಪ್ರಧಾನಮಂತ್ರಿ ಮೋದಿ ಅವರು ಒತ್ತಿಹೇಳಿದರು. ಬಡವರು ಮತ್ತು ವಂಚಿತ ವರ್ಗದವರ ಸೇವೆಯು ನಮ್ಮ ಅತ್ಯುನ್ನತ ಆದ್ಯತೆಯಾಗಿರಬೇಕು ಎಂದರು.

ವಿಜಯದಶಮಿ: ವಿಜಯದ ಸಂಭ್ರಮಾಚರಣೆ

ವಿಜಯದಶಮಿ ವಿಜಯದ ಹಬ್ಬವಾಗಿದೆ. ಎದುರಾಳಿ ಎಷ್ಟೇ ಪ್ರಬಲನಾಗಿದ್ದರೂ ಅಂತಿಮವಾಗಿ ಸತ್ಯ ಮತ್ತು ಮಾನವೀಯತೆಯೇ ಜಯಗಳಿಸುತ್ತವೆ ಎಂಬ ನಂಬಿಕೆಯನ್ನು ಹೊಂದುವ ಧೈರ್ಯವನ್ನು ಈ ಹಬ್ಬವು ಪ್ರೇರೇಪಿಸುತ್ತದೆ. ವಿಜಯದಶಮಿಯ ಈ ಸ್ಫೂರ್ತಿಯು ಭಾರತದ ಮೂಲ ತತ್ವದ ಕೇಂದ್ರಭಾಗವಾಗಿದೆ.

ನಾವೆಲ್ಲರೂ ಒಂದಾಗಿ ಒಗ್ಗೂಡೋಣ

ದೇಶದ ಶತ್ರುಗಳ ವಿರುದ್ಧ ನಾವೆಲ್ಲರೂ ಒಗ್ಗಟ್ಟಿನಿಂದ ನಿಲ್ಲಬೇಕು. ದೇಶದ ಗೌರವಕ್ಕೆ ಧಕ್ಕೆ ತರುವ ಶಕ್ತಿಗಳು, ಸಮಾಜವನ್ನು ವಿಭಜಿಸಲು ಪ್ರಯತ್ನಿಸುವವರು ಮತ್ತು ನಮ್ಮ ಸಂಸ್ಕೃತಿಯ ಬಗ್ಗೆ ದ್ವೇಷ ಹೊಂದಿರುವ ವ್ಯಕ್ತಿಗಳು ದೇಶದ ನಿಜವಾದ ಶತ್ರುಗಳಾಗಿದ್ದಾರೆ. ಭಾರತ ಮಾತೆಯ ಶತ್ರುಗಳನ್ನು ಗುರುತಿಸಿ ಅವರನ್ನು ಸೋಲಿಸುವ ಸಂಕಲ್ಪವನ್ನು ನಾವೆಲ್ಲರೂ ಮತ್ತೊಮ್ಮೆ ಪುನರುಚ್ಚರಿಸಬೇಕು ಎಂದು ಪ್ರಧಾನಮಂತ್ರಿ ಮೋದಿ ಅವರು ಕರೆ ನೀಡಿದರು. ‘ರಾಷ್ಟ್ರವೇ ಮೊದಲು’ ಎಂಬ ಬದ್ಧತೆಯೊಂದಿಗೆ ನಾವೆಲ್ಲರೂ ಒಂದಾಗಿ ಒಗ್ಗೂಡಬೇಕು ಎಂದು ಅವರು ಹೇಳಿದರು. ●

ಪ್ರಧಾನಮಂತ್ರಿ ವಿಕಸಿತ ಗ್ರಾಮ ಸ್ವರಾಜ್ ಯೋಜನೆ

ಮತ್ತು ಕಂಟೇನರ್ ಉತ್ಪಾದನಾ ಪ್ರೋತ್ಸಾಹಕ ಯೋಜನೆಗೆ ಅನುಮೋದನೆ

ಕೇಂದ್ರ ಸರ್ಕಾರವು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಮತ್ತು ಪಂಚಾಯಿತಿಗಳ ಸಬಲೀಕರಣಕ್ಕೆ ಬದ್ಧವಾಗಿದೆ. ಈ ಗುರಿ ಸಾಕಾರದತ್ತ ಮಹತ್ವದ ಹೆಜ್ಜೆಯಾಗಿ, 'ವಿಕಸಿತ ಭಾರತ'ದ ರಾಷ್ಟ್ರೀಯ ದೃಷ್ಟಿಕೋನಕ್ಕೆ ಅನುಗುಣವಾಗಿರುವ, ಆಡಳಿತ ವ್ಯವಸ್ಥೆಯಲ್ಲಿ ಮುಂದಿನ ಹಂತದ ಪರಿವರ್ತನೆ ತರಬಲ್ಲ 'ಪ್ರಧಾನಮಂತ್ರಿ ವಿಕಸಿತ ಗ್ರಾಮ ಸ್ವರಾಜ್' ಯೋಜನೆ (ಪಿಎಂ ವಿ ಜಿ ಎಸ್ ವೈ) ಗೆ ಸರ್ಕಾರ ಅನುಮೋದನೆ ನೀಡಿದೆ. ಇದರ ಜೊತೆಗೆ, ಕಂಟೇನರ್ ಉತ್ಪಾದನಾ ಪ್ರೋತ್ಸಾಹಕ ಯೋಜನೆ ಮತ್ತು 'ಖೇಲೋ ಇಂಡಿಯಾ' ಕ್ರೀಡಾ ಉಪಕರಣಗಳ ತಯಾರಿಕಾ ಯೋಜನೆಗೆ ಅನುಮೋದನೆ ನೀಡಲಾಗಿದೆ; ಹಾಗೆಯೇ ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ (ಡಿಎ) ಮತ್ತು ಪಿಂಚಣಿದಾರರಿಗೆ ತುಟ್ಟಿ ಪರಿಹಾರ (ಡಿಆರ್) ನೀಡುವ ಪ್ರಸ್ತಾವನೆಗಳಿಗೂ ಅನುಮೋದನೆ ದೊರೆತಿದೆ. ಈ ಯೋಜನೆಯನ್ನು 2026-27 ರಿಂದ 2030-31 ರವರೆಗೆ (ಹದಿನಾರನೇ ಹಣಕಾಸು ಆಯೋಗದ ಅವಧಿಯೊಂದಿಗೆ ಏಕಕಾಲದಲ್ಲಿ ಕೊನೆಗೊಳ್ಳುವಂತೆ) ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ನಿರ್ಧಾರ: ಕೇಂದ್ರ ಪ್ರಾಯೋಜಿತ ಯೋಜನೆಯಾಗಿ 'ಪ್ರಧಾನಮಂತ್ರಿ ವಿಕಸಿತ ಗ್ರಾಮ ಸ್ವರಾಜ್' ಯೋಜನೆಗೆ 2026-27 ರಿಂದ 2030-31 ರ ಅವಧಿಗೆ ಅನುಮೋದನೆ ನೀಡಲಾಗಿದೆ.

ಪರಿಣಾಮ: 'ವಿಕಸಿತ ಭಾರತ'ದ ರಾಷ್ಟ್ರೀಯ ಮುನ್ನೋಟಕ್ಕೆ ಅನುಗುಣವಾಗಿ, ಗ್ರಾಮೀಣ ಆಡಳಿತಕ್ಕೆ ಹೊಸ ದಿಸೆ ನೀಡುವ ಉದ್ದೇಶದಿಂದ ರೂಪಿಸಲಾದ ಉಪಕ್ರಮವೇ ಈ ಕೇಂದ್ರ ಪ್ರಾಯೋಜಕತ್ವದ ಯೋಜನೆಯಾಗಿದೆ.

- ಈ ಯೋಜನೆಯು 2.55 ಲಕ್ಷಕ್ಕೂ ಹೆಚ್ಚು ಪಂಚಾಯತ್ ಗಳು ಮತ್ತು ಸಾಂಪ್ರದಾಯಿಕ ಸ್ಥಳೀಯ ಸಂಸ್ಥೆಗಳ ಸುಮಾರು 32 ಲಕ್ಷ ಚುನಾಯಿತ ಪ್ರತಿನಿಧಿಗಳಿಗೆ ಹಾಗೂ ಪಂಚಾಯತ್ ಅಧಿಕಾರಿಗಳು ಮತ್ತು ಇತರ ಪಾಲುದಾರರಿಗೆ ನೇರ ಪ್ರಯೋಜನವನ್ನು ನೀಡಲಿದೆ.
- ಇದು ಪಂಚಾಯಿತಿಗಳ ಸಾಮರ್ಥ್ಯವನ್ನು ಬಲಪಡಿಸಲಿದ್ದು ಹಣಕಾಸು ಆಯೋಗದ ಅನುದಾನಗಳು ಹಾಗೂ ಇತರ ನಿಧಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು, ತಮ್ಮದೇ ಆದ ಮೂಲಗಳಿಂದ ಆದಾಯವನ್ನು (ಒ ಎಸ್ ಆರ್) ಗಳಿಸಲು ಹಾಗೂ ಆನ್ ಲೈನ್ ಲೆಕ್ಕಪತ್ರ ನಿರ್ವಹಣೆ, ಲೆಕ್ಕ ಪರಿಶೋಧನೆ ಮತ್ತು ಸಾರ್ವಜನಿಕ ಬಹಿರಂಗಪಡಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಅನುವು ಮಾಡಿಕೊಡಲಿದೆ.
- ಈ ಯೋಜನೆಯು ಸಂಪನ್ಮೂಲಗಳ ಪಾರದರ್ಶಕ ಬಳಕೆಯನ್ನು ಉತ್ತೇಜಿಸಲಿದೆ, ಸ್ಥಳೀಯ ಅಭಿವೃದ್ಧಿಯಲ್ಲಿನ ಕೊರತೆಗಳನ್ನು ನೀಗಿಸಲು ಪೂರಕವಾಗಿರಲಿದೆ ಹಾಗೂ ಹೊಣೆಗಾರಿಯುತ ಮತ್ತು ಸ್ವಾವಲಂಬಿ ಪಂಚಾಯಿತಿಗಳ ರಚನೆಯನ್ನು ಪ್ರೋತ್ಸಾಹಿಸಲಿದೆ.
- ಸರ್ಕಾರಿ ಯೋಜನೆಗಳು ಮತ್ತು ರಾಷ್ಟ್ರೀಯ ಉಪಕ್ರಮಗಳ ಬಗ್ಗೆ ಅರಿವು ಮೂಡಿಸಲು, ಜಾಗೃತಿ ಕಾರ್ಯಕ್ರಮಗಳ ಮೂಲಕ ಕನಿಷ್ಠ 1 ಕೋಟಿ ನಾಗರಿಕರನ್ನು ತಲುಪುವ ಗುರಿ ಹೊಂದಲಾಗಿದೆ.
- ಈ ಯೋಜನೆಗಾಗಿ ಒಟ್ಟು ವೆಚ್ಚ ₹7,395.55 ಕೋಟಿಗಳಷ್ಟಿದೆ.





ನಮ್ಮ ಸರ್ಕಾರವು 'ಪ್ರಧಾನಮಂತ್ರಿ ವಿಕಸಿತ ಗ್ರಾಮ ಸ್ವರಾಜ್ ಯೋಜನೆ'ಗೆ ಅನುಮೋದನೆ ನೀಡಿದೆ. ಇದು ಸ್ಥಳೀಯ ಸಂಪನ್ಮೂಲಗಳು, ಸಾಮರ್ಥ್ಯಗಳು ಮತ್ತು ಸವಾಲುಗಳಿಗೆ ಅನುಗುಣವಾಗಿ ಯೋಜನೆ ರೂಪಿಸಲು ಅನುವು ಮಾಡಿಕೊಡಲಿದೆ. ಈ ಉಪಕ್ರಮವು ಸಾರ್ವಜನಿಕ ಪಾಲ್ಗೊಳ್ಳುವಿಕೆಯನ್ನು ಇನ್ನಷ್ಟು ಬಲಪಡಿಸಿ, ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗೆ ವೇಗ ನೀಡಲಿದೆ. - *ನರೇಂದ್ರ ಮೋದಿ, ಪ್ರಧಾನಮಂತ್ರಿ*

ನಿರ್ಧಾರ: ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ (ಡಿಎ) ಮತ್ತು ಪಿಂಚಣಿದಾರರಿಗೆ ತುಟ್ಟಿ ಪರಿಹಾರ (ಡಿಆರ್) ಹೆಚ್ಚಳಕ್ಕೆ ಅನುಮೋದನೆ ನೀಡಲಾಗಿದೆ.

ಪರಿಣಾಮ: ಇದು 2026ರ ಜುಲೈ 1ರಿಂದ ಅನ್ವಯವಾಗಲಿದೆ. ಸುಮಾರು 48.54 ಲಕ್ಷ ಕೇಂದ್ರ ಸರ್ಕಾರಿ ನೌಕರರು ಮತ್ತು 68.71 ಲಕ್ಷ ಪಿಂಚಣಿದಾರರು ಇದರ ಪ್ರಯೋಜನ ಪಡೆಯಲಿದ್ದಾರೆ.

- ಹೆಚ್ಚುತ್ತಿರುವ ಹಣದುಬ್ಬರವನ್ನು ಸರಿದೂಗಿಸಲು, ಅಸ್ತಿತ್ವದಲ್ಲಿರುವ ದರಕ್ಕೆ ಶೇ. 3 ರಷ್ಟು ಹೆಚ್ಚಳ ಮಾಡಲಾಗಿದೆ.
- ತುಟ್ಟಿ ಭತ್ಯೆ (ಡಿಎ) ಮತ್ತು ತುಟ್ಟಿ ಪರಿಹಾರ (ಡಿಆರ್) ಎರಡರ ಹೆಚ್ಚಳದಿಂದಾಗಿ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ ₹10,016.10 ಕೋಟಿಗಳಷ್ಟು ಹೊರೆ ಬೀಳಲಿದೆ.
- ಈ ಹೆಚ್ಚಳವು 7ನೇ ಕೇಂದ್ರ ವೇತನ ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ಅನುಮೋದಿಸಲಾದ ಸೂತ್ರವನ್ನು ಆಧರಿಸಿದೆ.

ನಿರ್ಧಾರ: ಜಾಗತಿಕ ಸ್ಪರ್ಧಾತ್ಮಕ ಕ್ರೀಡಾ ಸಲಕರಣೆಗಳ ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಕೇಂದ್ರ ಸಚಿವ ಸಂಪುಟವು 'ಖೇಲೋ ಇಂಡಿಯಾ ಕ್ರೀಡಾ ಸಲಕರಣೆಗಳ ಉತ್ಪಾದನಾ ಯೋಜನೆ'ಗೆ ಅನುಮೋದನೆ ನೀಡಿದೆ.

ಪರಿಣಾಮ: ಈ ಯೋಜನೆಯು ಹೂಡಿಕೆ, ಉತ್ಪಾದನೆ, ನಾವೀನ್ಯತೆ ಮತ್ತು ರಫ್ತುಗಳನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಜೊತೆಗೆ ಕ್ರೀಡಾ ಉಪಕರಣಗಳ ವಲಯದಲ್ಲಿ ಭಾರತದ ಜಾಗತಿಕ ಸ್ಥಾನವನ್ನು ಬಲಪಡಿಸಲಿದೆ.

- ಇದು ಹೂಡಿಕೆ, ತಂತ್ರಜ್ಞಾನ ಅಳವಡಿಕೆ, ಸಂಶೋಧನೆ ಮತ್ತು ನಾವೀನ್ಯತೆ, ಕೌಶಲ್ಯಾಭಿವೃದ್ಧಿ, ಗುಣಮಟ್ಟದ ಪ್ರಮಾಣೀಕರಣ ಮತ್ತು ಮಾರುಕಟ್ಟೆ ಅಭಿವೃದ್ಧಿಗೆ ಉದ್ದೇಶಿತ ಬೆಂಬಲವನ್ನು ಒದಗಿಸುವ ಮೂಲಕ ಭಾರತದ ಕ್ರೀಡಾ ಸಲಕರಣೆಗಳ ಉತ್ಪಾದನಾ ನೆಲೆಯನ್ನು ಪೋಷಿಸಲು ಪ್ರಯತ್ನಿಸುತ್ತದೆ.
- ಈ ಯೋಜನೆಯು ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕವಾದ ಕ್ರೀಡಾ ಉಪಕರಣ ಉದ್ಯಮದ ಬೆಳವಣಿಗೆಗೆ ಅನುವು ಮಾಡಿಕೊಡಲಿದೆ ಮತ್ತು ಜಾಗತಿಕ ಪೂರೈಕೆ ಸರಪಳಿಗಳಲ್ಲಿ ಭಾರತದ ಸ್ಥಾನವನ್ನು ಬಲಪಡಿಸಲಿದೆ.
- ಕೇಂದ್ರ ಆಯವ್ಯಯ 2026-27 ರಲ್ಲಿ ಘೋಷಿಸಲಾದ ಈ ಯೋಜನೆಯ ಒಟ್ಟು ವೆಚ್ಚವು 2026 ರಿಂದ 2033-34 ರ ಅವಧಿಗೆ ₹1,856.67 ಕೋಟಿಗಳಷ್ಟಿದೆ.


ಸಚಿವ ಸಂಪುಟದ ನಿರ್ಧಾರಗಳ ಮಾಧ್ಯಮಗೋಷ್ಠಿಯನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ನಿರ್ಧಾರ: 'ಕಂಟೇನರ್ ಉತ್ಪಾದನಾ ಪ್ರೋತ್ಸಾಹಕ ಯೋಜನೆ'(ಸಿಎಂಪಿಎಸ್) ಅನ್ನು ₹10,000 ಕೋಟಿ ಬಜೆಟ್ ನೊಂದಿಗೆ 2039-40ರ ಆರ್ಥಿಕ ವರ್ಷದವರೆಗೆ ವಿಸ್ತರಿಸಲು ಅನುಮೋದನೆ ದೊರೆತಿದೆ.

ಪರಿಣಾಮ: ಈ ಯೋಜನೆಯು ಭಾರತದಲ್ಲಿ ವಿಶ್ವದರ್ಜೆಯ, ಸ್ಪರ್ಧಾತ್ಮಕ ಕಂಟೇನರ್ ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುವ, ಆಮದುಗಳ ಮೇಲಿನ ಅವಲಂಬನೆಯನ್ನು ತಗ್ಗಿಸುವ ಮತ್ತು ಪೂರೈಕೆ ಸರಪಳಿಯನ್ನು ಇನ್ನಷ್ಟು ಬಲಪಡಿಸುವ ಗುರಿಯನ್ನು ಹೊಂದಿದೆ.

- ಈ ಯೋಜನೆಯು ಹೊಸ ತಯಾರಿಕಾ ಘಟಕಗಳಿಗೆ ಬೆಂಬಲ ನೀಡಲು ಮತ್ತು ಅಸ್ತಿತ್ವದಲ್ಲಿರುವ ಕಂಟೇನರ್ ಉತ್ಪಾದನಾ ಸೌಲಭ್ಯಗಳ ವಿಸ್ತರಣೆಗೆ ಬೆಂಬಲ ನೀಡಲು ಉದ್ದೇಶಿಸಿದೆ.
- ದೇಶೀಯ ಕಂಟೇನರ್ ಉತ್ಪಾದನಾ ಸಾಮರ್ಥ್ಯವು ವಾರ್ಷಿಕವಾಗಿ ಸುಮಾರು ಹತ್ತು ಪಟ್ಟು ಹೆಚ್ಚಾಗಿ, 7.5 ಲಕ್ಷ ಟಿಇಯು (ಇಪ್ಪತ್ತು ಅಡಿ ಸಮಾನ ಘಟಕಗಳ ಪ್ರಮಾಣ) ತಲುಪುವ ನಿರೀಕ್ಷೆಯಿದೆ.
- ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕವಾದ ಉತ್ಪಾದನಾ ನೆಲೆಯನ್ನು ಸ್ಥಾಪಿಸಲಿದ್ದು, ಭಾರತವನ್ನು ಉತ್ತಮ ಗುಣಮಟ್ಟದ ಶಿಪ್ಪಿಂಗ್ ಕಂಟೇನರ್ ಗಳ ಜಾಗತಿಕ ರಫ್ತು ಕೇಂದ್ರವನ್ನಾಗಿ ರೂಪಿಸುವ ಸಾಮರ್ಥ್ಯವನ್ನು ಹೊಂದಿದೆ.
- ಇದು ಭಾರತದ ಕಡಲು ಮತ್ತು ಸರಕು ಸಾಗಣೆ ಪೂರೈಕೆ ಸರಪಳಿಗಳ ಅತ್ಯುತ್ತಮ ನಿರ್ವಹಣೆಯನ್ನು ಬಲಪಡಿಸಲಿದೆ.
- ಇದರಿಂದ ಕಾರ್ನರ್ ಕ್ಯಾಸ್ಟಿಂಗ್ (ದೃಢವಾದ ಉಕ್ಕಿನ ಬ್ಯಾಕ್) ಗಳು, ವೈಶಿಷ್ಟ್ಯಪೂರ್ಣ ಉಕ್ಕು, ಮರದ ಚೌಕಟ್ಟುಗಳು ಮತ್ತು ಬಣ್ಣಗಳನ್ನು ತಯಾರಿಸುವಂತಹ ಪೂರಕ ಕೈಗಾರಿಕೆಗಳಿಗೂ ಬೆಂಬಲ ದೊರೆಯಲಿದ್ದು, ಸುಮಾರು 3,000 ನೇರ ಉದ್ಯೋಗಗಳು ಮತ್ತು 50,000ಕ್ಕೂ ಹೆಚ್ಚು ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ;
- ಕಂಟೇನರ್ ಉತ್ಪಾದನಾ ಪ್ರೋತ್ಸಾಹಕ ಯೋಜನೆಯನ್ನು 2026-27ರ ಕೇಂದ್ರ ಆಯವ್ಯದಲ್ಲಿ ಘೋಷಿಸಲಾಗಿದೆ. ●





10 ವರ್ಷಗಳ ಪಿಎಂ ಆವಾಸ್ ಯೋಜನೆ-ಗ್ರಾಮೀಣ

ಸ್ಥಿರತೆ... ಅವಕಾಶ... ಭವಿಷ್ಯಕ್ಕಾಗಿ ಭರವಸೆಯ ಪೋಷಣೆ

ಮನೆಯೊಂದರ ನಿರ್ಮಾಣವು ಕುಟುಂಬಕ್ಕೆ ಭದ್ರತೆ, ಸಂತೋಷ ಮತ್ತು ಘನತೆಯನ್ನು ತರುವುದು. ಈ ಹಿನ್ನೆಲೆಯಲ್ಲಿ, 'ಪ್ರಧಾನಮಂತ್ರಿ ಆವಾಸ್ ಯೋಜನೆ' ಅಡಿಯಲ್ಲಿ ಕೇಂದ್ರ ಸರ್ಕಾರವು ಆರ್ಥಿಕ ನೆರವನ್ನು ಮಾತ್ರವಲ್ಲದೆ, ವಿದ್ಯುತ್, ನೀರು, ಶೌಚಾಲಯ ಮತ್ತು ಅಡುಗೆ ಅನಿಲ ಸಂಪರ್ಕಗಳ ಸೌಲಭ್ಯವನ್ನೂ ಒದಗಿಸುತ್ತಿದೆ. ದೇಶದ ಗ್ರಾಮೀಣ ವಸತಿ ವಲಯದ ಪಯಣವು, ಕಳೆದ ಒಂದು ದಶಕದಲ್ಲಿ, ರೂಪಾಂತರ ಮತ್ತು ಘನತೆಯ ಗಾಥೆಯಾಗಿದೆ. 'ಪ್ರಧಾನಮಂತ್ರಿ ಆವಾಸ್ ಯೋಜನೆ-ಗ್ರಾಮೀಣ' ಯೋಜನೆಯಡಿ 2029ರ ವೇಳೆಗೆ 49.5 ದಶಲಕ್ಷ (4.95 ಕೋಟಿ) ಮನೆಗಳನ್ನು ಒದಗಿಸುವ ಗುರಿಯನ್ನು ಹೊಂದಲಾಗಿದೆ.

ಮನೆ ಎನ್ನುವುದು ಇಟ್ಟಿಗೆ ಮತ್ತು ಸಿಮೆಂಟಿನಿಂದ ನಿರ್ಮಿತವಾದ ರಚನೆಯಷ್ಟೇ ಅಲ್ಲ; ಅದು ನಮ್ಮ ಭಾವನೆಗಳು ಮತ್ತು ಆಕಾಂಕ್ಷೆಗಳೊಂದಿಗೆ ಆಳವಾಗಿ ಬೆಸೆದುಕೊಂಡಿದೆ. ಮನೆಯ ಗೋಡೆಗಳು ಭದ್ರತೆಯನ್ನು ಒದಗಿಸುವ ಜೊತೆಗೆ, ಆತ್ಮವಿಶ್ವಾಸವನ್ನು ಹಾಗೂ ಉತ್ತಮ ನಾಳೆಯ ಬಗೆಗಿನ ನಂಬಿಕೆಯನ್ನು ಮೂಡಿಸುತ್ತವೆ. ಈ ಭಾವನೆ ಮತ್ತು ನಂಬಿಕೆಯನ್ನು ಗಮನದಲ್ಲಿಟ್ಟುಕೊಂಡು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2016ರ ನವೆಂಬರ್ 20ರಂದು ಉತ್ತರಪ್ರದೇಶದ ಆಗ್ರಾದಿಂದ 'ಪ್ರಧಾನಮಂತ್ರಿ ಆವಾಸ್ ಯೋಜನೆ-ಗ್ರಾಮೀಣ' (ಪಿಎಂಎವೈ - ಜಿ) ಗೆ ಚಾಲನೆ ನೀಡಿದರು. ಕಳೆದ ದಶಕದಲ್ಲಿ, ಪಿಎಂಎವೈ-ಜಿ ಅಡಿಯಲ್ಲಿ 39.1 ದಶಲಕ್ಷ (3.91 ಕೋಟಿ) ಮನೆಗಳನ್ನು ಮಂಜೂರು ಮಾಡಲಾಗಿದೆ; 2024ರ ಆಗಸ್ಟ್ 3ರ ವೇಳೆಗೆ, ಈ ಪೈಕಿ 31.2 ದಶಲಕ್ಷ (3.12 ಕೋಟಿ) ಮನೆಗಳ ನಿರ್ಮಾಣ ಪೂರ್ಣಗೊಂಡಿದ್ದು, ಅವುಗಳನ್ನು ಹಂಚಿಕೆ ಮಾಡಲಾಗಿದೆ. ಪ್ರಸ್ತುತ, 7.9 ದಶಲಕ್ಷ (79 ಲಕ್ಷ) ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಈ ಮನೆಗಳು ಸುರಕ್ಷಿತವಾಗಿರುವುದನ್ನು ಮತ್ತು ಉತ್ತಮ ಗುಣಮಟ್ಟ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು, ಭಾರತ ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 4,00,000 ಗಾರೆ ಕೆಲಸಗಾರರಿಗೆ ತರಬೇತಿ ನೀಡಿದೆ. ಮುಂದುವರಿದು, ಈ ಯೋಜನೆಯಡಿ ನಿಗದಿಪಡಿಸಲಾದ ಗುರಿಯ ಪೈಕಿ ಕನಿಷ್ಠ ಶೇಕಡ 60ರಷ್ಟನ್ನು ಪರಿಶಿಷ್ಟ ಜಾತಿ (ಎಸ್ ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್ ಟಿ)ಗಳ ಅರ್ಹ ಫಲಾನುಭವಿಗಳಿಗಾಗಿ ಮೀಸಲಿಡಲಾಗಿದೆ.

ಮಹಿಳಾ ಸಬಲೀಕರಣ

'ಪ್ರಧಾನಮಂತ್ರಿ ಆವಾಸ್ ಯೋಜನೆ-ನಗರ (ಪಿಎಂಎವೈ - ಯು) 2.0 ಅಡಿಯಲ್ಲಿ, ಕೇಂದ್ರದ ನೆರವಿನೊಂದಿಗೆ ನಿರ್ಮಿಸಲಾದ ಅಥವಾ ಖರೀದಿಸಲಾದ ಮನೆಗಳು, ಕುಟುಂಬದ ವಯಸ್ಕ ಮಹಿಳಾ ಮುಖ್ಯಸ್ಥರ ಹೆಸರಿನಲ್ಲಿರಬೇಕು ಅಥವಾ ಕುಟುಂಬದ ಪುರುಷ ಮುಖ್ಯಸ್ಥರು ಮತ್ತು ಅವರ ಪತ್ನಿ ಇಬ್ಬರ ಜಂಟಿ ಹೆಸರಿನಲ್ಲಿರಬೇಕು. ಒಂದು ವೇಳೆ ಕುಟುಂಬದಲ್ಲಿ ವಯಸ್ಕ ಮಹಿಳಾ ಸದಸ್ಯರು ಯಾರೂ ಇಲ್ಲದೇ ಇದ್ದಲ್ಲಿ ಮಾತ್ರ, ಮನೆಯನ್ನು ಪುರುಷ ಸದಸ್ಯರ ಹೆಸರಿನಲ್ಲಿ ಹೊಂದಬಹುದಾಗಿದೆ. ಜುಲೈ 2026ರ ವೇಳೆಗೆ, ಪಿಎಂಎವೈ-ಯು 2.0 ಅಡಿಯಲ್ಲಿ 16.20 ಲಕ್ಷ ಮನೆಗಳನ್ನು ಮಂಜೂರು ಮಾಡಲಾಗಿದ್ದು, ಈ ಪೈಕಿ 12.62 ಲಕ್ಷ ಮನೆಗಳನ್ನು ಮಹಿಳೆಯರ ಹೆಸರಿನಲ್ಲಿ ಮಂಜೂರು ಮಾಡಲಾಗಿದೆ. ಅಲ್ಲದೇ, ಪ್ರಧಾನಮಂತ್ರಿ ಆವಾಸ್ ಯೋಜನೆ-ನಗರ (ಪಿಎಂಎವೈ-ಯು) ಅಡಿಯಲ್ಲಿ ಮಂಜೂರಾದ 1.27 ಕೋಟಿಗೂ ಹೆಚ್ಚು ಮನೆಗಳ ಪೈಕಿ, 1 ಕೋಟಿ ಮನೆಗಳನ್ನು

ಕೃತಕ ಬುದ್ಧಿಮತ್ತೆ ಮೂಲಕ ಗ್ರಾಮೀಣ ವಸತಿ ಮೇಲ್ವಿಚಾರಣೆ

ಪ್ರಧಾನಮಂತ್ರಿ ಆವಾಸ್ ಯೋಜನೆ ಗ್ರಾಮೀಣ (ಪಿಎಂಎವೈ-ಜಿ) ಅಡಿಯಲ್ಲಿ, ನಿರ್ಮಾಣವಾಗುವ ಪ್ರತಿಯೊಂದು ಮನೆಯೂ ಅಚ್ಚುಕಟ್ಟಾಗಿದೆ ಮತ್ತು ಪ್ರತಿಯೊಬ್ಬ ಫಲಾನುಭವಿಯನ್ನು ಪರಿಶೀಲಿಸಲಾಗಿದೆ ಎಂಬುದನ್ನು ಕೇಂದ್ರ ಸರ್ಕಾರ ಖಚಿತಪಡಿಸುತ್ತಿದೆ. ಈ ನಿಟ್ಟಿನಲ್ಲಿ, ಕೃತಕ ಬುದ್ಧಿಮತ್ತೆ (ಎಐ) ಮತ್ತು ಮಷಿನ್ ಲರ್ನಿಂಗ್ (ಎಂಎಲ್) ಪರಿಕರಗಳನ್ನು ಬಳಸಿಕೊಂಡು, ಮೇಲ್ವಿಚಾರಣಾ ಪ್ರಕ್ರಿಯೆಯಲ್ಲಿ ಹೊಸ ಆಯಾಮಗಳನ್ನು ಸಂಯೋಜಿಸಲಾಗಿದೆ.

- **ಗುರುತಿಸುವ ವ್ಯವಸ್ಥೆ:** ಎಐ ಮಾದರಿಗಳು ಅಪ್ ಲೋಡ್ ಮಾಡಿದ ಛಾಯಾಚಿತ್ರಗಳಲ್ಲಿನ ರಚನಾತ್ಮಕ ಲಕ್ಷಣಗಳಾದ ಗೋಡೆಗಳು, ಛಾವಣಿಗಳು, ಬಾಗಿಲುಗಳು, ಕಿಟಕಿ ಇತ್ಯಾದಿಗಳನ್ನು ಗುರುತಿಸಿ ವಿಶ್ಲೇಷಿಸುತ್ತವೆ. ಅಧಿಕೃತ ಮತ್ತು ಸಂಪೂರ್ಣವಾಗಿ ನಿರ್ಮಿಸಲಾದ ಮನೆಗಳನ್ನು ಮಾತ್ರ 'ಪೂರ್ಣಗೊಂಡಿವೆ' ಎಂದು ದೃಢೀಕರಿಸುವುದನ್ನು ಇದು ಖಚಿತಪಡಿಸುತ್ತದೆ.
- **ವಂಚನೆ ತಡೆಗಟ್ಟುವಿಕೆ:** ಮಷಿನ್ ಲರ್ನಿಂಗ್ ಅಲ್ಗಾರಿದಮ್ ಗಳು ಒಂದೇ ಪ್ರದೇಶದಲ್ಲಿರುವ ಮನೆಗಳ ಛಾಯಾಚಿತ್ರಗಳನ್ನು ಹೋಲಿಸಿ ನೋಡುತ್ತವೆ. ಇದರಲ್ಲಿ ಸಾಮ್ಯತೆಗಳು ಕಂಡುಬಂದರೆ, ನಕಲು ಅಥವಾ ವಂಚನೆಯ ವರದಿಗಳನ್ನು ತಡೆಯಲು ವ್ಯವಸ್ಥೆಯು ಎಚ್ಚರಿಕೆ ನೀಡುತ್ತವೆ.
- **ಮುಖಚರ್ಯೆ ಗುರುತಿಸುವಿಕೆ ಮತ್ತು ಇ-ಕೆವೈಸಿ:** ಆಧಾರ್ ಆಧಾರಿತ ಹಾಗೂ ಕೃತಕ ಬುದ್ಧಿಮತ್ತೆ ಚಾಲಿತ ಮುಖಚರ್ಯೆ ಗುರುತಿಸುವಿಕೆ ಪ್ರಕ್ರಿಯೆಯ ಮೂಲಕ ಫಲಾನುಭವಿಗಳನ್ನು ಪರಿಶೀಲಿಸಲಾಗುತ್ತದೆ. ಆಧಾರ್ ಆಧಾರಿತ ಮುಖಚರ್ಯೆ ಗುರುತಿಸುವಿಕೆಯೊಂದಿಗೆ 3ಡಿ ಮನೆ ವಿನ್ಯಾಸಗಳಂತಹ ನವೀನ ವೈಶಿಷ್ಟ್ಯಗಳನ್ನು ಸಂಯೋಜಿಸುವ ಮೂಲಕ, ಫಲಾನುಭವಿಗಳ ಗುರುತಿಸುವಿಕೆಯಲ್ಲಿ ಪಾರದರ್ಶಕತೆಯನ್ನು 'ಆವಾಸ್+ 2024' ಮೊಬೈಲ್ ಅಪ್ಲಿಕೇಶನ್ ಇನ್ನಷ್ಟು ಹೆಚ್ಚಿಸಿದೆ.



“ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಕೋಟ್ಯಂತರ ಫಲಾನುಭವಿಗಳು ಈಗಾಗಲೇ ತಮ್ಮದೇ ಆದ ಸ್ವಂತ ಮನೆಗಳನ್ನು ಪಡೆದಿದ್ದಾರೆ. ಪ್ರತಿಯೊಂದು ಕುಟುಂಬಕ್ಕೂ ಅಗತ್ಯವಿರುವ ಮನೆಯನ್ನು ಒದಗಿಸುವ ಗುರಿಯತ್ತ ಸರ್ಕಾರವು ಸಂಪೂರ್ಣ ಬದ್ಧತೆಯೊಂದಿಗೆ, ಅತ್ಯಂತ ವೇಗವಾಗಿ ಮುನ್ನಡೆಯುತ್ತಿದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಮಹಿಳೆಯರ ಹೆಸರಿನಲ್ಲಿ ಮಂಜೂರು ಮಾಡಲಾಗಿದೆ. 'ವಿಕಸಿತ ಭಾರತ'ದ ಗುರಿಯತ್ತ ರಾಷ್ಟ್ರವು ಮುನ್ನಡೆಯುತ್ತಿದ್ದು, ಸಬಲೀಕೃತ ಗ್ರಾಮೀಣ ಜನಸಂಖ್ಯೆಯು ನಿರ್ಣಾಯಕ ಪಾತ್ರ ವಹಿಸಲಿದೆ. ಸಮಗ್ರ ಗ್ರಾಮೀಣ ವಸತಿ ಸೌಲಭ್ಯವನ್ನು ಸಾಧಿಸುವ ನಿಟ್ಟಿನಲ್ಲಿ ಮುಂಬರುವ ವರ್ಷಗಳು ನಿರ್ಣಾಯಕ ಹಂತವಾಗಲಿವೆ. ಹಂತ I ಮತ್ತು II ರ ಅಡಿಯಲ್ಲಿ 3.12 ಕೋಟಿ ಮನೆಗಳ ನಿರ್ಮಾಣ ಕಾರ್ಯ ಈಗಾಗಲೇ ಪೂರ್ಣಗೊಂಡಿದೆ. ವಸತಿ ಒದಗಿಸುವಿಕೆಯನ್ನು ಘನತೆ, ಸಬಲೀಕರಣ ಮತ್ತು ಅಗತ್ಯ ಸೌಕರ್ಯಗಳೊಂದಿಗೆ ಬೆಸೆಯುವ ಮೂಲಕ, ಈ ಉಪಕ್ರಮವು ಲಕ್ಷಾಂತರ ಜನರ ಜೀವನವನ್ನು ರೂಪಾಂತರಿಸಿದೆ. ಈ ಪ್ರಗತಿಯು ಅರ್ಹ ಪ್ರತಿಯೊಂದು ಕುಟುಂಬಕ್ಕೂ ಸ್ವಂತ ಸೂರು ಸಿಗುವುದನ್ನು ಖಚಿತಪಡಿಸುತ್ತದೆ. 2029ರವರೆಗಿನ ಸ್ಪಷ್ಟ ಮಾರ್ಗಸೂಚಿಯನ್ನು ಹೊಂದಿರುವ ಈ ಯೋಜನೆಯು, ಗ್ರಾಮೀಣ ಭಾರತದಲ್ಲಿ 'ಎಲ್ಲರಿಗೂ ವಸತಿ' ಎಂಬ ಮುನ್ನೋಟವನ್ನು ಸಾಕಾರಗೊಳಿಸಲಿದೆ.

ಪ್ರಧಾನಮಂತ್ರಿ ಆವಾಸ್ ಯೋಜನೆ - ನಗರ (ಪಿಎಂಎವೈ-ಯು)

ದೇಶದ ನಗರ ಪ್ರದೇಶಗಳಲ್ಲಿ, ಆರ್ಥಿಕ ದುರ್ಬಲ ವರ್ಗ (ಇಡಬ್ಲ್ಯುಎಸ್) ಮತ್ತು ಕಡಿಮೆ ಆದಾಯದ ಗುಂಪು (ಎಲ್ಐಜಿ) ಮುಂತಾದ ವರ್ಗಗಳಿಗೆ 1.12 ಕೋಟಿ ಮನೆಗಳ ಬೇಡಿಕೆ ಗುರುತಿಸಲ್ಪಟ್ಟಿದೆ. 2015ರ ಜೂನ್ 25 ರಂದು ಪ್ರಾರಂಭಿಸಲಾದ 'ಪ್ರಧಾನಮಂತ್ರಿ ಆವಾಸ್ ಯೋಜನೆ-ನಗರ 1.0' (ಪಿಎಂಎವೈ-ಯು 1.0) ಮತ್ತು 'ಪಿಎಂಎವೈ-ಯು 2.0' ಅಡಿಯಲ್ಲಿ, ಒಟ್ಟು 127.68 ಲಕ್ಷ ಮನೆಗಳಿಗೆ ಮಂಜೂರಾತಿ ನೀಡಲಾಗಿದೆ (ಈ ಪೈಕಿ ಪಿಎಂಎವೈ-ಯು 1.0 ಅಡಿಯಲ್ಲಿ 111.48 ಲಕ್ಷ ಮನೆಗಳು ಮತ್ತು 'ಪಿಎಂಎವೈ-ಯು 2.0' ಅಡಿಯಲ್ಲಿ 16.20 ಲಕ್ಷ ಮನೆಗಳು ಸೇರಿವೆ). ಇವುಗಳಲ್ಲಿ, 121.03 ಲಕ್ಷ ಮನೆಗಳ ನಿರ್ಮಾಣ ಕಾರ್ಯ ಈಗಾಗಲೇ ಪ್ರಾರಂಭವಾಗಿದೆ. 2026ರ ಜುಲೈ 13ರ ವೇಳೆಗೆ, ದೇಶಾದ್ಯಂತ 99.07 ಲಕ್ಷ (9.907 ದಶಲಕ್ಷ) ವಸತಿ ಘಟಕಗಳ ನಿರ್ಮಾಣ ಪೂರ್ಣಗೊಂಡಿದ್ದು, ಅವುಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ.



ಆರ್ ಬಿ ಐ ನ ದತ್ತಾಂಶ ಕೇಂದ್ರ ಮತ್ತು ಸೈಬರ್ ಭದ್ರತಾ ತರಬೇತಿ ಕೇಂದ್ರದ ಉದ್ಘಾಟನೆ

ಉತ್ತಮ ಆಡಳಿತದ ಮೂಲಕ ಸಮತೋಲಿತ ಅಭಿವೃದ್ಧಿ

ಭಾರತವು ದೂರದ ಪ್ರದೇಶಗಳಲ್ಲಿ ಉತ್ತಮ ಮೂಲಸೌಕರ್ಯ ನಿರ್ಮಾಣದ ವೇಗವನ್ನು ಹೆಚ್ಚಿಸುತ್ತಿದೆ; ಬಡ ಕುಟುಂಬಗಳು ಘನತೆಯಿಂದ ಬದುಕಲು ಅಗತ್ಯ ಸೌಲಭ್ಯಗಳನ್ನು ಖಾತರಿಪಡಿಸುತ್ತಿದೆ ಹಾಗೂ ಸುರಕ್ಷಿತ ಆರ್ಥಿಕ ಸೇರ್ಪಡೆಯನ್ನು ಪ್ರೋತ್ಸಾಹಿಸುವ ಜೊತೆಜೊತೆಗೇ ಡಿಜಿಟಲ್ ಸಂಪರ್ಕವನ್ನು ಪೋಷಿಸುತ್ತಿದೆ. ದೇಶದ ಅಭಿವೃದ್ಧಿಯ ಪಯಣದಲ್ಲಿ ತಾವೇನೂ ಹಿಂದೆ ಉಳಿಯುವುದಿಲ್ಲ ಎಂಬ ವಿಶ್ವಾಸವನ್ನು ನಾಗರಿಕರಲ್ಲಿ ಮೂಡಿಸಲು ಸೇವೆಗಳು ಮತ್ತು ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಪ್ರಯತ್ನಗಳ ನಡುವೆ, ಭಾರತವು ತನ್ನ ಹಣಕಾಸು ವ್ಯವಸ್ಥೆಯ ಭದ್ರತೆಯನ್ನೂ ಬಲಪಡಿಸುತ್ತಿದೆ. ಈ ಉಪಕ್ರಮದ ಭಾಗವಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಕ್ಟೋಬರ್ 25 ರಂದು ಒಡಿಶಾದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ - ಆರ್ ಬಿ ಐ ನೂತನವಾಗಿ ನಿರ್ಮಿಸಿರುವ ದತ್ತಾಂಶ ಮತ್ತು ಸೈಬರ್ ಭದ್ರತಾ ತರಬೇತಿ ಕೇಂದ್ರವನ್ನು ಉದ್ಘಾಟಿಸಿದರು.

ನಾಗರಿಕರ ಜೀವನವನ್ನು ಸುಲಲಿತಗೊಳಿಸುವುದು ಮತ್ತು ಜನರು ತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳಲು ಹೊಸ ಅವಕಾಶಗಳನ್ನು ಸೃಜಿಸುವುದು ಪ್ರಸ್ತುತ ಸರ್ಕಾರದ ಪ್ರಮುಖ ಉದ್ದೇಶವಾಗಿದೆ. ಭಾರತದಲ್ಲಿ ಆಡಳಿತ ನಿರ್ವಹಣೆಯ ವಿಧಾನವು ಕ್ಷಿಪ್ರ ಬದಲಾವಣೆಗೆ ಒಳಗಾಗುತ್ತಿದೆ ಎಂದು ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಗಮನಸೆಳೆದಿದ್ದಾರೆ. ಆರ್ ಬಿ ಐ ನೀಡಿರುವ ಈ ಹೊಸ ಸೌಲಭ್ಯಗಳು ರಾಷ್ಟ್ರದ ಆದ್ಯತೆಗಳ ಹೊಸ ಸ್ವರೂಪವನ್ನು ಪ್ರತಿಬಿಂಬಿಸಿವೆ. ಅಭಿವೃದ್ಧಿ, ವ್ಯಾಪ್ತಿ ವಿಸ್ತರಣೆ ಮತ್ತು ಬೆಳವಣಿಗೆಯ ಫಲಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವುದನ್ನು ಖಚಿತಪಡಿಸಿಕೊಳ್ಳುವುದರ ಮೇಲೆ ಸರ್ಕಾರವು ಪ್ರಸ್ತುತ ಗಮನಹರಿಸಿದೆ. ಅಭಿವೃದ್ಧಿಯ ಫಲಗಳು ಪ್ರತಿಯೊಂದು ಪ್ರದೇಶಕ್ಕೂ ಮತ್ತು ಪ್ರತಿಯೊಬ್ಬ ನಾಗರಿಕನಿಗೂ ಸಮಾನವಾಗಿ ತಲುಪುವಂತೆ ಮಾಡುವುದು ದಶಕಗಳ ಕಾಲ, ಒಂದು ದೊಡ್ಡ ಸವಾಲಾಗಿ ಉಳಿದಿತ್ತು. ಈ ಸ್ಥಿತಿಯನ್ನು ಬದಲಾಯಿಸಲು ನಾವು ಪ್ರಯತ್ನಿಸಿದ್ದೇವೆ. ನಮ್ಮ ಆಡಳಿತ ಮಾದರಿಯು ಜನಪರ, ಕ್ರಿಯಾಶೀಲ ಹಾಗೂ ಉತ್ತಮ ಆಡಳಿತಕ್ಕೆ ಬದ್ಧವಾಗಿರುವ ತತ್ವಗಳಲ್ಲಿ ಬೇರೂರಿದೆ. ನಮ್ಮ ದೃಷ್ಟಿಯಲ್ಲಿ, ಅಭಿವೃದ್ಧಿ ಎಂದರೆ ಭಾರತದಲ್ಲಿ ಸಮಾನವಾಗಿ ಎಲ್ಲರನ್ನೂ ಒಳಗೊಂಡ ಪ್ರಗತಿಯನ್ನು ಸಾಧಿಸುವುದು. ಅಂದರೆ, ಅಭಿವೃದ್ಧಿಯ ಅವಕಾಶಗಳು ನಮ್ಮ ಹಳ್ಳಿಗಳಿಗೂ ಸಣ್ಣ ಪಟ್ಟಣಗಳಿಗೂ ಸಮಾನವಾಗಿ ತಲುಪುವುದನ್ನು ಖಚಿತಪಡಿಸಿಕೊಳ್ಳುವುದಾಗಿದೆ ಎಂದು ಅವರು ವಿವರಿಸಿದ್ದಾರೆ. ದೂರದ ಪ್ರದೇಶಗಳಿಗೆ ಉತ್ತಮ ಸಂಪರ್ಕ ಕಲ್ಪಿಸುವುದು, ಬಡ ಕುಟುಂಬಗಳು ಘನತೆಯಿಂದ ಬದುಕಲು ಸಾಧ್ಯವಾಗಿಸುವ ಸೌಲಭ್ಯಗಳನ್ನು ಒದಗಿಸುವುದು ಹಾಗೂ ರಾಷ್ಟ್ರದ ಅಭಿವೃದ್ಧಿ ಪಯಣದಲ್ಲಿ ಯಾವುದೇ ನಾಗರಿಕರು ಹಿಂದೆ ಉಳಿಯುವುದಿಲ್ಲ ಎಂಬ ಭರವಸೆಯನ್ನು ಅವರಿಗೆ ನಿರಂತರವಾಗಿ ನೀಡುವುದು ನಮ್ಮ ಗುರಿಯಾಗಿದೆ ಎಂದು ಅವರು ಹೇಳಿದ್ದಾರೆ.

ಬ್ಯಾಂಕಿಂಗ್ ವ್ಯವಸ್ಥೆಯು ಇನ್ನಷ್ಟು ವಿಶ್ವಾಸಾರ್ಹ ಮತ್ತು ಸುರಕ್ಷಿತ

ಈ ಹಿಂದೆ ಬ್ಯಾಂಕಿಂಗ್ ವ್ಯವಸ್ಥೆಯಿಂದ ಹೊರಗುಳಿದಿದ್ದ ಜನರನ್ನು ಔಪಚಾರಿಕ ಹಣಕಾಸು ವ್ಯವಸ್ಥೆಗೆ ಸೇರ್ಪಡೆಗೊಳಿಸಲು ಕಳೆದ ಒಂದು ದಶಕದಲ್ಲಿ ಭಾರತ ವಿಶೇಷ ಗಮನಹರಿಸಿದೆ.

ಪೂರ್ವ ಭಾರತ: 'ವಿಕಸಿತ ಭಾರತ'ದ ಪ್ರಬಲ ಚಾಲಕ

'ವಿಕಸಿತ ಭಾರತ'ದ ನಿರ್ಮಾಣದಲ್ಲಿ ಪೂರ್ವ ಭಾರತವು ಅಭಿವೃದ್ಧಿಯ ಪ್ರಬಲ ಚಾಲಕ ಶಕ್ತಿಯಾಗಿ ಕಾರ್ಯನಿರ್ವಹಿಸಲಿದೆ ಎಂದು ಭುವನೇಶ್ವರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಪುನರುಚ್ಚರಿಸಿದ್ದಾರೆ. ಪ್ರಸ್ತುತ ಸರ್ಕಾರದ ನೇತೃತ್ವದಲ್ಲಿ, ಒಡಿಶಾದಲ್ಲಿ ಅಭಿವೃದ್ಧಿ ಉಪಕ್ರಮಗಳು ಹೊಸ ವೇಗವನ್ನು ಪಡೆದುಕೊಂಡಿವೆ. ತನ್ನ ಸಾಂಪ್ರದಾಯಿಕ ಖನಿಜಾಧಾರಿತ ಕೈಗಾರಿಕೆಗಳ ಜೊತೆಗೆ, ರಾಜ್ಯವು ಈಗ ಸೆಮಿಕಂಡಕ್ಟರ್ ಗಳು, ಎಲೆಕ್ಟ್ರಾನಿಕ್ಸ್, ಡೇಟಾ ಸೆಂಟರ್ ಗಳು ಮತ್ತು ಸುಧಾರಿತ ಕಂಪ್ಯೂಟಿಂಗ್ ಗಾಗಿ ಹೊಸ ಪರಿಸರ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ಗಣಿಗಳಿಂದ ಹಿಡಿದು ಮೈಕ್ರೋಚಿಪ್ ಗಳವರೆಗಿನ ಈ ಅಭಿವೃದ್ಧಿ ಪಯಣದ ಮೂಲಕ ಭವಿಷ್ಯಕ್ಕಾಗಿ ಮಹತ್ವದ ಅವಕಾಶಗಳನ್ನು ಒಡಿಶಾ ಸೃಷ್ಟಿಸುತ್ತಿದೆ. ಈ ಉದಯೋನ್ಮುಖ ಬೆಳವಣಿಗೆಯ ವಲಯಗಳು ವ್ಯಾಪಕ ಶ್ರೇಣಿಯ ಅವಕಾಶಗಳ ಬಾಗಿಲು ತೆರೆಯಲಿವೆ ಎಂದು ಪ್ರಧಾನಮಂತ್ರಿ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ಒಡಿಶಾದಲ್ಲಿರುವ ದತ್ತಾಂಶ ಕೇಂದ್ರದಂತಹ ನವೀನ ಡೇಟಾ ಸೆಂಟರ್ ಗಳು ಮತ್ತು ದೃಢವಾದ ಕಂಪ್ಯೂಟಿಂಗ್ ವ್ಯವಸ್ಥೆಗಳ ಬೆಂಬಲದೊಂದಿಗೆ, ಬ್ಯಾಂಕಿಂಗ್ ಸೇವೆಗಳನ್ನು ಹೆಚ್ಚು ದಕ್ಷ ಮತ್ತು ವಿಶ್ವಾಸಾರ್ಹವಾಗಿಸಲು ಮುಂಬರುವ ದಶಕವನ್ನು ಮೀಸಲಿಡಲಾಗುವುದು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಆಧುನಿಕ ಯುದ್ಧವು ಇನ್ನು ಕೇವಲ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಮೂಲಕವೇ ನಡೆಯುವುದಿಲ್ಲ; ಒಂದು ರಾಷ್ಟ್ರದ ಆರ್ಥಿಕತೆಯನ್ನು ಗುರಿಯಾಗಿಸಿಕೊಳ್ಳುವ ಮೂಲಕವೂ ಅದನ್ನು ದುರ್ಬಲಗೊಳಿಸಬಹುದು ಎಂದು ಪ್ರಧಾನಮಂತ್ರಿ ಪ್ರತಿಪಾದಿಸಿದ್ದಾರೆ. ಭಾರತವು ಆರ್ಥಿಕವಾಗಿ ಬಲಗೊಳ್ಳುತ್ತಿರುವಂತೆ, ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸೈಬರ್ ಅಪರಾಧಿಗಳು ಮತ್ತು ಸೈಬರ್ ಭಯೋತ್ಪಾದಕರಿಂದ ರಕ್ಷಿಸುವುದು ಅತ್ಯಗತ್ಯವಾಗಿದೆ. ಸೈಬರ್ ಬೆದರಿಕೆಗಳ ಸ್ವರೂಪವು ಬದಲಾಗುತ್ತಿದೆ; ಇಂತಹ ಹೊಸ ಸವಾಲುಗಳನ್ನು ಹಳೆಯ ವ್ಯವಸ್ಥೆಗಳು, ತರಬೇತಿ ವಿಧಾನಗಳು ಅಥವಾ ಉಪಕರಣಗಳನ್ನು ಬಳಸಿಕೊಂಡು ಎದುರಿಸಲು ಸಾಧ್ಯವಿಲ್ಲ. ಇದಕ್ಕೆ ಆಧುನಿಕ ಮೂಲಸೌಕರ್ಯ ಮತ್ತು ನುರಿತ ಕಾರ್ಯಪಡೆಯ ಅಗತ್ಯವಿದ್ದು, ಈ ಕ್ಷೇತ್ರಗಳಲ್ಲಿ ಪ್ರತ್ಯೇಕ ಸೈಬರ್ ಭದ್ರತಾ ಸಂಸ್ಥೆ ನಿರ್ಣಾಯಕ ಪಾತ್ರ ವಹಿಸಲಿದೆ.

ಸರ್ಕಾರದ ನೆರವು ವಿತರಣೆಯಲ್ಲಿನ ಸೋರಿಕೆ ತಡೆಗಟ್ಟುವಿಕೆ

ದೇಶದಲ್ಲಿ 2014ರವರೆಗೂ ಅರ್ಧಕ್ಕಿಂತ ಹೆಚ್ಚು ಜನಸಂಖ್ಯೆಯು ಬ್ಯಾಂಕಿಂಗ್ ವ್ಯವಸ್ಥೆಯ ಹೊರಗಿತ್ತು ಎಂದು ಪ್ರಧಾನಮಂತ್ರಿ ಮೋದಿ ಅವರು ತಿಳಿಸಿದ್ದಾರೆ. ಮಧ್ಯಮ ವರ್ಗದವರಿಗೆ ಬ್ಯಾಂಕ್ ಸಾಲ ಪಡೆಯುವುದು ಗಗನಕುಸುಮವಾದರೆ, ಸಣ್ಣ ರೈತರು, ಭೂಮಿಯಿಲ್ಲದವರು ಮತ್ತು ಮಹಿಳೆಯರ ಪಾಲಿಗೆ ಅದು ಕಲ್ಪನೆಗೂ ನಿಲುಕದ್ದಾಗಿತ್ತು. ಆರ್ಥಿಕ ಸೇರ್ಪಡೆಯ ಆಧುನಿಕ ಯುಗವು ದೇಶಾದ್ಯಂತ ಈ ಸನ್ನಿವೇಶವನ್ನು ಬದಲಾಯಿಸಿದೆ. ಇಂದು, ಭಾರತದಲ್ಲಿ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯು ಪ್ರತಿಯೊಬ್ಬರಿಗೂ ದಿನದ 24 ಗಂಟೆಯೂ ಆರ್ಥಿಕ ಸೇವೆಗಳನ್ನು ಪಡೆಯುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಪ್ರತಿಯೊಂದು



ಬ್ಯಾಂಕಿಗೆ ನೀಡಲು ಯಾವುದೇ ಅಡಮಾನ ಇಲ್ಲದವರೂ ಕೂಡ, ಈಗ ತಮ್ಮದೇ ಆದ ಉದ್ಯಮಗಳನ್ನು ಪ್ರಾರಂಭಿಸಲು ಕೈಗೆಟುಕುವ ಮತ್ತು ಸುಲಭವಾಗಿ ಲಭ್ಯವಾಗುವ ಸಾಲ ಪಡೆಯಲು ಸಾಧ್ಯವಾಗುತ್ತಿದೆ. ಸಣ್ಣ ಪ್ರಮಾಣದ ಉದ್ಯಮಿಗಳಿಂದ ಹಿಡಿದು ಸಾಂಪ್ರದಾಯಿಕ ಕುಶಲಕರ್ಮಿಗಳವರೆಗೆ ಹಾಗೂ ಬೀದಿ ಬದಿ ವ್ಯಾಪಾರಿಗಳಿಂದ ಹಿಡಿದು ಅಸಂಘಟಿತ ವಲಯದ ಕಾರ್ಮಿಕರವರೆಗೆ—ಇವರೆಲ್ಲರೂ ಇದೇ ಮೊದಲ ಬಾರಿಗೆ ಔಪಚಾರಿಕ ಬ್ಯಾಂಕಿಂಗ್ ವ್ಯವಸ್ಥೆಯ ಅನುಕೂಲಗಳನ್ನು ಪಡೆಯುವ ಅವಕಾಶ ಪಡೆದುಕೊಂಡಿದ್ದಾರೆ.


- ನರೇಂದ್ರ ಮೋದಿ, ಪ್ರಧಾನಮಂತ್ರಿ

ಕುಟುಂಬವೂ ಇದರ ಪ್ರಯೋಜನ ಪಡೆಯುವುದನ್ನು ಖಚಿತಪಡಿಸಿದೆ. ಸರ್ಕಾರಿ ನೆರವಿನ ವಿತರಣೆಯಲ್ಲಿನ ಸೋರಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿದೆ; ಕೇಂದ್ರ ಸರ್ಕಾರ ಕಳುಹಿಸುವ ಪ್ರತಿಯೊಂದು ರೂಪಾಯಿಯೂ ಈಗ ಯಾವುದೇ ಕಡಿತವಿಲ್ಲದೆ ನೇರವಾಗಿ ಫಲಾನುಭವಿಯ ಖಾತೆಯನ್ನು ತಲುಪುತ್ತಿದೆ. ದೇಶಾದ್ಯಂತ ತೆರೆಯಲಾಗಿರುವ ಸುಮಾರು 600 ದಶಲಕ್ಷ (60 ಕೋಟಿ) 'ಜನ್ ಧನ್' ಖಾತೆಗಳಿಂದಾಗಿ ಇದು ಬಹುಮಟ್ಟಿಗೆ ಸಾಧ್ಯವಾಗಿದೆ. ●

ವಿಶ್ವದ ಶಕ್ತಿಗೆ ಭಾರತದ ಚೈತನ್ಯದ ಬಲ

'ವಿಕಸಿತ ಭಾರತ'ದ ಸಂಕಲ್ಪವು 140 ಕೋಟಿ ನಾಗರಿಕರ ಆಶಯಗಳ ಈಡೇರಿಕೆಗೆ ಮಾತ್ರ ಸೀಮಿತವಾಗಿಲ್ಲ; ಅದು ಶಾಂತಿಯುತ ಮತ್ತು ಸಮೃದ್ಧ ಜಗತ್ತಿಗಾಗಿ ಭರವಸೆಯೂ ಆಗಿದೆ. ಭಾರತವು ವಿಶ್ವದ 'ಬ್ಯಾಕ್ ಆಫೀಸ್' ಆಗಿ ಉಳಿದಿಲ್ಲ; ಬದಲಾಗಿ, ನಾವೀನ್ಯತೆ ಮತ್ತು ಪರಿಹಾರಗಳ ತಾಣವಾದ 'ಬ್ರೈನ್ ಆಫೀಸ್' ಆಗಿ ರೂಪುಗೊಂಡು ಇಡೀ ಮಾನವಕುಲವನ್ನು ಸಬಲಗೊಳಿಸುತ್ತಿದೆ. ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ, ಸದೃಢ ಅಂತಾರಾಷ್ಟ್ರೀಯ ಸಂಸ್ಥೆಗಳ ತುರ್ತು ಅಗತ್ಯದ ಬಗ್ಗೆ ಮತ್ತು 'ಜಾಗತಿಕ ದಕ್ಷಿಣ' ರಾಷ್ಟ್ರಗಳಿಗೆ ಪ್ರಬಲ ಧ್ವನಿಯ ಮಹತ್ವದ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎನ್ ಡಿ ಟಿ ವಿ ವಿಶ್ವ ಶೃಂಗದಲ್ಲಿ ಮಾಡಿದ ಭಾಷಣದಲ್ಲಿ ಒತ್ತಿ ಹೇಳಿದ್ದಾರೆ.

> **ವಿಕಸಿತ ಭಾರತವು ಕೇವಲ ನಮಗಾಗಿ ಮಾತ್ರವಲ್ಲ; ಅದು ಉತ್ತಮ ಜಗತ್ತಿಗಾಗಿ ಭರವಸೆಯಾಗಿದೆ.**
>
> *- ನರೇಂದ್ರ ಮೋದಿ, ಪ್ರಧಾನಮಂತ್ರಿ*



ಎನ್ ಡಿ ಟಿ ವಿ ವಿಶ್ವ ಶೃಂಗದಲ್ಲಿ ಅಕ್ಟೋಬರ್ 22ರಂದು ಮಾತನಾಡಿದ ಪ್ರಧಾನಮಂತ್ರಿಗಳು, ಜಾಗತಿಕ ಬದಲಾವಣೆಗಳು ಇಂದು ಸಾಮಾನ್ಯ ಜನರ ದೈನಂದಿನ ಜೀವನದ ಮೇಲೂ ನೇರ ಪರಿಣಾಮ ಬೀರುತ್ತಿವೆ ಎಂದು ಗಮನಸೆಳೆದಿದ್ದಾರೆ. ಈ ಜಾಗತಿಕ ಬದಲಾವಣೆಗಳಿಂದ ಉಂಟಾಗುತ್ತಿರುವ ನೈಜ ಪರಿಣಾಮಗಳು ಅಂತಾರಾಷ್ಟ್ರೀಯ ವೇದಿಕೆಗಳ ಅಗತ್ಯದ ಬಗ್ಗೆ ಒತ್ತಿ ಹೇಳಿವೆ. ಪ್ರಸ್ತುತ ಜಾಗತಿಕ ವ್ಯವಸ್ಥೆಯು ಏಕೆ ಬದಲಾವಣೆಗೆ ಒಳಗಾಗುತ್ತಿದೆ ಮತ್ತು ಇಂದಿನ ಬಿಕ್ಕಟ್ಟುಗಳನ್ನು ಎದುರಿಸುವಲ್ಲಿ ಹಳೆಯ ವ್ಯವಸ್ಥೆಗಳು ಏಕೆ ವಿಫಲವಾಗುತ್ತಿವೆ ಎಂಬುದರ ಕುರಿತು ಜಾಗತಿಕ ಸಮುದಾಯವು ಗಂಭೀರವಾಗಿ ಚಿಂತಿಸಬೇಕಿದೆ ಎಂದು 'ದಿ ವರ್ಲ್ಡ್ ಬಿಟ್ವೀನ್ ಆರ್ಡರ್ಸ್' (ಅವ್ಯವಸ್ಥೆ ಮತ್ತು ಹೊಸ ವ್ಯವಸ್ಥೆಯ ನಡುವಿನ ಜಗತ್ತು) ಎಂಬ ವಿಷಯವಾಗಿ ಮಾತನಾಡುತ್ತಾ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕರೆ ನೀಡಿದ್ದಾರೆ.

ಒಂದು ಕಾಲದಲ್ಲಿ ರಾಷ್ಟ್ರಗಳನ್ನು ಪರಸ್ಪರ ಬೆಸೆಯುವ ಪ್ರಮುಖ ಸಂಪರ್ಕ ಸೇತುವೆಗಳಾಗಿದ್ದ ವ್ಯಾಪಾರ, ತಂತ್ರಜ್ಞಾನ ಮತ್ತು ಕಡಲ ಮಾರ್ಗಗಳನ್ನು ಇಂದು ಅಸ್ತ್ರವಾಗಿಸಿಕೊಳ್ಳಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ, ಸಾಂಸ್ಥಿಕ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳನ್ನು ಪ್ರಸ್ತುತ ಜಾಗತಿಕ ವಾಸ್ತವಗಳೊಂದಿಗೆ ಪರಿಣಾಮಕಾರಿಯಾಗಿ ಬೆಸೆಯಬಲ್ಲ, ಎಲ್ಲರನ್ನೂ ಒಳಗೊಂಡ ಜಾಗತಿಕ ವ್ಯವಸ್ಥೆಯನ್ನು ಸ್ಥಾಪಿಸುವುದು ಅತ್ಯಂತ ಮಹತ್ವದ್ದಾಗಿದೆ. "ಹಾಗೆಯೇ, ಇಂತಹ ಸನ್ನಿವೇಶದಲ್ಲಿಯೇ ಭಾರತದ ಪಾತ್ರದ ಪ್ರಶ್ನೆ ಮುನ್ನೆಲೆಗೆ ಬರಲಿದೆ" ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಒತ್ತಿ ಹೇಳಿದ್ದಾರೆ. "ಶತಮಾನ ಬದಲಾದರೂ ನಾವು ಬದಲಾಗದಿದ್ದರೆ, ಬದಲಾವಣೆಗೆ ಚಾಲನೆ ನೀಡುವ ನಮ್ಮ ಸಾಮರ್ಥ್ಯ ಅನಿವಾರ್ಯವಾಗಿ ಕುಂಠಿತಗೊಳ್ಳುತ್ತದೆ". ಆದ್ದರಿಂದ, ಉದಯೋನ್ಮುಖ ಜಾಗತಿಕ ವ್ಯವಸ್ಥೆಯಲ್ಲಿನ ಬಹುಪಕ್ಷೀಯ

ಪ್ರಧಾನಮಂತ್ರಿಗಳು ಹಲವು ಮಹತ್ವದ ಐತಿಹಾಸಿಕ ಸಾಧನೆಗಳನ್ನು ಪ್ರಸ್ತಾಪಿಸಿದ್ದಾರೆ...

300 ಗಿಗಾವ್ಯಾಟ್ ಗಳು

ಭಾರತವು ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಸ್ಥಾಪಿತ ಸಾಮರ್ಥ್ಯ ಹೊಂದುವಲ್ಲಿ ಇದೇ ಮೊದಲ ಬಾರಿಗೆ ಈ ಮೈಲಿಗಲ್ಲನ್ನು ದಾಟಿದೆ.



- ಸೆಪ್ಟೆಂಬರ್ ನಲ್ಲಿ ಸರಕುಗಳ ರಫ್ತಿನಲ್ಲಿ **ಶೇ.25** ರಷ್ಟು ಹೆಚ್ಚಳ ದಾಖಲಾಗಿದೆ.
- ಕಳೆದ 12 ವರ್ಷಗಳಲ್ಲಿ ಕಡಲ ಆಹಾರ ಉತ್ಪನ್ನಗಳ ರಫ್ತು ಪ್ರಮಾಣ ದುಪ್ಪಟ್ಟಿಗಿಂತಲೂ ಹೆಚ್ಚಾಗಿದೆ.
- ಸುಮಾರು **3.5** ಕೋಟಿ ಮಹಿಳೆಯರು 'ಲಕ್ಷಾಧಿಪತಿ ದೀದಿ'ಗಳಾಗಿದ್ದಾರೆ; 6 ಕೋಟಿ ತಲುಪುವ ಗುರಿ ಹೊಂದಲಾಗಿದೆ.
- "ಪಿಎಂ ವಿಕಸಿತ ಭಾರತ ರೋಜ್ ಗಾರ್ ಯೋಜನೆ" ಅಡಿಯಲ್ಲಿ **7** ದಶಲಕ್ಷ ಹೊಸ ಉದ್ಯೋಗಗಳನ್ನು ಸೃಜಿಸಲಾಗುತ್ತಿದೆ.
- ವಾರ್ಷಿಕ **₹12** ಲಕ್ಷದವರೆಗಿನ ಆದಾಯದ ಮೇಲೆ ಶೂನ್ಯ ತೆರಿಗೆಯಿಂದ ಮಧ್ಯಮ ವರ್ಗದ ಜನರಿಗೆ ಅನುಕೂಲವಾಗಿದೆ.
- ಭಾರತ, ಸಂಶೋಧನಾ ಪ್ರಕಟಣೆಗಳಲ್ಲಿ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ.
- 2025ನೇ ಸಾಲಿನಲ್ಲಿ **1.5** ಲಕ್ಷ ಪೇಟೆಂಟ್ ಅರ್ಜಿಗಳನ್ನು ಸಲ್ಲಿಸಲಾಗಿದೆ.
- ಚಿಪ್ ವಿನ್ಯಾಸ ವಲಯದಲ್ಲಿನ ಜಾಗತಿಕ ಕಾರ್ಯಪಡೆಯ **20%** ರಷ್ಟು ಭಾಗವು ಭಾರತದಲ್ಲಿದೆ.
- ಭಾರತೀಯ ಎಂಜಿನಿಯರ್ ಗಳು 2 ರಿಂದ 3 ನ್ಯಾನೊಮೀಟರ್ ಚಿಪ್ ಗಳನ್ನು ವಿನ್ಯಾಸಗೊಳಿಸುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.
- ದೇಶಾದ್ಯಂತದ ವಿದ್ಯಾರ್ಥಿಗಳು ಈವರೆಗೆ **325**ಕ್ಕೂ ಹೆಚ್ಚು ಚಿಪ್ ವಿನ್ಯಾಸಗಳನ್ನು ಅಭಿವೃದ್ಧಿಪಡಿಸಿದ್ದಾರೆ.
- ಭಾರತದಲ್ಲಿ ಪ್ರಪಂಚದ ಅರ್ಧಕ್ಕಿಂತ ಹೆಚ್ಚು 'ಜಾಗತಿಕ ಸಾಮರ್ಥ್ಯ ಕೇಂದ್ರ' (ಜಿಸಿಸಿ)ಗಳಿವೆ.



ಭವಿಷ್ಯದ ಬಿಕ್ಕಟ್ಟುಗಳಿಗೆ ಸಜ್ಜಾಗುವಂತೆ ರೂಪಿಸಲಾಗಿರುವ ಸರ್ಕಾರಿ ನೀತಿಗಳು ಮತ್ತು ದೀರ್ಘಕಾಲೀನ ಹೂಡಿಕೆಗಳ ಹಿಂದಿರುವ ದೂರದೃಷ್ಟಿಯು, ಕಚ್ಚಾ ವಸ್ತುಗಳಿಗಾಗಿ ಆಮದುಗಳ ಮೇಲೆ ಬಹುವಾಗಿ ಅವಲಂಬಿತವಾಗಿದ್ದ ಔಷಧ ಉದ್ಯಮವು ಸ್ವಾವಲಂಬನೆಯತ್ತ ಸಾಗುವಲ್ಲಿ ಹೇಗೆ ಪೂರಕವಾಗಿವೆ ಎಂಬುದನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉದಾಹರಣೆ ನೀಡಿದ್ದಾರೆ. ಈ ರೂಪಾಂತರದಲ್ಲಿ ಉತ್ಪಾದನೆ ಆಧಾರಿತ ಪ್ರೋತ್ಸಾಹಕ (ಪಿ ಎಲ್ ಐ) ಯೋಜನೆಯು ಮಹತ್ವದ ಪಾತ್ರ ವಹಿಸಿದೆ. ನಾವೀನ್ಯತೆಯನ್ನು ಉತ್ತೇಜಿಸಲು, ಹೊಸ ಮಾರ್ಗಗಳನ್ನು ಅನ್ವೇಷಿಸಲು, ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಲು ಹಾಗೂ ಭಾರತದ ಯಶಸ್ಸನ್ನು ಜಾಗತಿಕ ಸಮೃದ್ಧಿಯೊಂದಿಗೆ ಬೆಸೆಯಲು ಪ್ರಧಾನಮಂತ್ರಿ ಮೋದಿ ಅವರು ದೃಢ ಬದ್ಧತೆ ವ್ಯಕ್ತಪಡಿಸಿದ್ದಾರೆ. "ನಾವು ದೊಡ್ಡ ಕನಸು ಕಾಣೋಣ, ಪ್ರತಿಯೊಂದು ಸವಾಲನ್ನೂ ಅವಕಾಶವನ್ನಾಗಿ ಪರಿವರ್ತಿಸೋಣ ಹಾಗೂ ನಾವು ಕೈಗೊಳ್ಳುವ ಪ್ರತಿಯೊಂದು ಸಂಕಲ್ಪವೂ ಸಾಕಾರಗೊಳ್ಳುವುದನ್ನು ಖಚಿತಪಡಿಸಿಕೊಳ್ಳೋಣ" ಎಂದು ಪ್ರಧಾನಮಂತ್ರಿಯವರು ಹೇಳಿದ್ದಾರೆ.

ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಸಂಸ್ಥೆಗಳನ್ನು ಸುಧಾರಿಸುವುದು ಹಾಗೂ 'ಜಾಗತಿಕ ದಕ್ಷಿಣ'ದ ರಾಷ್ಟ್ರಗಳಿಗೆ ನ್ಯಾಯಸಮ್ಮತವಾಗಿ ಸಲ್ಲಬೇಕಾದ ಸ್ಥಾನಮಾನವನ್ನು ತ್ವರಿತವಾಗಿ ಕಲ್ಪಿಸುವುದು ಅತ್ಯಗತ್ಯವಾಗಿದೆ ಎಂದು ಅವರು ನುಡಿದಿದ್ದಾರೆ. ದುರ್ಬಲ ದೇಶಗಳನ್ನು ಶಕ್ತಿಶಾಲಿ ರಾಷ್ಟ್ರಗಳು ಶೋಷಿಸಬಾರದು. ಈ ದೃಷ್ಟಿಕೋನದಿಂದ ಮಾರ್ಗದರ್ಶಿತವಾದ ಭಾರತವು, ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ 100ಕ್ಕೂ ಹೆಚ್ಚು ದೇಶಗಳಿಗೆ ಲಸಿಕೆಗಳು ಮತ್ತು ಔಷಧಗಳನ್ನು ಒದಗಿಸುವ ಉಪಕ್ರಮವನ್ನು ಕೈಗೊಂಡಿತು. 'ಎಲ್ಲರೊಂದಿಗೆ ಎಲ್ಲರ ಅಭಿವೃದ್ಧಿ' ಎಂಬ ಮೂಲ ತತ್ವಕ್ಕೆ ಬದ್ಧವಾಗಿ, ಭಾರತವು ಜಿ-20 ಮತ್ತು ಬ್ರಿಕ್ಸ್ ಶೃಂಗಸಭೆಗಳ ಸಂದರ್ಭದಲ್ಲಿ ಒಮ್ಮತವನ್ನು ಪೋಷಿಸಿದ್ದು, ಎರಡೂ ಸಂದರ್ಭಗಳಲ್ಲಿ 'ದೆಹಲಿ ಘೋಷಣೆ'ಗೆ ಸರ್ವಾನುಮತದ ಅಂಗೀಕಾರ ಪಡೆಯುವಲ್ಲಿ ಯಶಸ್ವಿಯಾಗಿದೆ. ಭಾರತದ ಬೆಳೆಯುತ್ತಿರುವ ಶಕ್ತಿಯನ್ನು ಜಾಗತಿಕ ಕಲ್ಯಾಣದೊಂದಿಗೆ ನೇರವಾಗಿ ಸಂಪರ್ಕಿಸುತ್ತಾ, ಪ್ರಧಾನಮಂತ್ರಿ ಮೋದಿ ಅವರು, ದೇಶದ ನೀತಿಗಳು ಕ್ಷಣಿಕ ಪ್ರವೃತ್ತಿಗಳಿಂದ ಪ್ರೇರಿತವಾಗದೇ, ಶಾಶ್ವತ ನಾಗರಿಕ ಮೌಲ್ಯಗಳಲ್ಲಿ ಬೇರೂರಿವೆ; ಹೀಗೆ, ಬಲಶಾಲಿ ಭಾರತವು ಜಾಗತಿಕ ಸ್ಥಿರತೆ ಮತ್ತು ನಿರಂತರತೆಗೆ ಖಾತರಿಯಾಗಿ ಕಾರ್ಯನಿರ್ವಹಿಸಿದೆ ಎಂದು ಹೇಳಿದ್ದಾರೆ. ●



ವಿಕಸಿತ ಭಾರತ ನಿರ್ಮಿಸಲು ಭದ್ರ ಬುನಾದಿ...
ವೈಜ್ಞಾನಿಕ ಸಂಶೋಧನೆ ಮತ್ತು ನಾವೀನ್ಯತೆ

ವಿಕಸಿತ ಭಾರತದ ಸಂಕಲ್ಪ ಸಿದ್ಧಿಯು ವೈಜ್ಞಾನಿಕ ಸಂಶೋಧನೆ, ಮೂಲ ಆವಿಷ್ಕಾರಗಳು ಮತ್ತು ನಾವೀನ್ಯತೆಯ ಸದೃಢವಾದ ಅಡಿಪಾಯದ ಮೇಲೆ ನಿಂತಿದೆ. ಭಾರತವು ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವುದಲ್ಲದೆ, ಭವಿಷ್ಯದ ತಂತ್ರಜ್ಞಾನಗಳ ಪಥವನ್ನು ರೂಪಿಸುವ ಮೂಲಕ ಇಡೀ ಜಗತ್ತನ್ನೇ ಮುನ್ನಡೆಸಬೇಕು. ಇದಲ್ಲದೆ, ಕೃತಕ ಬುದ್ಧಿಮತ್ತೆಯಂತಹ ವೇಗವಾಗಿ ವಿಕಸನಗೊಳ್ಳುತ್ತಿರುವ ತಂತ್ರಜ್ಞಾನಗಳಿಂದ ವ್ಯಾಖ್ಯಾನಿಸಲ್ಪಟ್ಟ ಯುಗದಲ್ಲಿ, ನಾವೀನ್ಯತೆಯ ವೇಗದ ಜತೆಗೆ ವಿಶ್ವಾಸಾರ್ಹತೆ, ನಿಖರತೆ ಮತ್ತು ಸತ್ಯಾಸತ್ಯತೆಗಳ ದೃಢೀಕರಣವನ್ನು ಕಾಪಾಡಿಕೊಳ್ಳುವುದು ಕಡ್ಡಾಯವಾಗಿದೆ. ಈ ಉದ್ದೇಶದ ಆಧಾರದಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಕ್ಟೋಬರ್ 27ರಂದು 'ಉದಯೋನ್ಮುಖ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ ಸಮಾವೇಶ 2026' ಉದ್ಘಾಟಿಸಿದರು.


ಭಾರತದ ಯುವ ಸಮುದಾಯ ಮುನ್ನಡೆಯುತ್ತಿರುವ ಮಹತ್ವಾಕಾಂಕ್ಷೆ ಮತ್ತು ಆತ್ಮವಿಶ್ವಾಸ ನಿಜಕ್ಕೂ ಉತ್ತೇಜನಕಾರಿಯಾಗಿದೆ. ಹಿಂದೆ, ಭಾರತವು ಇತರರನ್ನು ಅನುಸರಿಸುತ್ತಿತ್ತು, ಅದಾದ ಅನೇಕ ವರ್ಷಗಳ ನಂತರ ವಿದೇಶಿ ನಾವೀನ್ಯತೆಗಳನ್ನು ಅಳವಡಿಸಿಕೊಳ್ಳುತ್ತಿತ್ತು ಅಥವಾ ದತ್ತು ಸ್ವೀಕರಿಸುತ್ತಿತ್ತು. ಇಂದು, ಜಾಗತಿಕ ಸವಾಲುಗಳಿಗೆ ಪರಿಹಾರಗಳನ್ನು ಒದಗಿಸಲು ಮೂಲ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಗುರಿಯೊಂದಿಗೆ ಭಾರತ ಮುನ್ನಡೆಯುತ್ತಿದೆ. ಭಾರತೀಯ ವಿಜ್ಞಾನಿಗಳು ತಮ್ಮ ಮೊದಲ ಪ್ರಯತ್ನದಲ್ಲೇ ಮಂಗಳ ಗ್ರಹವನ್ನು ತಲುಪುವುದರಿಂದ ಹಿಡಿದು ಚಂದ್ರನ ಅನ್ವೇಷಿಸಿ ದಕ್ಷಿಣ ಧ್ರುವದ ಮೇಲೆ ಯಶಸ್ವಿಯಾಗಿ ಇಳಿಯುವವರೆಗೆ ಗಮನಾರ್ಹ ಸಾಧನೆಗಳನ್ನು ಮಾಡಿದ್ದಾರೆ. ಭಾರತವು ಭವಿಷ್ಯದ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು, ಧೈರ್ಯದಿಂದ ಹೊಸತನ ಕಂಡುಕೊಳ್ಳಬೇಕು, ಅಂತಹ ತಂತ್ರಜ್ಞಾನಗಳ ಸೃಷ್ಟಿಯಲ್ಲಿ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿರಬೇಕೆಂದು ಪ್ರಧಾನ ಮಂತ್ರಿ ಮೋದಿ ಒತ್ತಿ ಹೇಳಿದರು. ಭಾರತವು ಶೂನ್ಯ ಮತ್ತು ಸಂಖ್ಯಾ ವ್ಯವಸ್ಥೆಯ ಆವಿಷ್ಕಾರದಿಂದ ಖಗೋಳಶಾಸ್ತ್ರದ ಪ್ರಗತಿಯವರೆಗೆ ವ್ಯಾಪಕವಾದ ಆವಿಷ್ಕಾರದ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಆಧುನಿಕ ತಂತ್ರಜ್ಞಾನ ಮತ್ತು ನವೀಕೃತ ಆತ್ಮವಿಶ್ವಾಸದಿಂದ ಸಬಲೀಕರಣಗೊಂಡ ಈ ವೈಜ್ಞಾನಿಕ ಪರಂಪರೆಯನ್ನು ರಾಷ್ಟ್ರವು ಈಗ ಮುಂದಕ್ಕೆ ಕೊಂಡೊಯ್ಯುತ್ತಿದೆ. ಕಳೆದ ವರ್ಷದಲ್ಲಿ ಸಾಧಿಸಿದ ಹಲವಾರು ಸಾಧನೆಗಳು ಈ ಪ್ರಗತಿಗೆ ಸಾಕ್ಷಿಯಾಗಿ ಕಾರ್ಯ ನಿರ್ವಹಿಸುತ್ತಿವೆ.

ಪ್ರಯೋಗಾಲಯ ತಂತ್ರಜ್ಞಾನಗಳು

ಸರ್ಕಾರವು ಪ್ರಯೋಗಾಲಯ ತಂತ್ರಜ್ಞಾನಗಳಲ್ಲಿ 12,000 ಕೋಟಿ ರೂ. ಹೂಡಿಕೆ ಮಾಡಿದೆ. ಇದರ ಜತೆಗೆ, ಕಳೆದ ಒಂದು ವರ್ಷದಲ್ಲಿ ಖಾಸಗಿ ಹೂಡಿಕೆದಾರರು ಹೆಚ್ಚುವರಿಯಾಗಿ 12,000 ಕೋಟಿ ರೂ.ಗಳನ್ನು ನೀಡಿದ್ದಾರೆ. ಹೀಗೆ, ಕೇವಲ ಒಂದೇ ವರ್ಷದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಒಟ್ಟು 24,000 ಕೋಟಿ ರೂ. ವೆಚ್ಚ ಮಾಡಲಾಗಿದೆ.

ಕಳೆದ ಒಂದು ವರ್ಷದ ಸಾಧನೆಗಳು...

- ವಾರ್ಷಿಕ ಪೇಟೆಂಟ್‌ಗಳ ಸಂಖ್ಯೆ **1.50** ಲಕ್ಷದ ಗಡಿ ದಾಟಿದೆ - ಇದು ಒಂದು ದಶಕದ ಹಿಂದೆ 50,000ಕ್ಕಿಂತ ಕಡಿಮೆ ಇದ್ದ ಸಂಖ್ಯೆಗೆ ಹೋಲಿಸಿದರೆ ಗಮನಾರ್ಹ ಪ್ರಮಾಣದಲ್ಲಿ ಏರಿಕೆಯಾಗಿದೆ.
- ಸ್ಥಳೀಯ **500** ಮೆಗಾವ್ಯಾಟ್ ಮೂಲಮಾದರಿಯ ವೇಗದ ಬ್ರೀಡರ್ ರಿಯಾಕ್ಟರ್ 'ಮೊದಲ ನಿರ್ಣಾಯಕತೆ'ಯನ್ನು (ನಿರಂತರ ಪರಮಾಣು ಸರಪಳಿ ಕ್ರಿಯೆ ಆರಂಭವಾಗುವ ಹಂತ) ಯಶಸ್ವಿಯಾಗಿ ಸಾಧಿಸಿದೆ.
- ಭಾರತೀಯ ಬಾಹ್ಯಾಕಾಶ ನವೋದ್ಯಮವೊಂದು 'ಮೇಡ್ ಇನ್ ಇಂಡಿಯಾ' ರಾಕೆಟ್ ಬಳಸಿ ತನ್ನ ಮೊದಲ ಪ್ರಯತ್ನದಲ್ಲೇ ಉಪಗ್ರಹವನ್ನು ಕಕ್ಷೆಗೆ ಯಶಸ್ವಿಯಾಗಿ ಸೇರಿಸಿತು. ರಾಷ್ಟ್ರವು 'ಉಪಗ್ರಹ ಡಾಕಿಂಗ್'(ಬಾಹ್ಯಾಕಾಶದಲ್ಲಿ 2 ಉಪಗ್ರಹಗಳನ್ನು ಸಂಪರ್ಕಿಸುವ ಪ್ರಕ್ರಿಯೆ) ಸಾಮರ್ಥ್ಯವನ್ನು ಸಹ ಪಡೆದುಕೊಂಡಿದೆ.
- ದೇಶವು 'ಎಐ ಇಂಪ್ಯಾಕ್ಟ್ ಶೃಂಗಸಭೆ' ಆಯೋಜಿಸಿ, ತನ್ನದೇ ಆದ ಎಐ ಮಾದರಿಯನ್ನು ಆರಂಭಿಸಿತು. ಇದಲ್ಲದೆ, ಭಾರತವು ದೇಶೀಯವಾಗಿ ತಯಾರಿಸಿದ ಸೆಮಿಕಂಡಕ್ಟರ್ ಚಿಪ್‌ಗಳನ್ನು ಜಾಗತಿಕವಾಗಿ ರಫ್ತು ಮಾಡಲು ಆರಂಭಿಸಿದೆ.



ಭವಿಷ್ಯ ರೂಪಿಸುವ ವಲಯಗಳು

- ಸೆಮಿಕಂಡಕ್ಟರ್‌ಗಳು, ಕ್ವಾಂಟಮ್ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಅಡ್ವಾನ್ಸ್ಡ್ ಮೆಟೀರಿಯಲ್ಸ್, ರೊಬೊಟಿಕ್ಸ್, ಬಾಹ್ಯಾಕಾಶ, ಸ್ವಚ್ಛ ಇಂಧನ, ಎಐ, ಸಂಶ್ಲೇಷಿತ ಜೀವಶಾಸ್ತ್ರ ಮತ್ತು ಸ್ವಾಯತ್ತ ವ್ಯವಸ್ಥೆಗಳು.

ಸಮ್ಮೇಳನದಲ್ಲಿ ಉಪಸ್ಥಿತರಿದ್ದ ಪ್ರತಿಯೊಬ್ಬ ಸಂಶೋಧಕರು, ಉದ್ಯಮ ನಾಯಕರು, ನವೋದ್ಯಮ ಸಂಸ್ಥಾಪಕರು ಮತ್ತು ವಿದ್ಯಾರ್ಥಿಗಳು 3 ವರ್ಷಗಳಿಗಾಗಿ ಒಂದು ನಿರ್ದಿಷ್ಟ ಗುರಿ ನಿಗದಿಪಡಿಸಿಕೊಳ್ಳಬೇಕೆಂದು ಪ್ರಧಾನ ಮಂತ್ರಿ ಮೋದಿ ಕರೆ ನೀಡಿದರು.




ಎಐ(ಕೃತಕ ಬುದ್ಧಿಮತ್ತೆ) ತಂತ್ರಜ್ಞಾನ ನಮಗೆ ತ್ವರಿತವಾಗಿ ಉತ್ತರಗಳನ್ನು ನೀಡಬಲ್ಲದು. ಆದರೆ, ಆ ಉತ್ತರಗಳ ನಿಖರತೆಯನ್ನು ಪರಿಶೀಲಿಸುವ ಜವಾಬ್ದಾರಿ ವಿಜ್ಞಾನಿಯದ್ದೇ ಆಗಿರಬೇಕು.

ನರೇಂದ್ರ ಮೋದಿ, ಪ್ರಧಾನಮಂತ್ರಿ

ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ವಿಜ್ಞಾನದ ನಿಜವಾದ ಯಶಸ್ಸು ಪ್ರಯೋಗಾಲಯವನ್ನು ಮೀರಿ ಜನಸಾಮಾನ್ಯರ ಜೀವನ ಸುಧಾರಿಸುವುದು, ಪ್ರಮುಖ ಸವಾಲುಗಳನ್ನು ಪರಿಹರಿಸುವುದು, ಆರೋಗ್ಯ ರಕ್ಷಣೆ, ಕೃಷಿ, ಶಿಕ್ಷಣ, ಉದ್ಯೋಗ ಮತ್ತು ವಿಪತ್ತು ನಿರ್ವಹಣೆಯಂತಹ ಕ್ಷೇತ್ರಗಳಲ್ಲಿ ಸಾಮರ್ಥ್ಯಗಳನ್ನು ಬಲಪಡಿಸುವುದರಲ್ಲಿ ಅಡಗಿದೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು. ಭಾರತೀಯ ನವೋದ್ಯಮಗಳು ಈ ಕ್ಷೇತ್ರಗಳಿಗೆ ಆದ್ಯತೆ ನೀಡುತ್ತಿವೆ. ಮೆದುಳಿನ ಚಟುವಟಿಕೆ ಮೇಲ್ವಿಚಾರಣೆ ಮಾಡಲು ಧರಿಸಬಹುದಾದ ಇಇಜಿ ತಂತ್ರಜ್ಞಾನ, ಸ್ಥಳೀಯ ವೈರ್‌ಲೆಸ್ ಮತ್ತು ಉಪಗ್ರಹ ಸಂವಹನ ವ್ಯವಸ್ಥೆಗಳು, ವಿಶೇಷ ಪೌಷ್ಟಿಕಾಂಶ ಉತ್ಪನ್ನಗಳು, ಸುಧಾರಿತ ಸೆಮಿಕಂಡಕ್ಟರ್ ತಂತ್ರಜ್ಞಾನಗಳು ಮತ್ತು ಕಚ್ಚಾ ಉಕ್ಕಿನಂತಹ ಕೈಗಾರಿಕಾ ತ್ಯಾಜ್ಯವನ್ನು ಮರುಬಳಕೆ ಮಾಡುವ ಪರಿಹಾರಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನವೋದ್ಯಮಗಳು ಮತ್ತು ದೇಶೀಯ ಕಂಪನಿಗಳ ಉದಾಹರಣೆಗಳನ್ನು ಅವರು ಉಲ್ಲೇಖಿಸಿದರು. ●



ಯಮುನಾ ನದಿ ಪುನರುಜ್ಜೀವನ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನಾ ಸಮಾರಂಭ

2029ರ ವೇಳೆಗೆ ಯಮುನಾ ನದಿ ಆಗಲಿದೆ ಸ್ವಚ್ಛ

ದೆಹಲಿ, ಹರಿಯಾಣ ಮತ್ತು ಉತ್ತರ ಪ್ರದೇಶ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ 2029ರ ವೇಳೆಗೆ ಯಮುನಾ ನದಿ ಸ್ವಚ್ಛಗೊಳಿಸಲು ಕೇಂದ್ರ ಸರ್ಕಾರವು ಕಾರ್ಯಯೋಜನೆಯೊಂದನ್ನು ರೂಪಿಸಿದೆ. ಈ ಉಪಕ್ರಮದ ಭಾಗವಾಗಿ, ಅಕ್ಟೋಬರ್ 22ರಂದು ದೆಹಲಿಯಲ್ಲಿ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಅಮಿತ್ ಶಾ ಅವರು 8,941 ಕೋಟಿ ರೂಪಾಯಿ ಮೌಲ್ಯದ ಯಮುನಾ ನದಿ ಪುನರುಜ್ಜೀವನ ಯೋಜನೆಗಳಿಗೆ ಚಾಲನೆ ನೀಡಿದರು ಮತ್ತು ಶಂಕುಸ್ಥಾಪನೆ ನೆರವೇರಿಸಿದರು.

ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ದೆಹಲಿ, ಹರಿಯಾಣ ಮತ್ತು ಉತ್ತರ ಪ್ರದೇಶ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ 2029ರ ವೇಳೆಗೆ ಯಮುನಾ ನದಿ ಸ್ವಚ್ಛಗೊಳಿಸಲು ಕೇಂದ್ರ ಸರ್ಕಾರವು ಕಾರ್ಯಯೋಜನೆಯೊಂದನ್ನು ರೂಪಿಸಿದೆ. ಈ ಉಪಕ್ರಮದ ಭಾಗವಾಗಿ, ಅಕ್ಟೋಬರ್ 22ರಂದು ದೆಹಲಿಯಲ್ಲಿ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು 8,941 ಕೋಟಿ ರೂಪಾಯಿ ಮೌಲ್ಯದ ಯಮುನಾ ನದಿ ಪುನರುಜ್ಜೀವನ ಯೋಜನೆಗಳಿಗೆ ಚಾಲನೆ ನೀಡಿದರು ಮತ್ತು ಶಂಕುಸ್ಥಾಪನೆ ನೆರವೇರಿಸಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ, ಕೇಂದ್ರ ಸರ್ಕಾರವು ಸುಂದರವಾದ ಮನೆಗಳು, ಶುದ್ಧ ನೀರು, ಸ್ವಚ್ಛ ಬೀದಿಗಳು ಮತ್ತು ಕಸದ ರಾಶಿಗಳಿಲ್ಲದ ದೆಹಲಿ ನಗರಿ ರೂಪಿಸುವ ಕನಸು ಕಾಣುತ್ತಿದೆ. ಒಮ್ಮೆ ಸ್ವಚ್ಛಗೊಂಡ ನಂತರ, ಯಮುನಾ ನದಿಯು ದೆಹಲಿಯಿಂದ ಸಂಗಮದವರೆಗಿನ ಜನರಿಗೆ ತನ್ನ ಆಶೀರ್ವಾದ ನೀಡಬಲ್ಲದು. ಇದೇ ಕಾರಣಕ್ಕಾಗಿ, ಈ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನಾ ಸಮಾರಂಭದಲ್ಲಿ ಮಾತನಾಡಿದ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೃಢ ಸಂಕಲ್ಪದೊಂದಿಗೆ ಈ ಅಭಿಯಾನ ಕೈಗೆತ್ತಿಕೊಂಡಿದ್ದಾರೆ. ಇಂದು, ಆ ಸಂಕಲ್ಪದ ಒಂದು ಪ್ರಮುಖ ಭಾಗವು ಸಾಕಾರಗೊಳ್ಳುತ್ತಿದೆ.

ಇಂದು 10 ಯೋಜನೆಗಳನ್ನು ಉದ್ಘಾಟಿಸಲಾಗಿದ್ದು, ಇತರೆ 33 ಯೋಜನೆಗಳ ಕೆಲಸ ಆರಂಭವಾಗಿದೆ ಎಂದು ಕೇಂದ್ರ ಗೃಹ ಸಚಿವರು ತಿಳಿಸಿದರು. ಒಟ್ಟು 8,941 ಕೋಟಿ ರೂ. ವೆಚ್ಚದ ಈ ಯೋಜನೆಗಳು ಲಕ್ಷಾಂತರ ಲೀಟರ್ ನೀರನ್ನು ಶುದ್ಧೀಕರಿಸಿ ಯಮುನಾ ನದಿಗೆ ಹರಿಯುವಂತೆ ಮಾಡಲಿವೆ. ಇಂದು ಉದ್ಘಾಟನೆಗೊಂಡ ಉಪಕ್ರಮಗಳು



ದೆಹಲಿಯ ಪರಿವರ್ತನೆ

- ಯಮುನಾ ನದಿಯನ್ನು ಮಾಲಿನ್ಯಮುಕ್ತಗೊಳಿಸಲು ಪ್ರಧಾನ ಮಂತ್ರಿ ಮೋದಿ ಅವರು ದೆಹಲಿ ಸರ್ಕಾರಕ್ಕೆ ಒಂದು ಕಾರ್ಯಯೋಜನೆ ನೀಡಿದ್ದು, ಈ ಯೋಜನೆಯ ಶೇಕಡ 40ರಷ್ಟು ಕಾಮಗಾರಿ ಈಗಾಗಲೇ ಪೂರ್ಣಗೊಂಡಿದೆ.
- ಸುಮಾರು 30 ವರ್ಷಗಳ ಕಾಲ ದೆಹಲಿಯ ಒಳಚರಂಡಿ ತ್ಯಾಜ್ಯವನ್ನು ಯಮುನಾ ನದಿಗೆ ಹರಿಯಲು ಬಿಡಲಾಗುತ್ತಿತ್ತು, ಪ್ರತಿದಿನ 2,000 ಟನ್‌ಗಳಷ್ಟು ಪ್ರಮಾಣದ ಹಸಿವಿನ ಸಗಣಿಯನ್ನು ನದಿಗೆ ಸುರಿಯಲಾಗುತ್ತಿತ್ತು.
- 'ಕಸದ ರಾಶಿಗಳು'(ತ್ಯಾಜ್ಯ ಸಂಗ್ರಹಣಾ ತಾಣಗಳು) ದೀರ್ಘಕಾಲದವರೆಗೆ ರಾಜಕೀಯ ಚದುರಂಗದಾಟದ ವಿಷಯವಾಗಿದ್ದವು. ಪ್ರಸ್ತುತ ದೆಹಲಿ ಸರ್ಕಾರವು ಈ ಕಸದ ರಾಶಿಗಳ ಎತ್ತರ ಕಡಿಮೆ ಮಾಡಲು ಸದೃಢವಾದ ಕ್ರಮಗಳನ್ನು ಕೈಗೊಂಡಿದೆ; ಮುಂದಿನ 2 ವರ್ಷಗಳಲ್ಲಿ ಈ ಸ್ಥಳಗಳು ಉದ್ಯಾನವನಗಳಾಗಿ ಪರಿವರ್ತನೆಗೊಳ್ಳಲಿವೆ.
- ಕೇಂದ್ರ ಸರ್ಕಾರದ ನೆರವಿನೊಂದಿಗೆ, ದೆಹಲಿ ಸರ್ಕಾರವು 21.7 ದಶಲಕ್ಷ ಮೆಟ್ರಿಕ್ ಟನ್‌ಗಳಷ್ಟು ತ್ಯಾಜ್ಯ ತೆರವುಗೊಳಿಸಿದ್ದು, 100 ಎಕರೆ ಭೂಮಿಯನ್ನು ಮರುಪಡೆಯಲಾಗಿದೆ.
- ಓಖ್ಲಾ ಮತ್ತು ಭಾಲ್ಸ್ವಾದಲ್ಲಿರುವ ಕಸದ ರಾಶಿಗಳ ಎತ್ತರವನ್ನು 30ರಿಂದ 40 ಮೀಟರ್‌ಗಳಷ್ಟು ಕಡಿಮೆ ಮಾಡಲಾಗಿದೆ, ಹಾಗೆಯೇ ಘಾಜಿಪುರ ತ್ಯಾಜ್ಯ ಸಂಗ್ರಹಣಾ ತಾಣದ ಎತ್ತರವನ್ನು 10 ರಿಂದ 15 ಮೀಟರ್‌ಗಳಷ್ಟು ತಗ್ಗಿಸಲಾಗಿದೆ.

“ದೆಹಲಿಯ ಪ್ರತಿಯೊಂದು ಮನೆಗೂ ಒಳಚರಂಡಿ ಸಂಪರ್ಕ ಕಲ್ಪಿಸಲು ನಾವು 3 ವರ್ಷಗಳ ಕ್ರಿಯಾ ಯೋಜನೆ ರೂಪಿಸಿದ್ದೇವೆ. ಇದು ತ್ಯಾಜ್ಯ ನೀರನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವುದನ್ನು ಖಚಿತಪಡಿಸುತ್ತದೆ. ಇದರ ಜತೆಗೆ, ಪ್ರತಿಯೊಂದು ಮನೆಗೂ ಶುದ್ಧ ಕುಡಿಯುವ ನೀರು ಒದಗಿಸಲು ನಾವು ಕೆಲಸ ಮಾಡುತ್ತಿದ್ದೇವೆ.

- ಅಮಿತ್ ಶಾ, ಕೇಂದ್ರ ಗೃಹ ಮತ್ತು ಸಹಕಾರ ಸಚಿವರು



ದೆಹಲಿಯ ವಿವಿಧ ಪ್ರದೇಶಗಳನ್ನು ಒಳಗೊಂಡಿದ್ದು, ಅಸ್ತಿತ್ವದಲ್ಲಿರುವ ಒಳಚರಂಡಿ ಸಂಸ್ಕರಣಾ ಘಟಕ(ಎಸ್‌ಟಿಪಿ)ಗಳನ್ನು ಮೇಲ್ದರ್ಜೆಗೇರಿಸಲು, ಹೊಸ ಘಟಕಗಳನ್ನು ನಿರ್ಮಿಸಲು ಶಂಕುಸ್ಥಾಪನೆ ನೆರವೇರಿಸಲಾಯಿತು. ಇದಲ್ಲದೆ, ವಿಕೇಂದ್ರೀಕೃತ ಎಸ್‌ಟಿಪಿ ಪಂಪಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದ್ದು, ಮನೆಗಳ ಒಳಚರಂಡಿ ಮಾರ್ಗಗಳನ್ನು ಈ ಜಾಲಕ್ಕೆ ಸಂಪರ್ಕಿಸುವ ಪ್ರಕ್ರಿಯೆಯೂ ಆರಂಭಗೊಂಡಿದೆ. 2029 ಮೇ ತಿಂಗಳಿಗೂ ಮೊದಲೇ ಯಮುನಾ ನದಿ ಸ್ವಚ್ಛಗೊಳಿಸಲಾಗುವುದು ಎಂದು ಗೃಹ ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

ಯಮುನಾ ನದಿಯನ್ನು ಮಾಲಿನ್ಯಮುಕ್ತಗೊಳಿಸುವ ಸಂಕಲ್ಪಕ್ಕೆ ಹೊಸ ಚೈತನ್ಯ


ದೆಹಲಿ ಸರ್ಕಾರದ ಯೋಜನೆಗಳಾದ ನೀರು ಸಂಸ್ಕರಣಾ ಘಟಕಗಳು, ಮರುಬಳಕೆ ಘಟಕಗಳು, ಒಳಚರಂಡಿ ಸಂಸ್ಕರಣಾ ಘಟಕಗಳು, ಒಳಚರಂಡಿ ಪಂಪಿಂಗ್ ಕೇಂದ್ರಗಳು ಮತ್ತು ಮನೆಗಳ ಒಳಚರಂಡಿ ಸಂಪರ್ಕಗಳು ಮತ್ತಿತರ ಯೋಜನೆಗಳ ಮೂಲಕ, ಪ್ರತಿದಿನ ಲಕ್ಷಾಂತರ ಲೀಟರ್ ತ್ಯಾಜ್ಯ ನೀರನ್ನು ಯಮುನಾ ನದಿ ಸೇರುವ ಮುನ್ನವೇ ಸಂಸ್ಕರಿಸಲಾಗುತ್ತದೆ. ಇದು ಯಮುನಾ ನದಿಯನ್ನು ಮಾಲಿನ್ಯಮುಕ್ತಗೊಳಿಸುವ ಸಂಕಲ್ಪಕ್ಕೆ ಹೊಸ ಚೈತನ್ಯ ನೀಡಲಿದೆ. ●



ಅಂತಾರಾಷ್ಟ್ರೀಯ ಸೌರ ಮೈತ್ರಿಕೂಟದ 11 ವರ್ಷಗಳು

ಸೌರಶಕ್ತಿಯ ಜಾಗತಿಕ ವಿಸ್ತರಣೆಯ ಮೇಲ್ವಿಚಾರಣೆ

ಸೌರಶಕ್ತಿ ನಮ್ಮ ಕಾಲದ ಅತ್ಯಮೂಲ್ಯ ಸಾರ್ವಜನಿಕ ಸಂಪತ್ತುಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಸೌರಶಕ್ತಿಯಿಂದ ಪ್ರೇರಿತವಾದ ಈ ಪರಿವರ್ತನೆಯು, ಕೇವಲ ಇಂಧನ ಲಭ್ಯತೆಗಿಂತಲೂ ಮಿಗಿಲಾದ ಅರ್ಥ ಹೊಂದಿದೆ. ಸೌರಶಕ್ತಿಯ ಉತ್ತೇಜನಕ್ಕೆ ಎದುರಾಗುವ ಅಡೆತಡೆಗಳನ್ನು ನಿವಾರಿಸುವ ಉದ್ದೇಶದಿಂದ, ಭಾರತ ಮತ್ತು ಫ್ರಾನ್ಸ್ ದೇಶಗಳು ಜಂಟಿಯಾಗಿ 2025 ನವೆಂಬರ್ 30ರಂದು 'ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟ(ಐಎಸ್ಎ)' ಆರಂಭಿಸಿದವು. ಇದು ಮುಂದಿನ ಪೀಳಿಗೆಗಾಗಿ ಸ್ವಚ್ಛ, ಹಸಿರು ಮತ್ತು ಹೆಚ್ಚು ಸುಸ್ಥಿರ ಭವಿಷ್ಯ ರೂಪಿಸಲು ಅಪಾರ ಕೊಡುಗೆ ನೀಡುತ್ತಿದೆ.



“ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟವು ಕೇವಲ ಭಾರತದಲ್ಲಿ ಮಾತ್ರವಲ್ಲದೆ, ಇಡೀ ಜಗತ್ತಿನಾದ್ಯಂತ ಸ್ವಚ್ಛ ಇಂಧನ ಕ್ರಾಂತಿಯನ್ನು ಮುನ್ನಡೆಸುತ್ತಿದೆ. ಭವಿಷ್ಯದಲ್ಲಿ ಮನುಕುಲದ ಒಳಿತಿಗಾಗಿ 21ನೇ ಶತಮಾನದಲ್ಲಿ ಸ್ಥಾಪಿಸಲಾದ ಸಂಸ್ಥೆಗಳ ಬಗ್ಗೆ ಜನರು ಮಾತನಾಡಿದಾಗ, ಆ ಪಟ್ಟಿಯಲ್ಲಿ 'ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟ' ಅಗ್ರಸ್ಥಾನದಲ್ಲಿರುತ್ತದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನ(ಸಿಒಪಿ-21)ದಲ್ಲಿ ಭಾರತ ಮತ್ತು ಫ್ರಾನ್ಸ್ ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟ ಆರಂಭಿಸಿದವು, ಜಾಗತಿಕ ಅಭಿವೃದ್ಧಿಯ ಹೃದಯ ಭಾಗದಲ್ಲಿ ಸೂರ್ಯನ ಶಕ್ತಿಯನ್ನು ಇರಿಸುವ ಉದಾತ್ತ ದೃಷ್ಟಿಕೋನದೊಂದಿಗೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವವು ಈ ಪರಿಕಲ್ಪನೆಯನ್ನು ಜಾಗತಿಕ ಆಂದೋಲನವಾಗಿ ಪರಿವರ್ತಿಸಲು ಸಹಾಯ ಮಾಡಿತು. ಕಳೆದ 11 ವರ್ಷಗಳಲ್ಲಿ ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟವು ಸೌರಶಕ್ತಿಯ ಸಾಮರ್ಥ್ಯವನ್ನು ವಿಶ್ವಾದ್ಯಂತ ಸ್ಪಷ್ಟವಾದ, ಜೀವನವನ್ನು ಬದಲಾಯಿಸುವ ಪರಿಣಾಮಗಳಾಗಿ ಪರಿವರ್ತಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸೌರಶಕ್ತಿಯ ಅಳವಡಿಕೆಯನ್ನು ಹೆಚ್ಚು ಅಗತ್ಯವಿರುವಲ್ಲಿ ಉತ್ತೇಜಿಸುವ ಮೂಲಕ, ಉದಯೋನ್ಮುಖ ಮತ್ತು ಅಭಿವೃದ್ಧಿಶೀಲ ಆರ್ಥಿಕತೆಗಳ ಕಡೆಗೆ ಜಾಗತಿಕ ಇಂಧನ ಪರಿವರ್ತನೆಯನ್ನು ಮುನ್ನಡೆಸುವಲ್ಲಿ ಮೈತ್ರಿಕೂಟವು ಪ್ರಮುಖ ಪಾತ್ರ ವಹಿಸಿದೆ.

ಸೌರಶಕ್ತಿ ಉತ್ತೇಜಿಸುವ, ಸೌರಶಕ್ತಿಯ ಬೇಡಿಕೆ ಪೂರೈಸಲು ಸೌರ ಸಂಪನ್ಮೂಲ ಸಮೃದ್ಧ ರಾಷ್ಟ್ರಗಳ ನಡುವೆ ಉತ್ತಮ ಸಮನ್ವಯ ಬೆಳೆಸುವ ಹಾಗೂ ಸೌರಶಕ್ತಿ ಹೆಚ್ಚು ಕೈಗೆಟುಕುವ, ವಿಶ್ವಾಸಾರ್ಹ ಮತ್ತು ಎಲ್ಲರಿಗೂ ಸುಲಭವಾಗಿ ಲಭ್ಯವಾಗುವಂತೆ ಮಾಡುವ ಗುರಿಗಳೊಂದಿಗೆ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇಂದು 130 ಸದಸ್ಯ ಮತ್ತು ಸಹಿ ಹಾಕಿದ ರಾಷ್ಟ್ರಗಳನ್ನು ಒಳಗೊಂಡಿರುವ 'ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟ'ವು ಸೌರಶಕ್ತಿಯ ವಿಸ್ತರಣೆಗೆ ಸಮರ್ಪಿತವಾದ ಅತ್ಯಂತ ಪ್ರಮುಖ ಜಾಗತಿಕ ಪಾಲುದಾರಿಕೆಗಳಲ್ಲಿ ಒಂದಾಗಿ ನಿಂತಿದೆ. 'ಒಂದು ಸೂರ್ಯ, ಒಂದು ವಿಶ್ವ, ಒಂದು ಗ್ರಿಡ್' ಉಪಕ್ರಮವನ್ನು ಮತ್ತಷ್ಟು

ಐಎಸ್‌ಎ ನ 4 ಕಾರ್ಯತಂತ್ರ ಆಧಾರಸ್ತಂಭಗಳು

- **ವೇಗವರ್ಧಕ ಹಣಕಾಸು ಕೇಂದ್ರ:** ದೊಡ್ಡ ಪ್ರಮಾಣದಲ್ಲಿ ಹೂಡಿಕೆಯನ್ನು ಸಜ್ಜುಗೊಳಿಸುವುದು ಮತ್ತು ಉತ್ತೇಜಿಸುವುದು.
- **ಜಾಗತಿಕ ಸಾಮರ್ಥ್ಯ ಕೇಂದ್ರ ಮತ್ತು ಡಿಜಿಟಲೀಕರಣ:** ನಾವೀನ್ಯತೆ, ಡಿಜಿಟಲ್ ವೇದಿಕೆಗಳು ಮತ್ತು ಸಾಮರ್ಥ್ಯ ವೃದ್ಧಿಯ ಉತ್ತೇಜನ.
- **ಪ್ರಾದೇಶಿಕ ಮತ್ತು ದೇಶ ಮಟ್ಟದ ತೊಡಗಿಸಿಕೊಳ್ಳುವಿಕೆ:** ಸೂಕ್ತವಾದ, ಸ್ಥಳೀಯ ಪರಿಹಾರಗಳನ್ನು ಕಾರ್ಯಗತಗೊಳಿಸುವುದು.
- **ತಂತ್ರಜ್ಞಾನ ಮಾರ್ಗಸೂಚಿ ಮತ್ತು ನೀತಿ:** ಉದಯೋನ್ಮುಖ ಸೌರಶಕ್ತಿ ತಂತ್ರಜ್ಞಾನಗಳ ಅಭಿವೃದ್ಧಿ ವೇಗಗೊಳಿಸುವುದು.


ಒಪ್ಪಂದ ಆಧಾರಿತ ಅಂತರ್ ಸರ್ಕಾರಿ ವೇದಿಕೆಯಾಗಿ ಐಎಸ್‌ಎ, ತನ್ನ ಸದಸ್ಯ ರಾಷ್ಟ್ರಗಳು ಸೌರಶಕ್ತಿಯನ್ನು ದೊಡ್ಡ ಪ್ರಮಾಣದಲ್ಲಿ ಅಳವಡಿಸಿಕೊಳ್ಳುವಲ್ಲಿ ಸಹಾಯ ಮಾಡಲು ತಾಂತ್ರಿಕ ಮಾರ್ಗದರ್ಶನ, ನೀತಿ ನಾಯಕತ್ವ ಮತ್ತು ಜಾಗತಿಕ ಸಮನ್ವಯವನ್ನು ಒದಗಿಸುತ್ತದೆ.

ಸ್ವಚ್ಛ ಇಂಧನ ಉತ್ಪಾದನೆಯಲ್ಲಿ ಸೌರಶಕ್ತಿಯು ಬೆಳವಣಿಗೆಯ ಪ್ರಮುಖ ಚಾಲನಾಶಕ್ತಿಯಾಗಿ ಹೊರಹೊಮ್ಮಿದೆ. 2014ರಲ್ಲಿ ಕೇವಲ 2.8 ಗಿಗಾವ್ಯಾಟ್ ಇದ್ದ ಸೌರಶಕ್ತಿ ಸಾಮರ್ಥ್ಯವು, ಇಂದು ಸುಮಾರು 165 ಗಿಗಾವ್ಯಾಟ್‌ಗೆ ಏರಿಕೆಯಾಗಿದೆ. ಅದೇ ರೀತಿ, ಪವನ ಶಕ್ತಿ ಸಾಮರ್ಥ್ಯವು 2014ರಲ್ಲಿದ್ದ 21 ಗಿಗಾವ್ಯಾಟ್‌ನಿಂದ 58 ಗಿಗಾವ್ಯಾಟ್‌ಗಿಂತಲೂ ಹೆಚ್ಚಿನ ಮಟ್ಟಕ್ಕೆ ಏರಿಕೆ ಕಂಡಿದೆ.

ಬಲಪಡಿಸುತ್ತಿರುವ ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟಕ್ಕೆ ವಿಶ್ವಸಂಸ್ಥೆಯು ವೀಕ್ಷಕ ಸ್ಥಾನಮಾನ ನೀಡಿದೆ. ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟ(ಐಎಸ್‌ಎ), ವಿಕೇಂದ್ರೀಕೃತ ನವೀಕರಿಸಬಹುದಾದ ಇಂಧನ ವ್ಯವಸ್ಥೆಗಳು, ಸೌರಶಕ್ತಿ ನೀರಾವರಿ ಮತ್ತು ಜಾಗತಿಕ ಸೌರಶಕ್ತಿ ಸೌಲಭ್ಯ ಸೇರಿದಂತೆ ನವೀನ ಹಣಕಾಸು ವೇದಿಕೆಗಳಂತಹ ಉಪಕ್ರಮಗಳ ಮೂಲಕ ಐಎಸ್‌ಎ ಸದಸ್ಯ ರಾಷ್ಟ್ರಗಳಿಗೆ ಸೌರಶಕ್ತಿ ಪರಿಹಾರಗಳನ್ನು ನಿಯೋಜಿಸುವಲ್ಲಿ ಸಹಾಯ ಮಾಡುತ್ತಿದೆ. ಇಂಧನ ಪರಿವರ್ತನೆಯು ಎಲ್ಲರನ್ನೂ ಒಳಗೊಳ್ಳುವ, ಜನ-ಕೇಂದ್ರಿತ ಮತ್ತು ಪರಿವರ್ತನಾತ್ಮಕ ಆಗಿರಬೇಕು ಎಂಬುದಕ್ಕೆ ಎಎಸ್‌ಐ ಕೆಲಸವೇ ಸಾಕ್ಷಿಯಾಗಿದೆ. ಇದಲ್ಲದೆ, ಐಎಸ್‌ಎ ಇತ್ತೀಚೆಗೆ ತನ್ನ ಸದಸ್ಯ ರಾಷ್ಟ್ರಗಳು ಮತ್ತು ಪಾಲುದಾರರ ಹೆಚ್ಚುತ್ತಿರುವ ಅಗತ್ಯಗಳನ್ನು ಪರಿಹರಿಸಲು ವೆಬ್‌ಸೈಟ್ ಒಂದನ್ನು ಆರಂಭಿಸಿದೆ. ಭಾರತದಲ್ಲಿ ಸೌರಶಕ್ತಿಯ

ಸೂರ್ಯ, ನೀರು, ಗಾಳಿ ಮತ್ತು ಪರಮಾಣು ಶಕ್ತಿಯಿಂದ ವಿದ್ಯುತ್ ಉತ್ಪಾದನೆ

ಭಾರತವು ಉರವಲುಯೇತರ ಇಂಧನ ಮೂಲಗಳಿಂದ - ಅಂದರೆ ಸೂರ್ಯ, ನೀರು, ಗಾಳಿ ಮತ್ತು ಪರಮಾಣು ಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ತನ್ನ ಸಾಮರ್ಥ್ಯವನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳುತ್ತಿದೆ. 2026 ಜುಲೈ 31ರ ಹೊತ್ತಿಗೆ, ಈ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು 300 ಗಿಗಾವ್ಯಾಟ್ ಮಿತಿಯನ್ನು ದಾಟಿದೆ. ಭಾರತವು 2030ರ ವೇಳೆಗೆ 500 ಗಿಗಾವ್ಯಾಟ್ ಸಾಮರ್ಥ್ಯವನ್ನು ತಲುಪುವ ಗುರಿ ಹೊಂದಿದ್ದು, ಪ್ರಸ್ತುತ ಸಾಮರ್ಥ್ಯವು ಆ ಗುರಿಯ ಶೇಕಡ 60ಕ್ಕಿಂತ ಹೆಚ್ಚಿನ ಪಾಲನ್ನು ಪ್ರತಿನಿಧಿಸುತ್ತದೆ. ಇದಲ್ಲದೆ, ದೇಶದ ಒಟ್ಟು 552 ಗಿಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಿ, ಉರವಲುಯೇತರ ಇಂಧನ ಮೂಲಗಳಿಂದ ಬರುವ ವಿದ್ಯುತ್‌ನ ಪಾಲು ಶೇಕಡ 54ಕ್ಕಿಂತ ಹೆಚ್ಚಾಗಿದೆ.



ಅಭಿವೃದ್ಧಿಯು ಹೊಸ ಯುಗವೊಂದಕ್ಕೆ ಪ್ರವೇಶಿಸುತ್ತಿದೆ. ಸೌರಶಕ್ತಿ ಮಾರುಕಟ್ಟೆಯಲ್ಲಿ ಭಾರತ ಸಾಧಿಸಿರುವ ಪ್ರಗತಿಯು, ಇಲ್ಲಿನ ಸ್ಥಿರವಾದ ನೀತಿ ಬೆಂಬಲ, ವಿಸ್ತರಿಸುತ್ತಿರುವ ಉತ್ಪಾದನಾ ವಲಯ, ಬಲಿಷ್ಠವಾದ ಮೂಲಸೌಕರ್ಯ ಮತ್ತು ಹೆಚ್ಚುತ್ತಿರುವ ಸಾರ್ವಜನಿಕ ಸಹಭಾಗಿತ್ವವನ್ನು ಪ್ರತಿಬಿಂಬಿಸುತ್ತಿದೆ. ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟ(ಐಎಸ್‌ಎ)ದ ಉಪಕ್ರಮದ ಬೆಂಬಲದೊಂದಿಗೆ, ಭಾರತವು ತನ್ನ 'ಪಂಚಾಮೃತ' ಬದ್ಧತೆಗಳು ಮತ್ತು 2070ರ ವೇಳೆಗೆ ಇಂಗಾಲ ಹೊರಸೂಸುವಿಕೆಯನ್ನು 'ನಿವ್ವಳ-ಶೂನ್ಯ'ಕ್ಕೆ ತರುವ ಗುರಿಯತ್ತ ಸಾಗುತ್ತಿರುವಾಗ, ಸೌರಶಕ್ತಿಯು ಅದರಲ್ಲಿ ಪ್ರಮುಖ ಆಧಾರಸ್ತಂಭವಾಗಿ ಉಳಿದಿದೆ. ಅಲ್ಲದೆ, 2030ರ ವೇಳೆಗೆ ಉರವಲುಯೇತರ ಇಂಧನ ಮೂಲಗಳಿಂದ 500 ಗಿಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ತಲುಪುವ ಭಾರತದ ಗುರಿ ಸಾಧಿಸುವಲ್ಲಿಯೂ ಸೌರಶಕ್ತಿಯು ಮಹತ್ವದ ಪಾತ್ರ ವಹಿಸಲಿದೆ. ●

ಕಾಶಿಯ ನಮೋ ಘಾಟ್‌ನಲ್ಲಿ ವಾಯುಪಡೆಯ ಶೌರ್ಯ ಪ್ರದರ್ಶನ

ಅಕ್ಟೋಬರ್ 25ರಂದು ಕಾಶಿಯ ನಮೋ ಘಾಟ್‌ನಲ್ಲಿ ನಡೆದ ಭಾರತೀಯ ವಾಯುಪಡೆಯ 'ವಿಂಗ್ಸ್ ಓವರ್ ಗಂಗಾ' ವಾಯು ಪ್ರದರ್ಶನದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾಗವಹಿಸಿದ್ದರು. ಅವರು ಹೊಸ ಜವಳಿ ಉತ್ಪಾದನಾ ಘಟಕವೊಂದನ್ನು ಉದ್ಘಾಟಿಸಿದರು. ಇದು ಅನೇಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ. ಇದಲ್ಲದೆ, ವಾರಾಣಸಿಯಲ್ಲಿ ಪ್ರಧಾನ ಮಂತ್ರಿ ಮೋದಿ ಅವರು ರೋಡ್‌ಶೋ ನಡೆಸಿದರು, ಅಲ್ಲಿ ಸಾವಿರಾರು ಜನರು ಭವ್ಯ ಸ್ವಾಗತ ಕೋರಿದರು.

ಮಹಿಳೆಯರಿಗೆ ಉದ್ಯೋಗಾವಕಾಶಗಳು

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ವಾರಾಣಸಿಯಲ್ಲಿ ಹೊಸ ಜವಳಿ ಉತ್ಪಾದನಾ ಘಟಕ ಉದ್ಘಾಟಿಸಿದರು. ಈ ಘಟಕವು ಭಾರತದ ಜವಳಿ ಮತ್ತು ಉಡುಪು ಉತ್ಪಾದನಾ ಪರಿಸರ ವ್ಯವಸ್ಥೆ ಬಲಪಡಿಸುವ ಹಾಗೂ ಈ ಪ್ರದೇಶದಲ್ಲಿ ಕೈಗಾರಿಕಾ ಬೆಳವಣಿಗೆ ಉತ್ತೇಜಿಸುವ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಆಧುನಿಕ ಉತ್ಪಾದನಾ ಪದ್ಧತಿಗಳ ಮೇಲೆ ಗಮನ ಕೇಂದ್ರೀಕರಿಸುವ ಮೂಲಕ, ಈ ಘಟಕವು ವಿಶೇಷವಾಗಿ ಮಹಿಳೆಯರಿಗೆ ಅರ್ಥಪೂರ್ಣ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ, ಜತೆಗೆ ಈ ಪ್ರದೇಶದ ಆರ್ಥಿಕ ಪ್ರಗತಿಗೆ ಕೊಡುಗೆ ನೀಡುತ್ತದೆ. ಕೈಗಾರಿಕಾ ಹೂಡಿಕೆ ಮತ್ತು ಉತ್ಪಾದನಾ ಆಧಾರಿತ ಅಭಿವೃದ್ಧಿಗೆ ಉತ್ತರ ಪ್ರದೇಶ ಗಮ್ಯ ತಾಣವಾಗಿ ಹೊರಹೊಮ್ಮುತ್ತಿರುವುದನ್ನು ಈ ಉದ್ಘಾಟನೆಯು ಎತ್ತಿ ತೋರಿಸಿದೆ. ಇಲ್ಲಿ ಉತ್ಪಾದನೆಯಾಗುವ ಜವಳಿ ಉತ್ಪನ್ನಗಳು ಜಾಗತಿಕ ಮಾರುಕಟ್ಟೆಗಳನ್ನು ತಲುಪಲಿವೆ. ಮುಖ್ಯವಾಗಿ ಮಹಿಳೆಯರ ನೇತೃತ್ವದಲ್ಲಿ ನಡೆಯುತ್ತಿರುವ ಈ ಉಪಕ್ರಮವು 'ಮಹಿಳಾ ನೇತೃತ್ವದ ಅಭಿವೃದ್ಧಿ'ಯ ಪ್ರಬಲ ಸಂಕೇತವಾಗಿದೆ. ವಾರಾಣಸಿಯ ಕೈಗಾರಿಕಾ ಬೆಳವಣಿಗೆಯನ್ನು ಹೆಚ್ಚಿಸುವ ಜತೆಗೆ, ಈ ಉಪಕ್ರಮವು ಮಹಿಳೆಯರಿಗೆ ಸ್ವಾವಲಂಬಿಗಳಾಗಲು ಮತ್ತು ಮತ್ತಷ್ಟು ಪ್ರಗತಿ ಸಾಧಿಸಲು ಹೊಸ ಅವಕಾಶಗಳನ್ನು ಒದಗಿಸುತ್ತದೆ.

ರಫೇಲ್ ಮತ್ತು ಮಿರಾಜ್ ವಿಮಾನಗಳ ಶಕ್ತಿ ಸಾಮರ್ಥ್ಯ ಹಾಗೂ ನಿಖರತೆಯ ಪ್ರದರ್ಶನ

ಭಾರತೀಯ ವಾಯುಪಡೆಯ ದಿನದಂದು ವಾರಾಣಸಿಯ ನಮೋ ಘಾಟ್‌ನಲ್ಲಿ ಪ್ರಧಾನ ಮಂತ್ರಿ ಮೋದಿ ಅವರು ವೈಮಾನಿಕ ಪ್ರದರ್ಶನ ವೀಕ್ಷಿಸಿದರು. ಭಾರತೀಯ ವಾಯುಪಡೆಯ 94ನೇ ವಾರ್ಷಿಕೋತ್ಸವ ಅಂಗವಾಗಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮಕ್ಕೆ 'ವಿಂಗ್ಸ್ ಓವರ್ ದಿ ಗಂಗಾಸ್' ಎಂದು ಹೆಸರಿಸಲಾಗಿತ್ತು. ಈ ವೈಮಾನಿಕ ಪ್ರದರ್ಶನದಲ್ಲಿ ತೇಜಸ್, ಲಘು ಯುದ್ಧ ಹೆಲಿಕಾಪ್ಟರ್(ಎಲ್‌ಸಿಎಚ್) 'ಪ್ರಚಂಡ', ಸು-30ಎಂಕೆಐ ಮತ್ತು ರಫೇಲ್ ವಿಮಾನಗಳೊಂದಿಗೆ, ವಿವಿಧ ಸಾರಿಗೆ ವಿಮಾನಗಳು ಪಾಲ್ಗೊಂಡಿದ್ದವು. ಭಾರತೀಯ ವಾಯುಪಡೆಯ ಪ್ರಮುಖ ಪ್ರದರ್ಶನ ತಂಡಗಳಾದ 'ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡ' ಮತ್ತು 'ಸಾರಂಗ್ ಹೆಲಿಕಾಪ್ಟರ್ ಪ್ರದರ್ಶನ ತಂಡ' ಕೂಡ ಇದರಲ್ಲಿ ಭಾಗವಹಿಸಿದ್ದವು. ಈ ಪ್ರದರ್ಶನವು ವಿಮಾನಗಳ ನಿಖರ ಹಾರಾಟ, ಸಮನ್ವಯ ಮತ್ತು ಕಾರ್ಯಾಚರಣೆಯ ಶ್ರೇಷ್ಠತೆಯನ್ನು ಎತ್ತಿ ತೋರಿಸಿದವು. ಈ ಪ್ರದರ್ಶನದ ವೇಳೆ ಸು-30 ಸಮರ ವಿಮಾನವೊಂದು 2 ಜಾಗ್ವಾರ್ ವಿಮಾನಗಳನ್ನು ತಡೆಹಿಡಿಯುವ ಮೂಲಕ, ಭಾರತೀಯ ವಾಯುಪಡೆಯ ಯುದ್ಧ ಕಾರ್ಯತಂತ್ರ ಮತ್ತು ವೈಮಾನಿಕ ರಕ್ಷಣಾ ಸಾಮರ್ಥ್ಯಗಳ ಝಲಕ್ ನೀಡಿತು. ಇದೇ ವೇಳೆ, 'ನೀಲಕಂಠ ರಚನೆ'ಯಲ್ಲಿ ಹಾರುತ್ತಿದ್ದ 3 ರಫೇಲ್ ಯುದ್ಧ ವಿಮಾನಗಳು, ಅತ್ಯಾಕರ್ಷಕವಾದ 'ತ್ರೀ-ವೇ ಸ್ಪ್ಲಿಟ್'(3 ದಿಕ್ಕುಗಳಿಗೆ ಬೇರ್ಪಡುವ ಕಸರತ್ತು) ಪ್ರದರ್ಶಿಸಿದವು. ಇಂತಹ ನಿಖರವಾದ ವೈಮಾನಿಕ ಕಸರತ್ತುಗಳು ಭಾರತೀಯ ವಾಯುಪಡೆಯ ಕೌಶಲ್ಯ ಮತ್ತು ಅತ್ಯುತ್ತಮ ಸಮನ್ವಯವನ್ನು ಎತ್ತಿ ತೋರಿಸಿದವು. ●



ಕಾಶಿಯಲ್ಲಿ ನಡೆದ ರೋಡ್‌ಶೋ ವೇಳೆ ನನ್ನ ಕುಟುಂಬ ಸದಸ್ಯರಿಂದ ನನಗೆ ದೊರೆತ ಅಪಾರ ಪ್ರೀತಿ ಮತ್ತು ಆಶೀರ್ವಾದಗಳು ನನ್ನ ಮನಸ್ಸನ್ನು ಆಳವಾಗಿ ಸ್ಪರ್ಶಿಸಿದವು.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.



PMO India
@PMOIndia


हमारे किसान, हमारे अन्नदाता, विकसित भारत के सबसे मजबूत स्तंभों में से एक है।

और हमारी सरकार ने हमेशा किसानों के कल्याण को, किसानों को सशक्त करने को प्राथमिकता दी है: PM @narendramodi



Rajnath Singh @rajnathsingh ·

सरदार पटेल ने भारत की एकता और अखंडता को आकार दिया, लेकिन लंबे समय तक उनकी गौरवशाली विरासत को वह सम्मान नहीं मिला जिसके वे हकदार थे। प्रधानमंत्री @narendramodi ने स्टैच्यू ऑफ यूनिटी, राष्ट्रीय एकता दिवस और देशव्यापी आयोजनों के माध्यम से उनकी गौरवशाली विरासत को उचित सम्मान और नई पहचान दिलाई, क्योंकि हमारा मानना है कि सरदार पटेल का सम्मान, भारत का सम्मान है।



Amit Shah
@AmitShah

इसी वर्ष 31 मार्च को देश नक्सलमुक्त हो चुका है और अब 31 दिसंबर 2029 तक नशे से पूरी तरह मुक्त होगा। 'विकसित भारत' का पहला चरण नशामुक्त भारत ही है।



Nitin Gadkari
@nitin_gadkari

A PROUD MOMENT FOR INDIA!🇮🇳

Our para-athletes have scripted history at the Asian Para Games, bringing home a record 114 🥇🥈🥉 and showcasing the extraordinary power of courage, perseverance and sporting talent.

Heartiest congratulations to every athlete who made the Tricolour soar high. Under the leadership of Hon'ble PM Shri @narendramodi Ji, India's commitment to nurturing sporting talent is opening new horizons for our athletes to excel on the global stage.💪🔥



Kiren Rijiju @KirenRijiju ·

आज हमने Defence, Space और Nuclear Energy के संबंधों को प्रगाढ़ करने पर सहमति बनाई है। इन सभी Strategic क्षेत्रों में हम पोलैंड की Companies को भारत के साथ Co-Development और Co-Production करने के लिए आमंत्रित करते हैं: माननीय प्रधानमंत्री श्री @narendramodi जी

#IndiaPolandFriendship



Arjun Ram Meghwal @arjunrammeghwal

देश की 560 से अधिक रियासतों का एकीकरण कर अखंड भारत की नींव मजबूत करने वाले सरदार पटेल जी का अदम्य साहस, दूरदर्शिता एवं राष्ट्रसेवा सदैव प्रेरणास्रोत रहेंगे।

भारत की एकता एवं अखंडता के प्रतीक लौह पुरुष सरदार वल्लभभाई पटेल जी की जयंती 'राष्ट्रीय एकता दिवस' की आ
सभी को हार्दिक शुभकामनाएँ।

#SardarPatelJayanti #NationalUnityDay

Opposition has forgotten its duty, believes in obstruction now: Modi

PM warns of 'intellectual Naxalism' at 151st birth anniversary of Sardar Patel in Ekta Nagar

DILIP SINGH KSHATRIYA
@ Ahmedabad

PRIME Minister Narendra Modi on Saturday sharpened his attack on the Opposition, accusing it of abandoning its constitutional role and turning into an "obstructionist force" against development. He also warned against "intellectual Naxalism" and urged people to protect national unity.

Modi was addressing a gathering at the Parade Ground in Gujarat's Ekta Nagar on the occasion of National Unity Day, marking the 151st birth anniversary of Sardar Vallabhbhai Patel. He administered the unity pledge ahead of the Rashtriya Ekta Parade.

The PM said the Opposition has transformed from "Virodh Paksh" (opposition) into "Avrodh Paksh" (obstruction). While questioning government policies was its responsibility, deliberately stalling development and fuelling divisions could not be defended as democratic dissent, he added.

"It is our misfortune that the Opposition in this country has forgotten its duty," Modi said, alleging that political frustration has made obstructionism the core of its politics. He accused unnamed forces of undermining the Constitution and conspiring to trigger conflict among communities. Referring to alleged meetings abroad and support from "anti-India forces", he asked who was echoing the language of the country's enemies. He did not identify individuals or provide details of the alleged links.

The PM called for vigilance against attempts to damage India's image through social media. Although Naxalism has been eradicated from across the country, he said, "ideological Naxalism" remains a threat. His warning against "dimagi Naxals" extended the government's security narrative beyond armed insurgency to an ideological challenge.

"No matter how dire the circumstances may become, we must not allow the great endeavour of national unity to be halted," the PM said, invoking Patel's role in integrating more than 550 princely states after Independence. Modi described the Statue of Unity as a symbol of the collective contribution that built the nation. He said freedom gave India the power to shape its future, while the Constitution provided direction and ensured accountability to citizens.

Modi said the parade was a celebration of participation and national pride, showcasing the valour of police and security personnel alongside India's heritage and aspirations. He urged every effort to be guided by the goal of building a strong, developed India by 2047. Earlier, Modi paid tribute to Patel at the Statue of Unity, as two Indian Air Force helicopters showered petals on the monument. He inaugurated and laid foundation stones for projects worth more than ₹400 crore.

During his visit, Modi toured Ekta Nagar's Rain Forest and Vaman Vruksh Vatika. Spread across 47,000 square metres near Vaghadiya Checkpost and Nava Gora Bridge, the Rain Forest was developed at a cost of ₹9.49 crore. Its 220-metre glass-deck skywalk is among its attractions. The Prime Minister walked across the bridge and inspected the facility, adding a tourism-development dimension to the day's political messaging.



PM Modi during the 'Rashtriya Ekta Diwas' celebrations in Gujarat's Ekta Nagar | PTI

Artistes from Maoist-hit dists present transformation

Two thousand artistes from 126 districts, which were once under the shadow of Maoist insurgency, presented a story of their transformation from a landscape of fear and violence to Naxal-free India in a performance at the Ekta Diwas Parade in the presence of the PM.

Monitor welfare schemes closely: PM to chief secys

New Delhi: PM Narendra Modi Wednesday called for tighter monitoring of welfare schemes and infrastructure projects, asking chief secretaries to review their implementation with DMs every month.

Chairing the monthly IT-based Pragati meeting, PM is learnt to have raised concerns over delay in land acquisition for projects and slow progress in redevelopment of Ahmedabad railway station. He directed agencies to complete the redevelopment project by Aug 2027 at any cost, an official said.

Modi reviewed infrastructure projects worth over Rs 16,000 crore covering railways, PM Ekta Malls and bulk drug parks across 31 states and Union territories.

He underlined that PM Ekta Malls should provide markets for local products, strengthen livelihoods of artisans and help them expand their enterprises. TNN

Will serve people of India till my last breath: Modi

Seen as riposte to Cong chief Mallikarjun Kharge's 'baap' remark

DILIP SINGH KSHATRIYA
@ Ahmedabad

PRIME Minister Narendra Modi on Friday said that he would serve the people of India till his last breath, in an indirect response to Congress president Mallikarjun Kharge's recent controversial remark that "even Modi's father will have to go".

"*Jeevan ke antim kshan tak janta ki seva main hi juta rahunga* (I will continue to serve the people until my last breath)," Modi said while addressing farmers after inaugurating the Bharat Bovine Breeding and Research Centre at Bhildi town in Gujarat's Banaskantha district.

During the roadshow, Modi's supporters were seen carrying placards that read *Modi kahin nahi jayega* (Modi is not going anywhere) as a direct counter-response to Kharge's comment made at a public rally in Bihar last week, which kicked up a political storm.

In his address, Modi accused the Opposition parties of rejoicing whenever the country faces a crisis. He alleged they tried to spread panic over the availability of fertilisers and cooking gas amid the ongoing conflict in West Asia.

Without taking names, he said: "They sowed fear among farmers, claiming fertilisers would become unavailable. They created artificial queues and created a sense of panic."

After laying the foundation stones for development projects worth ₹14,000 crore, he claimed farmers across the country have received or saved more than ₹50 lakh crore through major government schemes, adding that his government transformed agricultural support through direct transfers, fertiliser subsidies, MSP payments and crop insurance.

Modi said his government has placed farmers, particularly small cultivators, at the centre of its policies. He also took a swipe at previous governments, accusing them of neglecting small farmers.

"Since independence, the needs of these small-scale farmers were never understood, and they were never even consulted," Modi said, adding that farmers cultivating small landholdings account for more than 85% of the country's farming population.

Highlighting the financial assistance extended to farmers, the PM said the agricultural budget has increased fivefold and around ₹4.5 lak hcrore has been transferred directly to farmers' accounts under PM Kisan Samman Nidhi.

On Friday, ₹18,000 crore was released to nearly 10 crore farmers, including over 50 lakh beneficiaries in Gujarat.



Prime Minister Narendra Modi speaks at an event in Banaskantha, Gujarat | PTI

> **There are those who wish to see the country in distress—they actually derive pleasure when the nation faces hardship. Whenever a crisis befalls the country, they find joy in it**
>
> — Narendra Modi, PM

Cabinet clears ₹29,267 cr for container, sports goods mfg

Manas Pimpalkhare
manas.pimpalkhare@htmint.com
NEW DELHI

The Union cabinet has approved ₹20,267 crore in new schemes to expand domestic manufacturing of shipping containers and sports goods, and strengthen rural local governments, as the government seeks to build industrial capacity and improve resource allocation at the grassroots.

The Cabinet also approved a 3% increase in dearness allowance (DA) for central government employees and dearness relief (DR) for pensioners ahead of the festive season, entailing an expenditure of ₹10,080 crore from the public exchequer, information and broadcasting minister Ashwini Vaishnaw said at a briefing on Wednesday. He called the increase "a Diwali gift from the government".



Information and broadcasting minister Ashwini Vaishnaw speaks at a briefing on Union cabinet decisions on Wednesday.

The support will amount to 1,468.500 per 20-foot equivalent units (TEUs), and the goal of this scheme is to get a 15-20% global manufacturing share for India," he said.

Manufacturers will have to source at least 70% of their product locally until FY32. The localization requirement will rise to 90% from FY33, according to the Cabinet note.

Poverty removal not just slogan: PM on WB data

Says Gareebi Hatao Is Govt's Commitment

TIMES NEWS NETWORK

New Delhi: India has recorded one of the fastest poverty declines in the world, with the extreme poverty rate in the country "collapsing" by 90% between 2011 and 2023 to a low of 2.6%, Prime Minister **Narendra Modi** said on Saturday, while asserting that elimination of poverty is a commitment for his govt.

"A historic fall in poverty. A generational rise in opportunity... Gareebi hatao was never a slogan for us. It is a commitment for which we have worked," Modi said in a post on X.

Employment, Modi said, grew by 13.4cr between 2017 & 2023, nearly twice the rise in the working-age population, while India's Gini index fell by over 20% from 29 in 2011 to 23 in 2023, indicating lower income inequality



table is the distribution of income or wealth across a population, with a lower number indicating greater equality.

World Bank's latest Poverty and Equity brief, released last week, said that poverty rate in India, defined at $4.2 a day, will decline to 12.1% in 2026 from 37.7% in 2011, having fallen to 18.1% in 2023. Meanwhile, extreme poverty, defined as spending less than $3 a day, is projected to fall to 5.4% in 2026 from 25.7% in 2011 and 10.9% in 2023.

PM to Meet Niti Aayog Leadership on Nov 5

Modi is likely to hear sectoral priorities and review think tank's work as govt begins shaping the FY28 Budget

Yogima Seth

New Delhi: Prime Minister Narendra Modi is set to meet Niti Aayog's new leadership on November 5, as the government begins shaping priorities for the 2027-28 Budget amid global uncertainty and the need to sustain growth, boost manufacturing and create jobs.

The meeting comes as India seeks to strengthen domestic manufacturing, improve infrastructure and expand employment opportunities amid rising geopolitical uncertainty. The prime minister is the chairman of the Aayog.

Niti Aayog vice chairman Ashok Lahiri, CEO Anurag Jain and members Rajiv Gauba, R Balasubramaniam, Joram Aniya, KV Raju, M Srinivas, Gobardhan Das and Abhay Karandikar are expected to attend, along with other senior officials of the Aayog.

People aware of the development said the prime minister is expected to hear from sectoral experts appointed as members of the Aayog to understand key developments and requirements in their respective sectors, in line with India's vision of Viksit Bharat by 2047.

He is also expected to review the Aayog's work in relation to the country's long-term development objectives. The visit is unusual to meet officials, though the prime minister has regularly visited the Aayog in the past to chair the annual meeting of its governing council or meet economists ahead of the Budget for macroeconomic deliberations.

The interaction is expected to underline the importance of Niti Aayog's role in bringing together policy research, institutional coordination and strategic planning to address India's evolving economic and developmental challenges.

Niti Aayog, which replaced the Planning Commission in January 2015, is the government's principal policy think tank. It works with central ministries, state governments and other stakeholders to develop strategies for inclusive and sustainable development, while promoting cooperative federalism.



> **The meeting comes as India seeks to boost domestic manufacturing, improve infrastructure and expand employment opportunities**

ನ್ಯಾಷನಲ್ ಕೆಡೆಟ್ ಕಾರ್ಪ್ಸ್(ಎನ್‌ಸಿಸಿ) ದಿನ: 22 ನವೆಂಬರ್

ಎನ್‌ಸಿಸಿ: ಯುವಶಕ್ತಿಯ ಸಬಲೀಕರಣ

ಎನ್‌ಸಿಸಿ ಎಂಬುದು ಯುವ ಜನರನ್ನು ಆತ್ಮವಿಶ್ವಾಸವುಳ್ಳ, ಶಿಸ್ತುಬದ್ಧ, ಸಂವೇದನಾಶೀಲ ಮತ್ತು ರಾಷ್ಟ್ರಕ್ಕೆ ಸಮರ್ಪಿತರಾದ ನಾಗರಿಕರನ್ನಾಗಿ ರೂಪಿಸುವ ಒಂದು ವೇದಿಕೆಯಾಗಿದೆ. ದೇಶಾದ್ಯಂತ ಎನ್‌ಸಿಸಿ ಜಾಲ ಬಲಪಡಿಸುವ ಪ್ರಯತ್ನದ ಭಾಗವಾಗಿ, ಗಡಿ ಪ್ರದೇಶಗಳಲ್ಲಿ ವಾಸಿಸುವ ಹೆಚ್ಚಿನ ಸಂಖ್ಯೆಯ ಯುವ ಜನರನ್ನು ಎನ್‌ಸಿಸಿ ವ್ಯಾಪ್ತಿಗೆ ತರುವ ಅಭಿಯಾನ ನಡೆಯುತ್ತಿದೆ. ಭಾರತದ ಯುವ ಜನರಲ್ಲಿ ಆತ್ಮವಿಶ್ವಾಸ, ಸಾಮರ್ಥ್ಯ ಮತ್ತು ಸಾಮಾಜಿಕ ಬದ್ಧತೆಯುಳ್ಳ ನಾಗರಿಕರಾಗಿಸಲು ಸ್ಫೂರ್ತಿ ತುಂಬುವ ಸಂಸ್ಥೆಯೇ ಎನ್‌ಸಿಸಿ ಆಗಿದೆ.

“ಎನ್‌ಸಿಸಿ ನನ್ನ ಶಾಲಾ ಮತ್ತು ಕಾಲೇಜು ದಿನಗಳ ನೆನಪುಗಳನ್ನು ಮರುಕಳಿಸುವಂತೆ ಮಾಡುತ್ತದೆ. ನಾನು ಸಹ ಎನ್‌ಸಿಸಿ ಕೆಡೆಟ್ ಆಗಿದ್ದೆ, ಆ ಮೂಲಕ ನಾನು ಪಡೆದ ಅನುಭವ ಅತ್ಯಮೂಲ್ಯವಾದುದು. ಎನ್‌ಸಿಸಿ ಯುವಜನರಲ್ಲಿ ಶಿಸ್ತು, ನಾಯಕತ್ವ ಮತ್ತು ಸೇವಾ ಮನೋಭಾವ ಬೆಳೆಸುತ್ತದೆ.

ನರೇಂದ್ರ ಮೋದಿ, ಪ್ರಧಾನಮಂತ್ರಿ

ಎನ್‌ಸಿಸಿಯಲ್ಲಿ 20 ಲಕ್ಷಕ್ಕೂ ಹೆಚ್ಚು ಕೆಡೆಟ್‌ಗಳು

- 1948ರಲ್ಲಿ 20,000 ಕೆಡೆಟ್‌ಗಳೊಂದಿಗೆ ಸ್ಥಾಪನೆಯಾದ ಎನ್‌ಸಿಸಿ, ಇಂದು 20 ಲಕ್ಷಕ್ಕೂ ಹೆಚ್ಚು ಕೆಡೆಟ್‌ಗಳನ್ನು ಹೊಂದಿರುವ, ಸಮವಸ್ತ್ರ ಧರಿಸುವ ವಿಶ್ವದ ಅತಿದೊಡ್ಡ ಯುವ ಸಂಘಟನೆಯಾಗಿ ಬೆಳೆದಿದೆ.
- 2014 ಮತ್ತು 2025ರ ನಡುವೆ, ಈ ಸಂಘಟನೆಯ ಬಲವು 6 ಲಕ್ಷ ಕೆಡೆಟ್‌ಗಳಷ್ಟು ಹೆಚ್ಚಾಗಿದೆ. ಪ್ರಸ್ತುತ, ಇದು ದೇಶಾದ್ಯಂತ 750ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ.



NEW INDIA SAMACHAR FORTNIGHTLY

RNI NO.: DELENG/2020/78811 NOVEMBER 16-30, 2026
RNI Registered No DELENG/2020/78811 (Publishing Date: November 4, 2026 Pages: 46)

EDITOR IN CHIEF
Dhirendra Ojha
Principal Director General
Press Information Bureau, New Delhi

PUBLISHER:
Kanchan Prasad
Director General, on behalf of
Central Bureau Of Communication

PUBLISHED FROM:
Room No–278, Central Bureau Of Communication, 2nd Floor, Soochna Bhawan, New Delhi -110003